ಶುಕ್ರವಾರ, ಆಗಸ್ಟ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 223 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಹಳೇ ನೆನಪಿನ ದಾರದಲ್ಲಿ ಹಾರಲು ಸಜ್ಜಾದ ಹೊಸ ಗಾಳಿಪಟ...

ಆಳ-ಅಗಲ
ರೈತರ ಆತ್ಮಹತ್ಯೆಗಿಲ್ಲ ಕಡಿವಾಣ

ಚುನಾವಣೆಗೆ ಕಣ್ಣು: ಕಾಮಗಾರಿಗೆ ಒತ್ತು 4
ಸಿ.ಎಂ ಬದಲಾವಣೆ ಮಾತು ನಿರಾಧಾರ: ಬೊಮ್ಮಾಯಿ 4A

ಸೆನ್ಸೆಕ್ಸ್	ನಿಫ್ಟಿ	₹/$
59,332 ▲	17,659 ▲	79.62 ▼

ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠದ ಮಹತ್ವದ ಆದೇಶ

ಎಸಿಬಿ ರದ್ದು: ಲೋಕಾಯುಕ್ತ ಸಿಂಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ನೌಕರರ ವಿರುದ್ಧದ ಭ್ರಷ್ಟಾಚಾರ ಆರೋಪ ಪ್ರಕರಣಗಳ ತನಿಖೆ ನಡೆಸಲು 2016ರಲ್ಲಿ ರಚಿಸಲಾಗಿದ್ದ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿರುವ ಹೈಕೋರ್ಟ್, ‘ಎಸಿಬಿ ವ್ಯಾಪ್ತಿಯಲ್ಲಿ ಸದ್ಯ ತನಿಖೆಗೆ ಒಳಪಟ್ಟಿರುವ ಎಲ್ಲ ಪ್ರಕರಣಗಳನ್ನೂ ಲೋಕಾಯುಕ್ತಕ್ಕೆ ವರ್ಗಾಯಿಸಬೇಕು’ ಎಂದು ಮಹತ್ವದ ತೀರ್ಪು ನೀಡಿದೆ.

ರಾಜ್ಯ ಸರ್ಕಾರ 2016ರ ಮಾರ್ಚ್ 19ರಂದು ಎಸಿಬಿ ರಚನೆ ಮಾಡಿ ಹೊರಡಿಸಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಸಮಾಜ ಪರಿವರ್ತನಾ ಸಮುದಾಯ, ಬೆಂಗಳೂರು ವಕೀಲರ ಸಂಘ ಮತ್ತು ವಕೀಲ ಬಿ.ಜಿ. ಚಿದಾನಂದ ಅರಸ್ ಸೇರಿದಂತೆ 15 ಜನರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ಪ್ರಕಟಿಸಿದೆ.

4B ಪುಟ ನೋಡಿ
ಇನ್ನೊಂದು ಸುದ್ದಿ 5B

ಜನರ ಬೇಡಿಕೆಗೆ ಸ್ಪಂದಿಸಿದ ತೀರ್ಪು

ಜನರ ಬೇಡಿಕೆಗೆ ಸ್ಪಂದಿಸಿದ ಅತ್ಯುತ್ತಮ ತೀರ್ಪು ಇದಾಗಿದೆ. ಪ್ರಾಮಾಣಿಕತೆಯಿಂದ ಜಾರಿಗೆ ತಂದರೆ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತೆ ಆಗಲಿದೆ. ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರಬೇಕು, ಪ್ರಾಮಾಣಿಕ ಅಧಿಕಾರಿಗಳನ್ನು ನಿಯೋಜಿಸಬೇಕು. ಲೋಕಾಯುಕ್ತ ಸಂಸ್ಥೆಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕು. ಆಗ ಭ್ರಷ್ಟಾಚಾರ ಕಡಿಮೆ ಮಾಡುವ ಜವಾಬ್ದಾರಿ ಲೋಕಾಯುಕ್ತ ಸಂಸ್ಥೆಯ ಹೆಗಲಿಗೆ ಬೀಳಲಿದೆ. ಇವೆಲ್ಲವನ್ನೂ ಈ ಸರ್ಕಾರ ಮಾಡಲಿದೆಯೇ ಎಂಬ ಸಂಶಯವೂ ನನ್ನನ್ನು ಕಾಡುತ್ತಿದೆ.

ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ, ನಿವೃತ್ತ ಲೋಕಾಯುಕ್ತ

ನ್ಯಾಯಮೂರ್ತಿಗಳು ಪ್ರಶಂಸೆಗೆ ಅರ್ಹರು

ಹೈಕೋರ್ಟ್ ಆದೇಶ ಸ್ವಾಗತಾರ್ಹ, ಸಮಾಜದ ಒಳಿತಿಗಾಗಿ ಈ ಆದೇಶ ಹೊರಡಿಸಿದ ನ್ಯಾಯಮೂರ್ತಿಗಳು ಪ್ರಶಂಸೆಗೆ ಅರ್ಹರು. ಸಮಾಜಕ್ಕಾಗಿ ಕೆಲಸ ಮಾಡುವ ಸಂಸ್ಥೆಗೆ ಸರಿಯಾದ ಅಧಿಕಾರ ಇರಬೇಕಾಗುತ್ತದೆ. ಅಧಿಕಾರ ಪುನಃ ಬಂದರೆ ಸಮಾಜ ತಂತಾನೆ ಸುಧಾರಣೆ ಆಗಲಿದೆ. ಅಧಿಕಾರದ ಜತೆಗೆ ಪ್ರಾಮಾಣಿಕ ಅಧಿಕಾರಿಗಳನ್ನು ನೀಡಬೇಕಾಗುತ್ತದೆ. ಯಾವ ಅಧಿಕಾರಿ ಬೇಕು ಎಂಬುದನ್ನು ಲೋಕಾಯುಕ್ತರನ್ನು ಕೇಳಿ ನಿಯೋಜಿಸುವುದು ಸೂಕ್ತ. ಭ್ರಷ್ಟಾಚಾರ ಇಂದು ಆಳವಾಗಿ ಬೇರೂರಿದ್ದು, ಅದನ್ನು ಕಿತ್ತೊಗೆಯಲು ಲೋಕಾಯುಕ್ತದ ಜತೆಗೆ ಜನರ ಸಹಕಾರವೂ ಮುಖ್ಯ. ಲಂಚ ಕೊಡುವುದನ್ನು ನಿಲ್ಲಿಸಬೇಕು, ಕೇಳಿದವರ ವಿರುದ್ಧ ದೂರು ಕೊಡಲು ಮುಂದಾಗಬೇಕು.

ನ್ಯಾಯಮೂರ್ತಿ ಪಿ.ವಿಶ್ವನಾಥಶೆಟ್ಟಿ, ನಿವೃತ್ತ ಲೋಕಾಯುಕ್ತ

ತಜ್ಞರ ಜತೆ ಚರ್ಚಿಸಿ ಕ್ರಮ- ಬೊಮ್ಮಾಯಿ

ಮಂಡ್ಯ: ‘ಎಸಿಬಿ ರದ್ದುಗೊಳಿಸಿರುವ ಹೈಕೋರ್ಟ್ ತೀರ್ಪಿನ ಕುರಿತು ಕಾನೂನು ತಜ್ಞರ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ ಅಡ್ವೋಕೇಟ್ ಜನರಲ್ ಜತೆ ಚರ್ಚೆ ನಡೆಸಿ, ತೀರ್ಪಿನ ಬಗ್ಗೆ ಸಮಗ್ರ ವಿವರ ಪಡೆದುಕೊಳ್ಳುತ್ತೇನೆ. ತೀರ್ಪಿನ ವಿವರಗಳನ್ನು ತಿಳಿದುಕೊಳ್ಳದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಹೇಳಿದರು.

ತೀರ್ಪು ಗೌರವಿಸುವೆ: ಸಿದ್ದರಾಮಯ್ಯ

ಗೌರಿಬಿದನೂರು: ‘ಹೈಕೋರ್ಟ್ ಎಸಿಬಿ ರದ್ದುಗೊಳಿಸಿರುವ ಕುರಿತ ಆದೇಶವನ್ನು ನಾನು ಇನ್ನೂ ನೋಡಿಲ್ಲ. ಆದೇಶ ನೋಡಿದ ನಂತರ ಪೂರ್ಣ ಪ್ರಮಾಣದಲ್ಲಿ ಪ್ರತಿಕ್ರಿಯಿಸುತ್ತೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲೋಕಾಯುಕ್ತ ಬೇರ್ಪಡಿಸಿ ಎಸಿಬಿ ರಚಿಸಿದ್ದೆವು. ಹೈಕೋರ್ಟ್ ತೀರ್ಪನ್ನು ಗೌರವಿಸುತ್ತೇವೆ. ಎಸಿಬಿ ಸ್ವತಂತ್ರ ತನಿಖಾ ಸಂಸ್ಥೆ ಆಗಿತ್ತು. ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಅನೇಕ ರಾಜ್ಯಗಳಲ್ಲಿ ಎಸಿಬಿ ಇದೆ. ಎಸಿಬಿ ಲೋಕಾಯುಕ್ತದಲ್ಲಿ ಇರಬೇಕು. ಸ್ವತಂತ್ರ ಅಸ್ತಿತ್ವ ಬೇಡ ಎಂದು ಈಗ ಹೈಕೋರ್ಟ್ ತೀರ್ಮಾನಿಸಿದೆ’ ಎಂದರು.

ವಿಧಾನಸೌಧ ಮೊದಲು ಸ್ವಚ್ಛ ಮಾಡಲಿ: ಎಚ್‌ಡಿಕೆ

ಬೆಂಗಳೂರು: ಎಸಿಬಿ ರದ್ದು ಮಾಡಿ, ಲೋಕಾಯುಕ್ತದ ಮೂಲಕ ಭ್ರಷ್ಟಾಚಾರ ನಿಲ್ಲಿಸುತ್ತಾರೆ ಎಂಬ ನಂಬಿಕೆ ಇಲ್ಲ. ಮೊದಲು ವಿಧಾನಸೌಧದ 3ನೇ ಮಹಡಿ ಸ್ವಚ್ಛಗೊಳಿಸಲಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಖ್ಯಾತ ಸುಗಮ ಸಂಗೀತ ಗಾಯಕ ಶಿವಮೊಗ್ಗ ಸುಬ್ಬಣ್ಣ ಇನ್ನಿಲ್ಲ

ಪ್ರಜಾವಾಣಿ ವಾರ್ತೆ



1938-2022

ಬೆಂಗಳೂರು: ಕರ್ನಾಟಕ ಸುಗಮ ಸಂಗೀತದ ಪ್ರಸಿದ್ಧ ಗಾಯಕರಾಗಿದ್ದ, ತಮ್ಮ ಮೋಹಕ ಕಂಠದಿಂದ ನಾಡಿನ ಜನರ ಮನಸೂರೆಗೊಂಡಿದ್ದ ಶಿವಮೊಗ್ಗ ಸುಬ್ಬಣ್ಣ (83) ಅವರು ಹೃದಯಾಘಾತದಿಂದ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

ಅವರನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಅವರಿಗೆ ಮಕ್ಕಳಾದ ಶ್ರೀರಂಗ ಮತ್ತು ‘ದ ಹಿಂದೂ’ ಪತ್ರಿಕೆಯ ಸಹಾಯಕ ಸಂಪಾದಕಿ ಬಾಗೇಶ್ರೀ ಹಾಗೂ ಸೊಸೆ ಅರ್ಚನಾ ಉಡುಪ ಇದ್ದಾರೆ.

ಸುಬ್ಬಣ್ಣ ಅವರು ಶಿವಮೊಗ್ಗ ಜಿಲ್ಲೆಯ ನಗರ ಎಂಬ ಸಣ್ಣ ಊರಿನಲ್ಲಿ 1938ರ ಡಿಸೆಂಬರ್ 14ರಂದು ಜನಿಸಿದರು. ತಂದೆ ಗಣೇಶರಾಯರು, ತಾಯಿ ರಂಗನಾಯಕಿ. ತಾತ ಶಾಮಣ್ಣ, ನಂತರ ಎಂ. ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದರು. ಕವಿಗೀತೆಗಳನ್ನು ಹಾಡುವುದರತ್ತ ಆಕರ್ಷಿತರಾದ ಸುಬ್ಬಣ್ಣ ಅವರು, ಕುವೆಂಪು, ಬೇಂದ್ರೆ ಹಾಗೂ ನಾಡಿನ ಇನ್ನಿತರ ಶ್ರೇಷ್ಠ ಕವಿಗಳ ಕವಿತೆಗಳನ್ನು ರಾಗ ಸಂಯೋಜಿಸಿ ಹಾಡುವುದರ ಮೂಲಕ ಮನೆ ಮಾತಾಗಿದ್ದರು.

ಬಿ.ಎ, ಬಿ.ಕಾಂ ಮತ್ತು ಎಲ್‌ಎಲ್‌ಬಿ ಪದವೀಧರರಾದ ಶಿವಮೊಗ್ಗ ಸುಬ್ಬಣ್ಣ ಅವರು 1982ರಲ್ಲಿ ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು ನೆಲೆಸಿದ್ದರು. 1979ರಲ್ಲಿ ‘ಕಾಡುಕುದುರೆ’ ಚಲನಚಿತ್ರದಲ್ಲಿ ಅವರು ಹಾಡಿದ ‘ಕಾಡು ಕುದುರೆ ಓಡಿ ಬಂದಿತ್ತಾ’ ಹಾಡಿಗೆ ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ ರಜತ ಕಮಲ ರಾಷ್ಟ್ರ ಪ್ರಶಸ್ತಿ ಪಡೆದು, ಆ ಮೂಲಕ ಈ ಪ್ರಶಸ್ತಿಗೆ ಭಾಜನರಾದ ಮೊದಲ ಕನ್ನಡಿಗ ಎನಿಸಿಕೊಂಡಿದ್ದರು. ರಾಷ್ಟ್ರವಲ್ಲದೇ ಅಮೆರಿಕ, ಸಿಂಗಪುರ ಮೊದಲಾದ ಕಡೆ ಸುಗಮ ಸಂಗೀತದ ಕಂಪು ಹರಡಿದ್ದರು. ಅವರ ನೂರಾರು ಧ್ವನಿಸುರುಳಿಗಳು ನಾಡಿನ ಮೂಲೆಮೂಲೆಗೂ ತಲುಪಿವೆ.

ಎರಡು ಬಾರಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಕೆಲಸ ನಿರ್ವಹಿಸಿರುವ ಸುಬ್ಬಣ್ಣ ಅವರು, ಆಕಾಶವಾಣಿ ನಡೆಸುವ ವಾರ್ಷಿಕ ಸಂಗೀತ ಸ್ಪರ್ಧೆಗಳ ತೀರ್ಪುಗಾರರಾಗಿಯೂ ಕಾರ್ಯ ನಿರ್ವಹಿಸಿದ್ದರು. ರಾಜ್ಯ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ಹಲವು ಪುರಸ್ಕಾರಕ್ಕೆ ಭಾಜನ

ಆಕಾಶವಾಣಿ ಮತ್ತು ದೂರದರ್ಶನದ ‘ಎ’ ಟಾಪ್ ಶ್ರೇಣಿಯ ಗಾಯಕರಾಗಿದ್ದರು. 1985ರಲ್ಲಿ ರಾಜ್ಯೋತ್ಸವ ಪುರಸ್ಕಾರ, 1988ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪುರಸ್ಕಾರ, 1999ರಲ್ಲಿ ಸಂತ ಶಿಶುನಾಳ ಷರೀಫ ಪ್ರಶಸ್ತಿ, 2008ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, 2003ರಲ್ಲಿ ಬೆಂಗಳೂರು ಗಾಯನ ಸಮಾಜದಿಂದ ‘ವರ್ಷದ ಕಲಾವಿದ’ ಅಲ್ಲದೇ ಇನ್ನೂ ಅನೇಕ ಪ್ರಶಸ್ತಿ, ಪುರಸ್ಕಾರಗಳು ಅವರಿಗೆ ದೊರೆತಿವೆ.

ಉಚಿತ ಕೊಡುಗೆ, ಅಭಿವೃದ್ಧಿ ಯೋಜನೆ ಭಿನ್ನ: ‘ಸುಪ್ರೀಂ’

ನವದೆಹಲಿ: ಸರ್ಕಾರವು ನೀಡುವ ಉಚಿತ ಕೊಡುಗೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ವ್ಯತ್ಯಾಸ ಇದೆ. ಉಚಿತ ಕೊಡುಗೆಗಳಿಂದಾಗಿ ಅರ್ಥವ್ಯವಸ್ಥೆಯು ಕಳೆದುಕೊಳ್ಳುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗುವ ಹಣದ ನಡುವೆ ಸಮತೋಲನ ಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. 5B

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ ಯುವ ಮುಖಂಡ ಪ್ರವೀಣ್ ಹತ್ಯೆ ಪ್ರಕರಣ

ಪ್ರಮುಖ 3 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಶಿಯಾಬುದ್ದೀನ್

ರಿಯಾಝ್

ಬಶೀರ್

ಮಂಗಳೂರು: ಬಿಜೆಪಿ ಯುವ ಮುಖಂಡ ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ನೇರ ಭಾಗಿಯಾದ ಮೂವರು ಆರೋಪಿಗಳನ್ನು ತಲಪಾಡಿ ಚೆಕ್‌ಪೋಸ್ಟ್ ಬಳಿ ಗುರುವಾರ ಬೆಳಿಗ್ಗೆ ಬಂಧಿಸಲಾಗಿದೆ ಎಂದು ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಸುಳ್ಯದ ಶಿಯಾಬುದ್ದೀನ್ ಅಲಿ (33), ರಿಯಾಝ್ ಅಂಕತಡ್ಕ (27), ಸುಬ್ರಹ್ಮಣ್ಯ ಎಲಿಮಲೆಯ ಬಶೀರ್ (29) ಬಂಧಿತರು. ಶಿಯಾಬುದ್ದೀನ್ ಕೋಳಿ ಪೂರೈಕೆದಾರನಾಗಿ, ರಿಯಾಝ್ ಚಿಕನ್‌ ಅಂಗಡಿಗಳಿಗೆ ಕೋಳಿ ಪೂರೈಕೆದಾರನಾಗಿ ಮತ್ತು ಬಶೀರ್ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಪೊಲೀಸ್ ಕಸ್ಟಡಿಗೆ ಪಡೆದು, ಹೆಚ್ಚಿನ ವಿಚಾರಣೆ ನಡೆಸಲಾಗುವುದು’ ಎಂದರು.

‘ಪ್ರಕರಣದ ಸಂಬಂಧ ಈ ಹಿಂದೆ ಏಳು ಜನರನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿಗಳ ಬಗ್ಗೆ ಖಚಿತ ಮಾಹಿತಿ ಇದ್ದರೂ, ಅವರು ಆಗಾಗ ಸ್ಥಳ ಬದಲಾಯಿಸುತ್ತಿದ್ದ ಕಾರಣ ಪತ್ತೆಗೆ ವಿಳಂಬವಾಯಿತು. ಜುಲೈ 26ರಂದು ಪ್ರವೀಣ್ ಹತ್ಯೆ ಮಾಡಿದ ನಂತರ ಆರೋಪಿಗಳು ಕಾಸರಗೋಡಿನ ಬೇಕಲ್ ರಸ್ತೆಯ ಮಸೀದಿಯೊಂದಕ್ಕೆ ತೆರಳಿದ್ದರು. ಈವರೆಗೆ ಆರೋಪಿಗಳು ಎಲ್ಲಿದ್ದರು, ಅವರಿಗೆ ಆಶ್ರಯ ಕೊಟ್ಟವರು ಯಾರು, ಹತ್ಯೆಗೆ ಬಳಸಿದ ಆಯುಧ ಎಲ್ಲಿ ಬಚ್ಚಿಡಲಾಗಿದೆ, ಯಾಕಾಗಿ ಪ್ರವೀಣ್ ಅವರನ್ನೇ ಹತ್ಯೆ ಮಾಡಲಾಯಿತು ಇಂತಹ ಅನೇಕ ಸಂಗತಿಗಳ ಬಗ್ಗೆ ಕೂಲಂಕಷ ವಿಚಾರಣೆ ನಡೆಸಿ, ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸಲಾಗುತ್ತದೆ. ಪ್ರಕರಣ ಭೇದಿಸಿದ ದಕ್ಷಿಣ ಕನ್ನಡ ಎಸ್ಪಿ ಋಷಿಕೇಶ್ ಸೋನಾವಣೆ ನೇತೃತ್ವದ ತಂಡಕ್ಕೆ ಬಹುಮಾನ ನೀಡುತ್ತೇವೆ’ ಎಂದರು.

‘ಈ ಹಿಂದೆ ಬಂಧಿತನಾಗಿರುವ ಆರೋಪಿ ಶಫೀಕ್ ತಂದೆ ಇಬ್ರಾಹಿಂ ಮೂರು ತಿಂಗಳುಗಳಿಂದ ಪ್ರವೀಣ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಶಫೀಕ್‌ಗೆ ಪ್ರವೀಣ್ ಬಗ್ಗೆ ಚೆನ್ನಾಗಿ ತಿಳಿದಿತ್ತು. ಬಂಧಿತ ಆರೋಪಿಗಳಿಗೆ ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳ ಸಂಪರ್ಕ ಇರುವ ಶಂಕೆ ಇದ್ದು, ತನಿಖೆಯ ನಂತರ ಸ್ಪಷ್ಟ ಮಾಹಿತಿ ಲಭ್ಯವಾಗಲಿದೆ. ಹತ್ಯೆಗೆ ಆರೋಪಿಗಳು ಐದು ದ್ವಿಚಕ್ರ ವಾಹನಗಳು, ಒಂದು ಕಾರನ್ನು ಬಳಸಿದ್ದು, ಶೀಘ್ರ ಅದನ್ನು ವಶಕ್ಕೆ ಪಡೆಯಲಾಗುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಪಶ್ಚಿಮ ವಲಯದ ಐಜಿಪಿ ದೇವಜ್ಯೋತಿ ರೇ, ಎಸ್ಪಿ ಋಷಿಕೇಶ್ ಸೋನಾವಣೆ ಇದ್ದರು.

ಮನವಿ: ‘ಆರೋಪಿಗಳನ್ನು ಬಂಧಿಸಿದ್ದಕ್ಕೆ ಪೊಲೀಸರಿಗೆ ಧನ್ಯವಾದಗಳು. ಅವರಿಗೆ ಜಾಮೀನು ನೀಡಬಾರದು ಮತ್ತು ಯಾವ ವಕೀಲರೂ ವಾದಿಸಬಾರದು’ ಎಂದು ಪ್ರವೀಣ್ ತಾಯಿ ರತ್ನಾವತಿ ವಿನಂತಿಸಿದ್ದಾರೆ.

₹ 30 ಲಕ್ಷ ವಿತರಣೆ

ದುಷ್ಕರ್ಮಿಗಳಿಂದ ಹತ್ಯೆಗೀಡಾದ ಸುರತ್ಕಲ್ ಕಾಟಿಪಳ್ಳದ ಮಹಮ್ಮದ್ ಫಾಝಿಲ್ ಮತ್ತು ಸುಳ್ಯದ ಬೆಳ್ಳಾರೆಯ ಮಸೂದ್ ಅವರ ಕುಟುಂಬಕ್ಕೆ ಮಂಗಳೂರಿನ ಮುಸ್ಲಿಂ ಸೆಂಟ್ರಲ್ ಕಮಿಟಿ ವತಿಯಿಂದ ತಲಾ ₹ 30 ಲಕ್ಷವನ್ನು ಗುರುವಾರ ವಿತರಿಸಲಾಯಿತು.

ಸಚಿವರಿಂದ ರಾಷ್ಟ್ರಧ್ವಜಕ್ಕೆ ಅಪಮಾನ: ಆರೋಪ

ತಿಪಟೂರು: ನಗರದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ತಿರಂಗಾ ಯಾತ್ರೆ ನಡೆಸುವ ಸಮಯದಲ್ಲಿ ರಾಷ್ಟ್ರಧ್ವಜಕ್ಕಿಂತ ಎತ್ತರದಲ್ಲಿ ಎಬಿವಿಪಿ ಧ್ವಜ ಹಿಡಿದು ರಾಷ್ಟ್ರಕ್ಕೆ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಘಟಕವು ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದೆ.

ಸಚಿವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಯುವ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ಬಿ.ವಿ. ಹರಿಪ್ರಸಾದ್ ಒತ್ತಾಯಿಸಿದ್ದಾರೆ. ಎಬಿವಿಪಿ ಹಮ್ಮಿಕೊಂಡಿದ್ದ ಯಾತ್ರೆಯಲ್ಲಿ ಸಚಿವರು, ಶಾಲಾ ಮಕ್ಕಳು, ಶಿಕ್ಷಕರು ಇದ್ದರು.

ತಿಪಟೂರಿನಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ರಾಷ್ಟ್ರಧ್ವಜ ಹಿಡಿದು ಹೆಜ್ಜೆ ಹಾಕಿದರು. ರಾಷ್ಟ್ರಧ್ವಜದ ಮೇಲೆ ಎಬಿವಿಪಿ ಧ್ವಜ ಹಾರಾಡುತ್ತಿರುವುದು

ಕನಕಗಿರಿ: ಗುಂಪು ಘರ್ಷಣೆ– ಇಬ್ಬರ ಸಾವು

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಹುಲಿಹೈದರ ಗ್ರಾಮದಲ್ಲಿ ಗುರುವಾರ ನಾಯಕ ಮತ್ತು ಮುಸ್ಲಿಂ ಸಮುದಾಯದ ನಡುವೆ ನಡೆದ ಘರ್ಷಣೆಯಲ್ಲಿ ಇಬ್ಬರು ಮೃತಪಟ್ಟು ಎಂಟಕ್ಕೂ ಹೆಚ್ಚು ಮಂದಿ ಗಾಯ ಗೊಂಡಿದ್ದಾರೆ. ಘರ್ಷಣೆ ತಾರಕಕ್ಕೇರಿದ್ದರಿಂದ ಇದೇ 20ರವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

‘ಹುಲಿಹೈದರ ಗ್ರಾಮದ ಯಂಕಪ್ಪ ತಳವಾರ (44) ಮತ್ತು ಪಾಷವಲಿ ಮಾಳಿಗದ್ದಿ (27) ಮೃತರು. ಧರ್ಮಣ್ಣ ನಾಗೇಂದ್ರಪ್ಪ ಎಂಬುವರಿಗೆ ಗಾಯಗಳಾಗಿವೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಯಂಕಪ್ಪ ತಳವಾರ

ಪಾಷವಲಿ

‘ಗ್ರಾಮದ ಬಸ್ ನಿಲ್ದಾಣದ ಬಳಿ ಪಾಷವಲಿ ಹೂ, ಹಣ್ಣು ತರಲು ಹೋದಾಗ 28 ಮಂದಿ ಏಕಾಏಕಿ ದಾಳಿ ಮಾಡಿ ಕಟ್ಟಿಗೆ, ರಾಡು ಮತ್ತು ಕಲ್ಲಿನಿಂದ ಹಲ್ಲೆ ಮಾಡಿದರು’ ಎಂದು ಪಾಷವಲಿ ಸಹೋದರ ಖಾದರಬಾಷಾ ಪೊಲೀಸರಿಗೆ ದೂರು ನೀಡಿದ್ದಾರೆ.

‘ವಾಲ್ಮೀಕಿ ವೃತ್ತದ ಬಳಿ ಯಂಕಪ್ಪ ಮನೆಯಲ್ಲಿದ್ದಾಗ ಗುಂಪು ಕಟ್ಟಿಕೊಂಡು ಬಂದ 30 ಜನರು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ’ ಎಂದು ಮೃತನ ಪತ್ನಿ ಹಂಪಮ್ಮ ತಳವಾರ ಪ್ರತಿದೂರಿನಲ್ಲಿ ತಿಳಿಸಿದ್ದಾರೆ. ಒಟ್ಟು 58 ಜನರ ವಿರುದ್ಧ ಕನಕಗಿರಿ ಠಾಣೆಯಲ್ಲಿ ದೂರು ದಾಖಲಾಗಿದೆ.

ವೈಯಕ್ತಿಕ ಹಳೆ ದ್ವೇಷದ ಕಾರಣಕ್ಕೆ ಗಲಾಟೆಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ತನಿಖೆ ಬಳಿಕ ಸತ್ಯಾಂಶ ಗೊತ್ತಾಗಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ತಿಳಿಸಿದ್ದಾರೆ.

‘ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆ ಸಂಬಂಧಿಸಿದಂತೆ ನಾಯಕ ಮತ್ತು ಮುಸ್ಲಿಂ ಸಮುದಾಯದ ನಡುವೆ ನಡೆದ ಘರ್ಷಣೆ ತಾರಕಕ್ಕೇರಿದೆ. ಆದ್ದರಿಂದ ಇದೇ 20ರವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ‘ ಎಂದು ಕೊಪ್ಪಳ ಉಪ ವಿಭಾಗಾಧಿಕಾರಿ ಬಸವಣ್ಣಪ್ಪ ಕಲಶೆಟ್ಟಿ ತಿಳಿಸಿದ್ದಾರೆ.

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, 3ನೇ ಮಹಡಿ, ವಿಟಿಕೆ-2 "ಎ' ಬ್ಲಾಕ್, ಕೋರಮಂಗಲ, ಬೆಂಗಳೂರು - 560047 ರವರ ಕಛೇರಿ.
ದೂರವಾಣಿ: 080-25704962, E-mail: ctovig17.bng@ka.gov.in

ಸಂ: ವಾತೆಜಂಆ/ವಾತೆಅ/ಜಾ-17/ಎಲ್‌ಕೆಎಲ್/ಜಿಸಿಇ-21/2022-23 ದಿ: 10-08-2022

-:ಹರಾಜು ಪ್ರಕಟಣೆ:-

ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)-17, ಬೆಂಗಳೂರು, ಇವರು ದಿನಾಂಕ: 30-06-2022 ರಂದು **ಮೊಬೈಲ್ ಬಿಡಿಭಾಗಗಳು ಹಾಗೂ ಇತರೆ ಸರಕನ್ನು** - ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಕಲಂ 129ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ: 22-08-2022 ರಂದು ಬೆಳಿಗ್ಗೆ 11.00 ಗಂಟೆಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಕೋರಮಂಗಲ, ಬೆಂಗಳೂರು - 560047 ರವರ ಕಛೇರಿಯಲ್ಲಿ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ http://ctax.kar.nic.in/publicauction.asp / https://gst.kar.nic.in/TenderAuction2021.aspxಗೆ ಭೇಟಿ ನೀಡಿ

1. ಮೊಹರು ಮಾಡಿದ ಕವರ್‌ನಲ್ಲಿ ಬಿಡ್ ಸಲ್ಲಿಕೆ ದಿನಾಂಕ 16-08-2022 ರಿಂದ 20-08-2022 ರವರೆಗೆ ಕಛೇರಿ ಸಮಯದಲ್ಲಿ **2.** ಮೊಹರು ಮಾಡಿದ ಕವರ್‌ನಲ್ಲಿ ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 20-08-2022 ಮಧ್ಯಾಹ್ನ 3.30 ಕ್ಕೆ ಅಥವಾ ಮೊದಲು **3.** ಇಎಂಡಿ: ರೂ. 1,30,000/- **4.** ಮೊಹರು ಮಾಡಿದ ಬಿಡ್ ಕವರ್ ತೆರೆಯುವ ದಿನಾಂಕ ಮತ್ತು ಹರಾಜು ಸ್ಥಳ: ದಿನಾಂಕ: 22-08-2022 ಬೆಳಗ್ಗೆ 11:00 ಕ್ಕೆ, ಮೇಲಿನ ವಿಳಾಸದಲ್ಲಿ.

ಸಹಿ/-
ವಾಣಿಜ್ಯ ತೆರಿಗೆ ಅಧಿಕಾರಿ(ಜಾಗೃತಿ)-17, ಬೆಂಗಳೂರು

DIPR/DDU/1755/G.FMC/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

STATE BANK OF INDIA
SMEC, BANASAWADI (21014)

E-AUCTION OF MACHINERIES LYING AT M/S L AND L Traders, Sy No. 33/7, AMRUTHAHALLI, BANGALORE-560092. E-AUCTION DATE- 20.08.2022. CONTACT: Mr. Mohan Kumar- 7338004504

Sl No	AGREEMENT NO.	NAME	MODEL	MFG. YEAR	RESERVE PRICE (in Rs.)
1	39374268771, 39374277854, 39891230247 (Amruthahalli-11821)	M/S L AND L TRADERS	CASHEW PROCESSING MACHINES	2020	1063000

E- auction of machineries are being held on **"AS IS WHERE IS BASIS", "AS IS WHAT IS BASIS"** and **"WHATEVER THERE IS BASIS"** and the auction will be conducted **"ONLINE"**. The auction will be conducted through the Bank's approved service provider **M/S C1 INDIA,** at their web portal is **https://www.bankeauctions.com.** E-auction tender document containing online-Auction Bid application. Decalration, general terms and conditions of online auction sale are available in **https://www.bankeauctions.com**. **Contact: Sri Gangadhar Naik Gonkar.(M) +91-9900711744**, the service provider (C1 INDIA).

It shall be the responsbilities of the interested bidders to inspect and satisfy themselves about the machineries before submission of the bid(s). It shall be deemed that the intending bidders have done their own due diligence before submitting the tender. No conditional bid will be accepted. The intending purchaser/bidders are required to deposit EMD amount 10% of the reserve price on or before **19.08.2022** through NEFT Transfer or online transfer into the **account no. 4897932210142** in favour of 'Subsidy Inward Remittance Account' at **State Bank of India, SMEC Banaswadi, Bengaluru, Branch Code :21014, IFS Code : SBIN0021014.** Copy of the supportive documents like challan/receipt, KYC copies (Adhar-PAN) should be attached to the Bid Application. **E-AUCTION TIMINGS WILL BE BETWEEN 11.30 AM TO 12.30 PM ON 20TH AUGUST 2022. BID AMOUNT IS INCLUSIVE WITH GST.** Bid incremental amount will be multiple of Rs 5000.00. Machineries should be got released within 8 days from the date of E-Auction by making full payment, otherwise EMD amount will be forfeited by the Bank. Bank reserves the right to reject/cancel any bid at any stage without assigning any reason.

Sd/- Assistant General Manager

12ರಿಂದ 15ರವರೆಗೆ ಪಣತ್ತೂರು ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯ ಪಣತ್ತೂರು ವಿದ್ಯುತ್ ಚಿತಾಗಾರದಲ್ಲಿ ತುರ್ತು ನಿರ್ವಹಣಾ ಕೆಲಸ ನಡೆಯಲಿರುವುದರಿಂದ ಆ.12ರಿಂದ 15ರವರೆಗೆ ಸ್ಥಗಿತಗೊಳ್ಳಲಿದೆ.

ಚಿಮಿಣಿ ಕೊಳವೆ ಮಾರ್ಗ ಹಾಳಾಗಿದೆ. ಚಿತಾಗಾರವನ್ನು ಸುಸ್ಥಿತಿಯಲ್ಲಿಡಲು ಕೆಲಸಗಳನ್ನು ಕೈಗೊಳ್ಳಲೇಬೇಕಾಗಿದೆ. ಈ ಅವಧಿಯಲ್ಲಿ ಬರುವ ಶವಗಳನ್ನು ಕಲ್ಲಹಳ್ಳಿ ಮತ್ತು ಕುಡ್ಲುಗೇಟ್ ಚಿತಾಗಾರಗಳಲ್ಲಿ ಅಂತ್ಯಸಂಸ್ಕಾರ ಮಾಡಬಹುದು ಎಂದು ಬಿಬಿಎಂಪಿ ವಿದ್ಯುತ್ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸತೀಶ್ ತಿಳಿಸಿದ್ದಾರೆ.

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SWRCNBNSBT_12_2022

ಕಾಮಗಾರಿಯ ಹೆಸರು | ಅಂದಾಜು ವೆಚ್ಚ: ರೂ. 9,07,92,285/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29-08-2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನೀಯರ್ / ಸ್ಲೀಪರ್ ನಿರ್ಮಾಣ/ಬೆಂಗಳೂರು ಕಂಟೋನ್ಮೆಂಟ್

PUB/290/AAV/PRB/SWR/2022-23

S.W.Railways | SWRRLY | SWRRLY

ಗಾಯತ್ರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ನಂ. 40, "ವೇದಮಾತ ಭವನ", 2ನೇ ಮಹಡಿ, 5ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು - 560003

ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟೀಸು

ನಮ್ಮ ಸಂಘದ 2021-2022ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯು ಭಾನುವಾರ ದಿನಾಂಕ 28-08-2022 ರಂದು ಬೆಳಿಗ್ಗೆ 10:30ಕ್ಕೆ, ಹವ್ಯಕ ಭವನ, ನಂ. 101/ಎ, 11ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಂಗಳೂರು-560003, ಇಲ್ಲಿ ನಡೆಯಲಿದೆ. ಸದಸ್ಯರು ತಪ್ಪದೇ ಭಾಗವಹಿಸಲು ಕೋರಲಾಗಿದೆ.

ದಿನಾಂಕ: 12-08-2022

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಕಾರ್ಯದರ್ಶಿ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ : STRRPA/TP/CLU/40/2022-23 **ಪ್ರಕಟಣೆ** ದಿನಾಂಕ: 11.08.2022.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಶ್ರೀ ಎ. ಭದ್ರಾರೆಡ್ಡಿ ಬಿನ್ ಅಶ್ವತ್ಥ್‌ರೆಡ್ಡಿ ಮತ್ತು ಶ್ರೀ ಎ. ರಾಜೇಂದ್ರರೆಡ್ಡಿ ಬಿನ್ ಅಶ್ವಥ್ ರೆಡ್ಡಿ, # 227, ಶೆಟ್ಟಿಹಳ್ಳಿ ಗ್ರಾಮ, ಮರಸೂರು ಅಂಚೆ, ಆನೇಕಲ್ ತಾಲ್ಲೂಕು.	ಆನೇಕಲ್	ಕಸಬಾ	ಮಡಿವಾಳ	490/9	0-18	ವಸತಿ	ವಾಣಿಜ್ಯ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಹತ್ತಿರದಲ್ಲಿ ವಾಣಿಜ್ಯ ಬೆಳವಣಿಗೆಗಳು ಬರುತ್ತಿದ್ದು, ಭೂ ಉಪಯೋಗ ಬದಲಾವಣೆಯಿಂದ ಉದ್ಯೋಗ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ವಾಣಿಜ್ಯ ವಲಯ'**ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1764/ಆಕಾರ್/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಾರಿತ್ರಿಕ ದಾಖಲೆಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ



ಛಾಯಾಚಿತ್ರಗಳನ್ನು ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

ಬೆಂಗಳೂರು: ರಾಜ್ಯದ ಇತಿಹಾಸ ನೆನಪಿಸುವ ದಾಖಲೆ ಮತ್ತು ಛಾಯಾಚಿತ್ರಗಳ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯುತ್ತಿದೆ.

ಸ್ವಾತಂತ್ರ್ಯಪೂರ್ವ ಮತ್ತು ನಂತರದ ಮಹತ್ವದ ಘಟನಾವಳಿಗಳ ದಾಖಲೆಗಳು ಮತ್ತು ಚಿತ್ರಗಳು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಅನಾವರಣಗೊಂಡಿವೆ.

ಸ್ವಾತಂತ್ರ್ಯದ ಅಮೃತಮಹೋತ್ಸವ ಅಂಗವಾಗಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಈ ಚಾರಿತ್ರಿಕ ದಾಖಲೆಗಳ ಪ್ರದರ್ಶನವನ್ನು ಆಯೋಜಿಸಿದೆ. ಇದೇ 12ರವರೆಗೆ ಈ ಪ್ರದರ್ಶನ ನಡೆಯಲಿದೆ.

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ವಿವಾಹ ಆಹ್ವಾನ ಪತ್ರಿಕೆ (1902), ಮೈಸೂರು ಬ್ಯಾಂಕ್ ಸ್ಥಾಪನೆ ಆದೇಶ (1913), ಕೆ.ಸಿ. ರೆಡ್ಡಿ ಸಚಿವ ಸಂಪುಟ, ಕೆಂಗಲ್ ಹನುಮಂತಯ್ಯ ಮತ್ತು ಅವರ ಸಂಪುಟ ಸದಸ್ಯರು, ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿ ಪಾಲ್ಗೊಳ್ಳುವಿಕೆ ಸೇರಿ ಹತ್ತಾರು ಅಪರೂಪ ಛಾಯಾಚಿತ್ರಗಳು ಗಮನ ಸೆಳೆಯುತ್ತಿವೆ.

1878ರಲ್ಲಿ ನಿರ್ಮಾಣವಾದ ನಗರದ ಮೇಯೊಹಾಲ್ ಕಟ್ಟಡ ನಿರ್ಮಾಣಕ್ಕೆ ₹49,209 ವೆಚ್ಚವಾಗಿರುವ ವಿವರದ ದಾಖಲೆಯ ಚಿತ್ರ, ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸಿದ ಸರ್ ಎಂ. ವಿಶ್ವೇಶ್ವರಯ್ಯ ಅವರಿಗೆ ₹1250 ಮಾಸಿಕ ಪಿಂಚಣಿ ಮಂಜೂರು ಮಾಡಿರುವ ಆದೇಶದ (1919) ಪತ್ರ, ಕನ್ನಡ ಸಾಹಿತ್ಯಕ್ಕಾಗಿ ಪ್ರತ್ಯೇಕವಾದ ಸಂಸ್ಥೆಯನ್ನು ನಿರ್ಮಿಸುವ ಬಗ್ಗೆ ಆದೇಶ ಹೊರಡಿಸಿರುವುದನ್ನು ಇಲ್ಲಿ ಪ್ರದರ್ಶಿಸಲಾಗಿದೆ.

'157ಕ್ಕೂ ಹೆಚ್ಚು ಮಹತ್ವದ ದಾಖಲೆಗಳನ್ನು ಪ್ರದರ್ಶಿಸಲಾಗಿದೆ.ಮಹತ್ವದ ದಾಖಲೆಗಳನ್ನು ವೆಬ್‌ಸೈಟ್‌ನಲ್ಲೂ ನೋಡಬಹುದು' ಎಂದು ರಾಜ್ಯ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಾ. ಸದಾನಂದ ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬೆಂಅಪ್ರಾ/ಕಾಅ/ಪಶ್ಚಿಮ ವಿಭಾಗ/ಟೆಂ/ಸರ್ವೀಸಸ್/03/2022-23 ದಿನಾಂಕ: 08.08.2022

ಟೆಂಡರ್ ಆಹ್ವಾನ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://eproc.karnataka.gov.in ಮೂಲಕ)

ಆಯುಕ್ತರು, ಬೆಂ.ಅ.ಪ್ರಾ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಶ್ಚಿಮ ವಿಭಾಗ, ಬಿಡಿಎ ಕಾಂಪ್ಲೆಕ್ಸ್, ಎಂಆರ್‌ಸಿಆರ್ ಲೇಔಟ್, ವಿಜಯನಗರ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. **ಕಾಮಗಾರಿಯ ಹೆಸರು:** ಕಾಚೋಹಳ್ಳಿ ಕ್ರಾಸ್(ಮಾಗಡಿ ರಸ್ತೆ)ಯಿಂದ ಗಂಗೊಂಡನಹಳ್ಳಿ ಜಂಕ್ಷನ್ (ಸಿಹೆಚ್: 0.00 ಕಿ,ಮೀ. ಯಿಂದ 4.63 ಕಿಮೀ) ವರೆಗೆ, ಕಡಬಗೆರೆ ಕ್ರಾಸ್ (ಮಾಗಡಿ ರಸ್ತೆ)ಯಿಂದ ಗಂಗೊಂಡನಹಳ್ಳಿ ಜಂಕ್ಷನ್ (ಸಿಹೆಚ್: 0.00 ಕಿಮೀ ಯಿಂದ 6.71 ಕಿಮೀ) ವರೆಗೆ , ಗಂಗೊಂಡನಹಳ್ಳಿ ಜಂಕ್ಷನ್ ನಿಂದ ಮಾದನಾಯಕನಹಳ್ಳಿ (ಎನ್‌ಹೆಚ್-4) (ಸಿಹೆಚ್: 0.00 ಕಿಮೀ ಯಿಂದ 3.81 ಕಿಮೀ) ವರೆಗೆ ಮಣ್ಣಿನ ಸ್ಥಿರೀಕರಣ ವಿಧಾನದೊಂದಿಗೆ ರಸ್ತೆಗಳ ಸುಧಾರಣೆ ಗೊಳಿಸುವ ಕಾಮಗಾರಿಗಳಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಯೋಜನಾ ನಿರ್ವಹಣೆ ಮತ್ತು ಕೆಲಸದ ಗುಣಮಟ್ಟ ನಿಯಂತ್ರಣಕ್ಕಾಗಿ ಸಲಹಾ ಸೇವೆಗಳು. ಟೆಂಡರ್‌ಗಿಟ್ಟಿರುವ ಅಂದಾಜು ಮೊತ್ತ: **ರೂ. 3600 ಲಕ್ಷಗಳು.** ಹೆಚ್ಚಿನ ವಿವರಗಳಿಗೆ http://eproc.karnataka.gov.in ಗೆ ಲಾಗ್‌ಇನ್ ಆಗಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22371090/22340060 ಕರೆ ಮಾಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಶ್ಚಿಮ ವಿಭಾಗ, ಬೆಂಅಪ್ರಾ, ಬೆಂಗಳೂರು

BDA/PRO/TN/12/2022-23

ಶಿವಾನಂದ ವೃತ್ತ ಮೇಲ್ಸೇತುವೆ: 15ರಂದು ಸಂಚಾರಕ್ಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುನಿರೀಕ್ಷಿತ ಶಿವಾನಂದ ವೃತ್ತದ ಮೇಲ್ಸೇತುವೆ ಆ.15ರಂದು ವಾಹನ ಸಂಚಾರಕ್ಕೆ ಮುಕ್ತವಾಗುವ ಸಾಧ್ಯತೆ ಇದೆ.

'ಶಿವಾನಂದ ವೃತ್ತದ ಮೇಲ್ಸೇತುವೆ ಕಾಮಗಾರಿ ಈಗಾಗಲೇ ಮುಗಿಯಬೇಕಿತ್ತು. 25 ದಿನಗಳ ನಿರಂತರ ಮಳೆಯಿಂದ ಕಾಮಗಾರಿ ಮುಗಿಸಲು ಸಾಧ್ಯವಾಗಿಲ್ಲ. ಶುಕ್ರವಾರ, ಶನಿವಾರ ಮಳೆ ಬಾರದಿದ್ದರೆ ಡಾಂಬರು ಕಾರ್ಯವನ್ನು ಪೂರ್ಣಗೊಳಿಸಲಾಗುತ್ತದೆ. ಜೊತೆಗೆ ಕೆಲವು ಡ್ರೈನ್‌ಗಳ ಕೆಲಸ ಬಾಕಿ ಇದ್ದು, ಅದನ್ನೂ ಮುಗಿಸಲಾಗುತ್ತದೆ. ಮಳೆ ಬಂದರೆ ಕಾಮಗಾರಿ ನಡೆಸಲು ಸಾಧ್ಯವಾಗುವುದಿಲ್ಲ' ಎಂದು ಬಿಬಿಎಂಪಿಯ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Farm House/ Land/ Resorts

Multiple Locations

WANTED FARM Land in and around Bangalore 40 to 50 kms 2 to 4 acres from direct owner only call +917483442482

Sites

North

WANTED LAND/ plots purchase/ JD for Reputed Developers North and East Bangalore. 'Spacelinks' 9845129934.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work Contact- 9880916988

RENTAL PROPERTIES

Accommodation Available

Commercial

KORAMANGALA- FOR RENT OFFICE SPACE 2250 SFT. EACH ON 2nd & 3rd FLOOR, NEAR SONY SIGNAL, OFF 80 FT ROAD, CALL: 9845021000

ULSOOR ROAD OFFICE SPACE FOR RENT 2200SqFt Bare Shell, 2nd Floor, Lift, 24hr Power Backup, 2Cars Parking. CALL - 9448933491

REAL ESTATE SELLING

Commercial Land

Bangalore South

85000 SQ.FT Land available for Sale/Jv For Apartment Project.Location: Unkal, Hubli Whats App: 9825063459Mobile: 9106733668Email: hubli.jv@gmail.com

Flat

Rajarajeshwari Nagar

2 BHK 12 year flat Resale, BHEL Layout, Pattangere, 1005 sqft, A Katha, Kaveri water. 9629196320

General

South

AVAILABLE/ WANTED 30x40 40x60 50x80 Residential- Commercial Plots: Basavanagudi Chamarajpet Banashankari Hanumanthnagar Girinagar Padmanabhanagar JPNagar, Kanakapura Bannerghatta Road Hulimav Belakahalli Vijaya Bank Layout. Also Joint Venture Properties Warehouse Godown For Rent- 9900399006

House

Vishweshwariah Layout

SALE: NEAR AMMA-ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

Sites

Kengeri

SITE FOR SALE AT BANDE MATA LAYOUT, 'A'KATHA, size: 40x66 LOAN AVAILABLE Mob: 9632227878, 9448793428

Nagarabhavi

40×60 SITE SALE NGEF/ Mallathalli- Nagarabhavi BDA/ BBMP khata, fully developed area. Rs. 9400/- Negotiable. 9353018816, 9845526446.

30X40 EF Site Sale ITI Layout Mallathahalli BDA Approved A-Katha Full Road Hit: 6366232222/ 6366242222

Vishweshwariah Layout

AVAILABLE/ WANTED BDA Sites Vishweshwaraiah Layout Kempegowda Layout 20x30, 30x40, 40x60, 50x80 Contact Genuine Buyers/ Sellers 8892901567/ 9341733480

Vidyaranyapura

VILLA PLOTS for sale in premium residential layout in BBMP limits at Vidranayapura Blr. Ready for construction and Bank loans available. For free site visit call on 9901833455 / 9686300772.

JOB OPPORTUNITIES

Multiple Vacancy

REQUIRED TEAMLEADER, Telecaller, & FieldExecutive For BankLoan collection. direct recruitment to company Contact:- 9620206756, 9620200756.

Teachers/ Professors

PRIMARY SCHOOL TEACHERS ENGLISH, EVS, ART & CRAFT. FRONT OFFICE EXECUTIVES FRANK PUBLIC SCHOOL. 9731910479 frankoffice127@gmail.com

PUBLIC NOTICE

PUBLIC NOTICE

My client Sri. T.V. Sridhar Murthy S/o Late T.S. Venkatarangaiah and B.M. Nirmaladevi W/o T.V. Sridhra Murthy being owners in possession of the property mentioned in the schedule below. having acquired the same under registered will dated 25-03-2004 bearing Document No. GAN-3-00290-2003-04 in the office of the Sub-Registrar Gandhinagar, Bangalore who has acquired the same under unregistered holographic will dated 07-02-1996 executed by his brother T. S. Venkatakrishnappa authorizing him and others to sell the property or to retain the same by paying specified sums to the specified persons and specified institutions. And said T.S.Venkatarangaiah has retained the schedule property for himself by acting as per the said will. My clients further state that the said original document i.e. holographic will dated 07-02-1996 is misplaced/lost. Now the public are hereby notified that if any persons/institutions have got possession of the said original document and if have any claims in respect of the schedule property are hereby requested to forward their claims with copies of the supporting documents to the under mentioned address within FIFTEEN days from today. If no claims are received it will be deemed that there are no claims from any persons/institutions.

SCHEDULE

All that piece and parcel of the property bearing Old Muncipal No. 49, presently bearing Corporation No. 166 situated at Pipeline, Dattatreya Temple Street, Malleshwaram, BMP Ward No.6, Bangalore measuring East 30 Feet and West 36Feet and bounded on the;

East by : Cart Road, West by : Site No.2 of Govindreddy, North by : Conservancy, South by : Road.

Veerendra Patil, Advocate
Amareshwar Nilaya, No20-A/19, 7th Main, 4th Block, Rajajainagar, Bangalore - 560 010.
Phone: 080-23143537
Bangalore, Date: 12-08-2022

EDUCATIONAL

Admission

DIRECT FINAL: LLB (Become Lawyer),B.Tech/ MBA/BCA/BBA/B.Sc/B.Com/ D.Pharm/B.Pharm/BAMS/ BYNS/Nursing/PU/SSLC. Last few seats. Asha Academy, Bangalore. Ph:9448460103/ 7093438248.

DH DECCAN HERALD | ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ಕ್ಲಾಸಿಫೈಡ್ಸ್ WEEKEND CORNER

युनाइटेड इंडिया इंश्योरेन्स कंपनी लिमिटेड
UNITED INDIA INSURANCE CO. LTD.
(A Government of India Undertaking)
REGIONAL OFFICE : 5th & 6th FLOOR, KRISHI BHAVAN, NRUPATHUNGA ROAD, HUDSON CIRCLE, BANGALORE - 560 001. Ph : 22534061 / 4031

OFFICE ACCOMMODATION REQUIRED ON RENTAL LEASE AT BENGALURU

United India Insurance Company Limited, a PSU requires COMMERCIAL premises having carpet area of 1000 sq ft in Madivala / in and around 2 kms radius from Madivala, Bengaluru, preferably in Ground or First Floor, situated on / near Main wide Road in clean surroundings with adequate parking space, drinking water and with minimum two toilets. for housing its Branch Office. Expected rental rate per Sft is lesser than Rs.35/-.
For details interested parties may visit the 'Tenders/RFP' tab on our Company's web site www.uiic.co.in. and submit their quotes as advised in the web site.

Sd/- DEPUTY GENERAL MANAGER

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PERSONAL

Change of Name

I, BASAVA M/o JC-675971K-Nb/Sub-SHIVAPPA.H. R/a Hunashikatti, Bailhongal, Belagavi, changed name from BASAVA to BASAVVA HANCHINAMANI notary K.V.Mani, Bangalore.

I, VIBHA N PRATHAP, R/at Padmanabhnagar, Bangalore has changed my name to Vibha Kartik Vide affidavit dated 11.8.2022 sworn before the Notary Smt Vani G.K. Henceforth I shall be known as VIBHA KARTIK for all purposes.

I, MANJULA MANJUNATHA, W/o. Manjunatha Ramachandrappa Residing at #268, Near Sambappa Temple, M.G.Road, Sarjapura, Anekal Taluk, Bengaluru-562125, have changed my name to MANJULA. B.N. vide affidavit dated 11.08.2022, before ntoary D. Guna Shekar, Bangalore.

I, MANJULA SHIVAPRAKSH Spouse Of 6366411H, Ex-Naik, G. Shivaprakash, resident of No. 11, 10th Cross, Kanshiramnagara Vidyaranyapura Post, Bangalore North, Bangalore-560097 have changed my name from K. MANJULA to MANJULA SHIVAPRAKASH vide affidavit dated: 11/08/2022 sworn before N. Kanchivaradaraju Advocate M.A.L.L.B., Bangalore.

WE, CHANDIL KUMAR and SUDHA KUMARI resident of No.404, DS Max Samrat Apartment, 1st Main Road, HMR Layout Gokula, Bangalore-560054 has changed our minor son's name from SUNDER to KEVIN KARTHIK vide affidavit dated 11/08/2022 sworn before notary Ambika.S, Bangalore

I, MANJU, residing at 30, Shammana Layout, Lingarajapuram, St. Thomas Town Post, Bangalore 560084, have changed my name to SUSAN, vide affidavit dated 02.08.2022 before Notary Uday Kumar .K, Bangalore. Henceforth I shall be known as SUSAN only.

I, NITYA NARAYANAN D/o C.S. Narayanan R/a #797, 26th Main Road, HSR Layout Sector-1, Bangalore- 560102 Have Changed My Name From NITYA PRAMOD to NITYA NARAYANAN vide affidavit dated 11-08-2022 Before Notary K.V. Mani Bengaluru

SUNITA DEVI, Wife/o. JC674446F, NB SUB, SURENDRA SINGH PAL, Aaraji No 1173, Barasirohi, IIT Kalyanpur, Kanpur Nagar, Uttar Pradesh changed name from SUNITA DEVI to SUNITA PAL 10/08/2022 Notary K.V. Mani Bangalore

I, MANJULA W/o JC-675971K-Nb/Sub-SHIVAPPA.H. R/a Hunashikatti, Bailhongal, Belagavi, changed name from MANJULA to MANJULA SHIVAPPA HANCHINAMANI notary K.V.Mani, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I, RAMYA M., aged about 35 years, D/o. Sri A. Madhuranath Rao, residing at Flat No. 102, 2nd Floor, Comfort Sree Apartment, G.P. Rajaratnam Road 7th Cross 9th Main Hanumanthanagar Bangalore- 560019 have changed my daughter's name as SHREYA SHREE from her old name Shreya S. and sworn before Notary L.Puttaraju vide affidavit dated. 10.08.2022.

I, NITYA NARAYANAN D/o C.S. Narayanan R/a #797, 26th Main Road, HSR Layout Sector-1, Bangalore- 560102 Have Changed My Daughter's Name From KRISHNAA PRAMOD (DOB 14-11-2002) to KRISHNAA NAIR vide Affidavit Dated 11-08-2022 Before Notary K.V. Mani Bengaluru

I, RANJITH Kozhummal Madhavan Residing #1087, Sobha Eternia, Haralur Road, Bangalore-102 have changed my daughter's name from VANDANA RANJITH NAMBIAR to VANDANA RANJITH vide affidavit dated 11-08-2022 before Harish.G. Notary Bangalore.

I, SUREKHA DHONDIBA DHEKHANE alias SUREKHA PRAKASH DHONDIBA DHEKHANE R/o.No.11, 1st Main Amarajyothinagar Nagarabhavi Main Road Bangalore-40, have changed my name to SUREKHA PRAKASH affidavit dated 04.08.2022, notary M.C. Palanetrappa Bangalore. Henceforth I shall be called SUREKHA PRAKASH only.

Lost

DOCUMENT LOST
I, V.B Katti R/at A901, Melody Apartments Pantharapalya, Nayndahalli, Mysore Road, Bangalore have lost Register sale deed Document No./ Identification: 15070
Lost Report No. 0271156/2022 Dt: 18.7.2022
Contact :9959944880

Others

I, PRASANNA X D, will henceforth be known by my full name with expanded initials as Xavier Dominic Prasanna.

ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆಯುವಂತೆ ಡಾ.ಕೆ. ಸುಧಾಕರ್ ಮನವಿ

‘3ನೇ ಡೋಸ್: ಶೇ 17ರಷ್ಟು ಸಾಧನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಲಸಿಕೆಯನ್ನು ಉಚಿತವಾಗಿ ಒದಗಿಸುತ್ತಿದ್ದರೂ ಎರಡನೇ ಡೋಸ್ ಪಡೆದವರಲ್ಲಿ ಶೇ 17ರಷ್ಟು ಮಂದಿ ಮಾತ್ರ ಮುನ್ನೆಚ್ಚರಿಕೆ ಡೋಸ್ ಪಡೆದಿದ್ದಾರೆ. ಆರೋಗ್ಯ ಸುರಕ್ಷತೆಯ ದೃಷ್ಟಿಯಿಂದ ಅರ್ಹರು ಮತ್ತೊಂದು ಡೋಸ್ ಲಸಿಕೆ ಪಡೆದು-ಕೊಳ್ಳಬೇಕು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮನವಿ ಮಾಡಿದರು.

ಡಾ.ಎಂ.ಕೆ. ಸುದರ್ಶನ್ ನೇತೃತ್ವದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಜತೆಗೆ ನಗರದಲ್ಲಿ ಗುರುವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ‘ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ವಿತರಣೆ ಗುರಿ ಶೇ 100 ದಾಟಿದೆ. ಆದರೆ, ಮೂರನೇ ಡೋಸ್ ಪಡೆದವರ ಪ್ರಮಾಣ ಕಡಿಮೆ ಇದೆ. ಲಕ್ಷಾಂತರ ಡೋಸ್ ಲಸಿಕೆ ಲಭ್ಯವಿದ್ದರೂ ಜನರು ಮುಂದೆ ಬಂದಿಲ್ಲ. ಲಸಿಕೆ ಪಡೆದವರಲ್ಲಿ 6-7 ತಿಂಗಳ ನಂತರ ರೋಗನಿರೋಧಕ ಶಕ್ತಿ ಕ್ಷೀಣಿಸಲಿದೆ. ಆದ್ದರಿಂದ ಮೂರನೇ ಡೋಸ್ ನೀಡಲಾಗುತ್ತಿದೆ. ಮೂರನೇ ಡೋಸ್ ಪಡೆದರೆ ಕೋವಿಡ್ ಪ್ರಕರಣಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಆಸ್ಪತ್ರೆಗೆ ದಾಖಲಾದರೂ ಸಾವು ಸಂಭವಿಸುವುದಿಲ್ಲ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಈ ತಿಂಗಳ 10ರವರೆಗೆ 24 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಬಹುತೇಕರು 60 ವರ್ಷ ವಯಸ್ಸು ಮೇಲ್ಪಟ್ಟವರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 7.2ಕ್ಕೆ ತಲುಪಿದೆ. ಈ ಪ್ರಮಾಣ ಕೆಲ ಜಿಲ್ಲೆಗಳಲ್ಲಿ ರಾಜ್ಯದ ದೃಢ ಪ್ರಮಾಣ ದರಕ್ಕಿಂತ ಹೆಚ್ಚಿದೆ. ರಾಜ್ಯದಲ್ಲಿ ಪ್ರತಿ ದಿನ 30 ಸಾವಿರ ಮಾದರಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗು-ತ್ತಿದೆ’ ಎಂದು ಮಾಹಿತಿ ನೀಡಿದರು.

ಡೆತ್ ಆಡಿಟ್: ‘ತುಮಕೂರು, ಧಾರವಾಡ ಹಾಗೂ ಬೆಂಗಳೂರಿನಲ್ಲಿ 16, 21 ವರ್ಷ ವಯಸ್ಸಿನವರೂ ಕೋವಿಡ್ ಪೀಡಿತರಾಗಿ ಮೃತಪಟ್ಟಿದ್ದಾರೆ. ಇದು ಬಹಳ ದುರದೃಷ್ಟಕರ. ಅವರ ಡೆತ್ ಆಡಿಟ್ ನಡೆಸಲಾಗುತ್ತಿದೆ’ ಎಂದು ಹೇಳಿದರು.

‘ಮಂಕಿಪಾಕ್ಸ್: ಚಿಕಿತ್ಸೆಗೆ ವ್ಯವಸ್ಥೆ’

‘ದೇಶದಲ್ಲಿ ಈವರೆಗೆ 9 ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲಿ ಈವರೆಗೂ ಪ್ರಕರಣ ಕಂಡುಬಂದಿಲ್ಲ. ಆದರೂ ಗಡಿ ಭಾಗದ ಐದಾರು ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಸ್ಪತ್ರೆಗಳಲ್ಲಿ ಅಗತ್ಯ ಔಷಧ ಹಾಗೂ ಚಿಕಿತ್ಸೆ ವ್ಯವಸ್ಥೆ ಮಾಡಲಾಗಿದೆ’ ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

‘ರಾಜ್ಯದಲ್ಲಿ ಹೆಚ್ಚು ಮಳೆಯಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತಿವೆ. ಕಳೆದ ವರ್ಷ ಈ ವೇಳೆ 1,266 ಡೆಂಗಿ ಪ್ರಕರಣಗಳು ದೃಢಪಟ್ಟಿ-ದ್ದವು. ಈ ವರ್ಷ 4,405 ಪ್ರಕರಣಗಳು ಪತ್ತೆಯಾಗಿವೆ. ಕಳೆದ ವರ್ಷ ಈ ವೇಳೆ 454 ಚಿಕೂನ್‌ಗುನ್ಯಾ, ಮೂರು ಎಚ್1ಎನ್1 ಪ್ರಕರಣ ವರದಿಯಾಗಿದ್ದವು. ಈ ವರ್ಷ ಕ್ರಮವಾಗಿ 978 ಹಾಗೂ 345 ಪ್ರಕರಣಗಳು ಪತ್ತೆಯಾಗಿವೆ’ ಎಂದು ಹೇಳಿದರು.

ಮೆಟ್ರೊ ರೈಲು: 13ರಿಂದ 15ರವರೆಗೆ

ಲಾಲ್‌ಬಾಗ್‌ನಿಂದ ಎಲ್ಲಿಗೆ ಹೋದರೂ ₹30

ಮೆಟ್ರೊ ರೈಲು

ಬೆಂಗಳೂರು: ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಜನರಿಗೆ ಮೆಟ್ರೊ ರೈಲು ನಿಗಮ ವಾರಾಂತ್ಯದ ಆಫರ್ ನೀಡಿದೆ. ಲಾಲ್‌ಬಾಗ್ ನಿಲ್ದಾಣದಿಂದ ಯಾವುದೇ ಮೂಲೆಗೆ ಸಂಚರಿಸಿದರೂ ಪ್ರಯಾಣ ದರ ₹30 ನಿಗದಿ ಮಾಡಿದೆ.

ಶನಿವಾರದಿಂದ ಸೋಮವಾರ-ದ(ಆ.13–ಆ.15) ತನಕ ಮೂರು ದಿನ ಈ ರಿಯಾಯಿತಿ ದೊರೆಯಲಿದೆ. ಇದಕ್ಕಾಗಿ ಪೇಪರ್ ಟಿಕೆಟ್‌ಗಳನ್ನು ಪರಿಚಯಿಸಲಾಗಿದ್ದು, ಎಲ್ಲಾ ಮೆಟ್ರೊ ರೈಲು ನಿಲ್ದಾಣಗಳಲ್ಲಿ ಲಭ್ಯ ಇರಲಿವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಬೆಳಿಗ್ಗೆ 8ರಿಂದ ಸಂಜೆ 6 ಗಂಟೆ ತನಕ ಪೇಪರ್ ಟಿಕೆಟ್‌ಗಳು ಲಭ್ಯವಾಗಲಿವೆ. ಲಾಲ್‌ಬಾಗ್ ನಿಲ್ದಾಣದಲ್ಲಿ ಮಾತ್ರ ರಾತ್ರಿ 8ರ ತನಕ ಟಿಕೆಟ್ ದೊರಕಲಿವೆ. ಈ ಟಿಕೆಟ್‌ಗಳನ್ನು ಬೆಳಿಗ್ಗೆ 10ರಿಂದ ರಾತ್ರಿ 8ರ ತನಕ ಬಳಕೆ ಮಾಡಲು ಅವಕಾಶ ಇದೆ ಎಂದು ವಿವರಿಸಿದೆ.

‘ಯಾವುದೇ ನಿಲ್ದಾಣದಿಂದ ಲಾಲ್‌ಬಾಗ್‌ಗೆ ತೆರಳಲು ಪೇಪರ್ ಟಿಕೆಟ್ ಬಳಸಲು ಸಾಧ್ಯವಿಲ್ಲ. ಚಾಲ್ತಿಯಲ್ಲಿರುವ ಟೋಕನ್ ಅಥವಾ ಸ್ಮಾರ್ಟ್‌ಕಾರ್ಡ್ ಬಳಸಬಹುದು. ಲಾಲ್‌ಬಾಗ್‌ನಿಂದ ಹಿಂತಿರುಗುವ ಪ್ರಯಾಣಿಕರು ಮಾತ್ರ ಪೇಪರ್ ಟಿಕೆಟ್ ಬಳಸಬಹುದು’ ಎಂದು ಬಿಎಂಆರ್‌ಸಿಎಲ್ ಸ್ಪಷ್ಟಪಡಿಸಿದೆ.

ಕಲ್ಲು ಎತ್ತಿ ಹಾಕಿ ಮಹಿಳೆ ಕೊಲೆ

ಬೆಂಗಳೂರು: ತಲೆ ಮೇಲೆ ಕಲ್ಲು ಎತ್ತಿ ಹಾಕಿ ಮಹಿಳೆಯೊಬ್ಬರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

‘ಬೊಮ್ಮನಹಳ್ಳಿ ಕೆರೆ ಸಮೀಪದಲ್ಲಿ ಮಹಿಳೆಯ ಮೃತದೇಹ ಗುರುವಾರ ಪತ್ತೆಯಾಗಿದೆ. ಮೃತ ಮಹಿಳೆಗೆ 40ರಿಂದ 50 ವರ್ಷ ವಯಸ್ಸಿರಬಹುದು. ಹೆಸರು ಸದ್ಯಕ್ಕೆ ಗೊತ್ತಾಗಿಲ್ಲ’ ಎಂದು ಪೊಲೀಸರು ಹೇಳಿದರು.

‘ಕೆರೆ ಸಮೀಪದ ಬಟ್ಟೆ ತೊಳೆಯುವ ಜಾಗದಲ್ಲಿ ಮೃತದೇಹ ಕಂಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.’

‘ರಕ್ತಸಿಕ್ತ ಸ್ಥಿತಿಯಲ್ಲಿ ಮಹಿಳೆ ಮೃತದೇಹವಿತ್ತು. ಆರೋಪಿಗಳು ಮಹಿಳೆಯನ್ನು ಕೆರೆ ಬಳಿ ಕರೆದುಕೊಂಡು ಬಂದು ಕೊಲೆ ಮಾಡಿ ಪರಾರಿಯಾಗಿರುವ ಅನುಮಾನವಿದೆ. ಆರೋಪಿಗಳ ಪತ್ತೆಗೆ ತನಿಖೆ ಮುಂದು-ವರಿಸಲಾಗಿದೆ’ ಎಂದೂ ತಿಳಿಸಿದರು.

‘ಭಾರತದ ಜತೆಗಿನ ಬಾಂಧವ್ಯ ವೃದ್ಧಿಗೆ 650 ಕಂಪನಿಗಳ ಕೊಡುಗೆ’

ಪ್ರಜಾವಾಣಿ ವಾರ್ತೆ

ಔತಣಕೂಟದಲ್ಲಿ ಯು.ಎಸ್ ಚಾರ್ಜ್ ಡಿ’ ಅಫೇರ್ಸ್ ಪೆಟ್ರೀಷಿಯಾ ಎ.ಲಸಿನಾ, ಯು.ಎಸ್‌ನ್ಯಾಷನಲ್ ಸೈನ್ಸ್ ಫೌಂಡೇಷನ್ ನಿರ್ದೇಶಕ ಡಾ.ಸೇತುರಾಮನ್ ಪಂಚನಾಥನ್, ಚೆನ್ನೈನ ಯು.ಎಸ್‌ಕಾನ್ಸಲ್ ಜನರಲ್ ಜುಡಿತ್ ರೇವಿನ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪಾಲ್ಗೊಂಡಿದ್ದರು

ಬೆಂಗಳೂರು: ಭಾರತದಲ್ಲಿನ ಅಮೆರಿಕದ ಚಾರ್ಜ್ ಡಿ’ ಅಫೇರ್ಸ್ ಪೆಟ್ರೀಷಿಯಾ ಲಸಿನಾ ಅವರು ನಗರದಲ್ಲಿನ ವಾಣಿಜ್ಯೋದ್ಯಮ ನೇತಾರರು ಮತ್ತು ಉದ್ಯಮಿಗಳನ್ನು ಭೇಟಿ ಮಾಡಿ ಅಮೆ-ರಿಕ-ಭಾರತದ ನಡುವಿನ ಸುಭದ್ರ ಆರ್ಥಿಕ ಮತ್ತು ವಾಣಿಜ್ಯ ಒಡನಾಟದ ಬಗ್ಗೆ ಸಂವಾದ ನಡೆಸಿದರು.

ಚಾರ್ಜ್ ಲಸಿನಾ ಅವರು ಸೆಪ್ಟೆಂಬರ್ 2021ರಲ್ಲಿ ಅಧಿಕಾರ ವಹಿಸಿಕೊಂಡಿದ್ದು, ಅವರು ಬೆಂಗಳೂರಿಗೆ ಭೇಟಿ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

ಚಾರ್ಜ್ ಅವರೊಂದಿಗೆ ಚೆನ್ನೈನ ಯು.ಎಸ್.ಕಾನ್ಸಲ್ ಜನರಲ್ ಜುಡಿತ್ ರೇವಿನ್ ಮತ್ತು ಯು.ಎಸ್.ನ್ಯಾಷನಲ್ ಸೈನ್ಸ್ ಫೌಂಡೇಷನ್(ಎನ್‌ಎಸ್‌ಎಫ್)ನ ನಿರ್ದೇಶಕ ಡಾ. ಸೇತುರಾಮನ್ ಪಂಚನಾಥನ್ ಉಪಸ್ಥಿತರಿದ್ದರು.

ವಾಣಿಜ್ಯ ಮತ್ತು ಉದ್ಯಮ ನಾಯಕರಿಗೆ ಆಯೋಜಿಸಿದ್ದ ಔತಣ-ಕೂಟದಲ್ಲಿ ಚಾರ್ಜ್ ಲಸಿನಾ, ಬೆಂಗಳೂರಿನಲ್ಲಿರುವ 650ಕ್ಕೂ ಹೆಚ್ಚು ಅಮೆರಿಕ ಕಂಪನಿಗಳ ಕೊಡುಗೆ ಸ್ಮರಿಸಿದರು. ಹತ್ತಾರು ಸಾವಿರ ಭಾರತದ ನಾಗರಿಕರಿಗೆ ಔಪಚಾರಿಕ ವಲಯದಲ್ಲಿ ಉನ್ನತ ಗುಣಮಟ್ಟದ ಉದ್ಯೋಗ ನೀಡಿರುವ ಕಂಪನಿಗಳು ಇವು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಕೆಲಸಗಳ ಮೂಲಕ ಹಾಗೂ ಉದ್ಯೋಗಿಗಳ ಕೌಶಲ ಅಭಿವೃದ್ಧಿಗೆ ಬದ್ಧತೆಯ ಮೂಲಕ ನೀಡುತ್ತಿರುವ ಕೊಡುಗೆಯನ್ನು ಶ್ಲಾಘಿಸಿದರು.

ಡಾ.ಎಚ್. ನರಸಿಂಹಯ್ಯ ಅವರ ಹೆಸರಿರುವ ನಾಮಫಲಕ

ಬೆಂಗಳೂರು ವಿ.ವಿ: ನಾಮಫಲಕ ಮತ್ತೆ ಯಥಾಸ್ಥಿತಿಗೆ

ಬೆಂಗಳೂರು: ಬೆಂಗಳೂರು ವಿಶ್ವವಿ-ದ್ಯಾಲಯದ ಜ್ಞಾನಭಾರತಿ ಆವರಣದ ಮುಖ್ಯ ಪ್ರವೇಶ ದ್ವಾರದಲ್ಲಿ ಮೊದಲಿನಂತೆಯೇ ಡಾ.ಎಚ್. ನರಸಿಂಹಯ್ಯ ಅವರ ಹೆಸರಿರುವ ನಾಮಫಲಕವನ್ನು ಇತ್ತೀಚೆಗೆ ಅಳವಡಿಸಲಾಗಿದೆ.

ಇದೇ ವರ್ಷದ ಜುಲೈ 20ರಂದು ನಡೆದಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಸದಸ್ಯರಾದ ಡಾ.ಎಚ್. ಸುಧಾಕರ್ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದರು.

ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವನ್ನು ನಿರ್ಮಿಸಲು ಕಾರಣ-ಕರ್ತರಾದ ಡಾ.ಎಚ್. ನರಸಿಂಹಯ್ಯ ಅವರ ಹೆಸರನ್ನೊಳಗೊಂಡ ನಾಮಫ-ಲಕವನ್ನು ತೆರವುಗೊಳಿಸಿ ವಿಶ್ವವಿದ್ಯಾಲ-ಯದ ದ್ವಾರದಲ್ಲಿ ಬೇರೆ ನಾಮಫಲಕವ-ನ್ನು ಸಿಂಡಿಕೇಟ್ ಗಮನಕ್ಕೆ ತಾರದೇ ಅಳವಡಿಸಿದ್ದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

ದೀರ್ಘ ಚರ್ಚೆಯ ನಂತರ ಜ್ಞಾನಭಾರತಿ ದ್ವಾರದಲ್ಲಿ ಅಳವಡಿಸಿರುವ ಹೊಸ ನಾಮಫಲಕ ತೆರವುಗೊಳಿಸಲು ಹಾಗೂ ಮೊದಲಿನಂತೆಯೇ ನರಸಿಂಹಯ್ಯ ಅವರ ಹೆಸರನ್ನು ಒಳಗೊಂಡ ನಾಮಫಲಕವನ್ನು ಮಾತ್ರ ಅಲ್ಲಿ ಅಳವಡಿಸಬೇಕು ಎಂದು ಸಿಂಡಿಕೇಟ್ ನಿರ್ಣಯ ಕೈಗೊಂಡಿತ್ತು.

ಶಾಲೆಯಿಂದ ಹೊರಗುಳಿದ ಮಕ್ಕಳು: ಹೈಕೋರ್ಟ್‌ಗೆ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಶಾಲೆಯಿಂದ ಹೊರಗುಳಿದ ಮತ್ತು ಈವರೆಗೆ ಶಾಲೆಗೆ ದಾಖಲಾಗದ 6ರಿಂದ 14 ವರ್ಷ ವಯಸ್ಸಿನ ಮಕ್ಕಳನ್ನು ಗುರುತಿಸಿ ಅವರನ್ನು ಶಾಲಾ ಶಿಕ್ಷಣ ವ್ಯಾಪ್ತಿಗೆ ತರಲು ಕೈಗೊಂಡಿರುವ ಕ್ರಮಗಳ ಬಗ್ಗೆ ಹೈಕೋರ್ಟ್‌ಗೆ ಮಾಹಿತಿ ನೀಡಲಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವ ವಿಚಾರಕ್ಕೆ ಸಂಬಂಧಿಸಿದಂತೆ 2013ರಲ್ಲಿ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು, ಸರ್ಕಾರದ ಅಂಕಿ-ಅಂಶಗಳ-ನ್ನು ಆಧರಿಸಿದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಶಿಫಾರಸುಗಳ ಅನುಸಾರ ಕೈಗೊಂಡ ಕ್ರಮಗಳ ಕುರಿತಂತೆ ಮುಂದಿನ 12 ವಾರಗಳಲ್ಲಿ ವರದಿ ಸಲ್ಲಿಸಿ ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ವರದಿಯಲ್ಲಿ ಏನಿದೆ?: ವರದಿಯ ಅನುಸಾರ 2022ರ ಆಗಸ್ಟ್ 1ರಂತೆ ರಾಜ್ಯದಲ್ಲಿ 6ರಿಂದ 14 ವರ್ಷ ವಯಸ್ಸಿನ, ಶಾಲೆಯಿಂದ ಹೊರಗುಳಿದ ಮತ್ತು ಈವರೆಗೆ ಶಾಲೆಗೆ ದಾಖಲಾಗದ 24,308 ಮಕ್ಕಳ ಪೈಕಿ 18,585 ಮಕ್ಕಳನ್ನು ಪತ್ತೆ ಹಚ್ಚಲಾಗಿದೆ. ಇವರಲ್ಲಿ 14,871 ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ. 5,724 ಮಕ್ಕಳನ್ನು ಇನ್ನೂ ಪತ್ತೆ ಹಚ್ಚಬೇಕಾಗಿದೆ. ಪತ್ತೆ ಹಚ್ಚಲಾದ ಒಟ್ಟು ಮಕ್ಕಳ ಪೈಕಿ 3,713 ಮಕ್ಕಳು ವಿವಿಧ ಕಾರಣಗಳಿಂದಾಗಿ ಇನ್ನೂ ಶಾಲೆಗಳಿಗೆ ಸೇರಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗೆ ಅರ್ಜಿ ಆಹ್ವಾನ

ಬೆಂಗಳೂರು: 2022-23ನೇ ಸಾಲಿನ ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ಪ್ರಾರಂಭಿಸಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತಿಳಿಸಿದೆ.

ಶಾಸನಗಳ ಲಿಪಿಗಳನ್ನು ಓದುವ ತರಬೇತಿ, ಶಾಸನಗಳ ಸಂಗ್ರಹ ವಿಧಾನ, ಅಧ್ಯಯನ, ಪ್ರಬಂಧ ರಚನೆ ಇತ್ಯಾದಿ ಮೌಲಿಕ ಅಂಶಗಳನ್ನು ತರಗತಿಗಳಲ್ಲಿ ಬೋಧಿಸಲಾಗುವುದು. ಆಸಕ್ತರು ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ತರಗತಿಗಳ ಪ್ರವೇಶಕ್ಕೆ ಅರ್ಜಿಗಳನ್ನು ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಇದೇ 31 ಕೊನೆಯ ದಿನ. ಬಳಿಕ ಸೆ. 15ರವರೆಗೂ ₹ 50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಕಸಾಪ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ತಿಳಿಸಿದ್ದಾರೆ.

9 ತಿಂಗಳ ಕೋರ್ಸ್ ಇದಾಗಿದ್ದು, ಮಂಗಳವಾರದಿಂದ ಶುಕ್ರವಾರದವರೆಗೆ ಸಂಜೆ 6 ರಿಂದ 7 ಗಂಟೆವರೆಗೆ ತರಗತಿ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ ಮೊ.ಸಂಖ್ಯೆ: 8660777643

SBI ಭಾರತೀಯ ಸ್ಟೇಟ್ ಬ್ಯಾಂಕ್, RBO-4, AO-1 BES, NW-1,4ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ, ಕೆ.ಜಿ. ರಸ್ತೆ, ಬೆಂಗಳೂರು-560009

ಅತ್ತಿಬೆಲೆ ಶಾಖೆಗೆ (21615) ಸ್ಥಳಾವಕಾಶ ಬೇಕಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ಅತ್ತಿಬೆಲೆ ಶಾಖೆಗೆ (21615) ಸ್ಥಳಾವಕಾಶಕ್ಕಾಗಿ ಕಟ್ಟಡಗಳ ಮಾಲೀಕರಿಂದ ಪ್ರಸ್ತಾಪಗಳನ್ನು ಆಹ್ವಾನಿಸುತ್ತದೆ. ಸ್ಥಳಾವಕಾಶವು ಸುಮಾರು 2500 ಚದರ ಅಡಿ ಅಳತೆ (+ ಅಥವ - 10%) ಇದ್ದು 25 ಕೆವಿಎ ವಿದ್ಯುತ್ ವ್ಯವಸ್ಥೆ ಇದ್ದು, ಪ್ರಸ್ತುತ ಶಾಖೆಯ ಸುಮಾರು 1 ಕಿಮೀ ಪ್ರದೇಶದಲ್ಲಿರಬೇಕು. ದಿನಾಂಕ 12-08-2022 ರಿಂದ 25-08-2022 ರ ಮಧ್ಯಾಹ್ನ 3.00 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಟೆಂಡರ್ ವಿವರ ಮತ್ತು ನಿಬಂಧನೆಗಳನ್ನು ನಮ್ಮ ಬ್ಯಾಂಕಿನ ವೆಬ್‌ಸೈಟ್ https://bank.sbi ಅಥವಾ www.sbi.co.in ನಲ್ಲಿ ‘ಪ್ರೋಕ್ಯೂರ್‌ಮೆಂಟ್’ ನ್ಯೂಸ್ ಅಡಿಯಲ್ಲಿ ಪಡೆಯಬಹುದು.

ಸ್ಥಳ : ಬೆಂಗಳೂರು
ದಿನಾಂಕ : 12-08-2022

ಪ್ರಾದೇಶಿಕ ವ್ಯವಸ್ಥಾಪಕರು
RBO-4, AO-1 BES, NW-1



'ಸಾಮಾಜಿಕ ನ್ಯಾಯ' ಭಾಷಣದ ಸರಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸಾಮಾಜಿಕ ನ್ಯಾಯ ಎಂಬುದು ಭಾಷಣದ ಸರಕಾಗಿದೆ, ಮಾತಿನಿಂದ ಯಾರನ್ನೂ ಮೇಲ್ಕೆ ಮಾಡಲು ಸಾಧ್ಯವಿಲ್ಲ. ನಾಮಕಾವಸ್ತೆ ಯೋಜನೆಗಳಿಂದ ಜನರನ್ನು ಮೆಚ್ಚಿಸಲು ಸಾಧ್ಯವಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಪರೋಕ್ಷವಾಗಿ ಟೀಕಿಸಿದರು.

ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ನಗರದ ಮಂಡ್ಯ ವಿ.ವಿ ಆವರಣದಲ್ಲಿ ಗುರುವಾರ 'ಸಂಜೀವಿನಿ ಸಾಮರ್ಥ್ಯ, ಜೀವನೋಪಾಯ ವರ್ಷ: 2022–23'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'60 ತಿಂಗಳ ಅಧಿಕಾರದಲ್ಲಿ 59 ತಿಂಗಳು ಅಭಿವೃದ್ಧಿ ಕೆಲಸ ಮಾಡಬೇಕು, ಒಂದು ತಿಂಗಳು ಮಾತ್ರ ರಾಜಕಾರಣ ಮಾಡಬೇಕು. ನಾವು ನುಡಿದಂತೆ ನಡೆಯುತ್ತಿದ್ದೇವೆ, ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುತ್ತಿದ್ದೇವೆ' ಎಂದರು.

'ಹೆಣ್ಣು ಮಕ್ಕಳಿಗೆ ದುಡಿಯುವ ಅವಕಾಶ ನೀಡುವ ಉದ್ದೇಶದಿಂದ ರಾಜ್ಯದ ಪ್ರತಿ ಹಳ್ಳಿಯ ಒಂದು ಮಹಿಳಾ ಸ್ವಸಹಾಯ ಸಂಘಕ್ಕೆ ₹ 1.50 ಲಕ್ಷ ಧನಸಹಾಯ ನೀಡುವುದಲ್ಲದೆ ₹ 500 ಕೋಟಿ ಮೀಸಲಿಡಲಾಗಿದೆ. ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ ಅಡಿ ಪ್ರತಿ ಹಳ್ಳಿಯ ಒಂದು ಯುವ ಸಂಘಟನೆಗೂ ₹ 1.50 ಲಕ್ಷ ನೀಡಲಾಗುವುದು' ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿದರು.

ಮಂಡ್ಯ ವಿ.ವಿ ತರಾತುರಿ ಉದ್ಘಾಟನೆ

ಮಂಡ್ಯ ಕೇಂದ್ರಿತ ವಿಶ್ವವಿದ್ಯಾಲಯವನ್ನು (ಪ್ರಥಮ ದರ್ಜೆ ಸರ್ಕಾರಿ ಮಹಾವಿದ್ಯಾಲಯ) ಯಾವುದೇ ಪೂರ್ವಸಿದ್ಧತೆ ಇಲ್ಲದಿದ್ದರೂ ತರಾತುರಿಯಲ್ಲಿ ಮುಖ್ಯಮಂತ್ರಿ ಗುರುವಾರ ಉದ್ಘಾಟಿಸಿದರು. ಜೀವನೋಪಾಯ ವರ್ಷ ಉದ್ಘಾಟನೆ ಜೊತೆಗೆ ವಿ.ವಿ ಉದ್ಘಾಟನೆಯೂ ನಡೆಯಿತು. ವಿಶ್ವವಿದ್ಯಾಲಯದ ಆಡಳಿತ ಭವನ, ಕಲಾ, ವಾಣಿಜ್ಯ ವಿಭಾಗದ ಕಟ್ಟಡಗಳಿಗೆ ಚಾಲನೆ ನೀಡಲಾಯಿತು. ಅಂತಿಮ ಕ್ಷಣದಲ್ಲಿ ಕಾರ್ಯಕ್ರಮ ನಿಗದಿಯಾದ ಕಾರಣ ಯಾವುದೇ ಸಿದ್ಧತೆ ಆಗಿರಲಿಲ್ಲ.

ಮುಖ್ಯಮಂತ್ರಿ ಭೇಟಿ ಹಿನ್ನೆಲೆಯಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ವಿಶ್ವವಿದ್ಯಾಲಯದ ಕಾಂಪೌಂಡ್ ಒಡೆದಿರುವುದು ಜನರ ಆಕ್ರೋಶಕ್ಕೆ ಕಾರಣವಾಯಿತು.

ಖಾಲಿ ಕುರ್ಚಿಗೆ ಸಿ.ಎಂ ಭಾಷಣ: ಕಾರ್ಯಕ್ರಮ ಮಧ್ಯಾಹ್ನ 1 ಗಂಟೆಗೆ ನಿಗದಿಯಾಗಿತ್ತು. ಮಹಿಳಾ ಸಂಘಗಳ ಸಾವಿರಾರು ಮಹಿಳೆಯರು ಬೆಳಿಗ್ಗೆಯೇ ಬಂದು ಸೇರಿದ್ದರು. ಆದರೆ, ಕಾರ್ಯಕ್ರಮ ಆರಂಭವಾದಾಗ ಮಧ್ಯಾಹ್ನ 3.15 ಆಗಿತ್ತು. ಸಿ.ಎಂ ಮಾತಿಗೆ ನಿಂತಾಗ 4 ಗಂಟೆಯಾಗಿತ್ತು. ಆ ವೇಳೆಗೆ ಕುರ್ಚಿಗಳೆಲ್ಲವೂ ಖಾಲಿಯಾಗಿದ್ದವು.

ಬಜೆಟ್‌ನಲ್ಲಿ ನೀಡಿದ ಮೊತ್ತಕ್ಕಿಂತ ಮೂರುಪಟ್ಟು ಹೆಚ್ಚು ಮೊತ್ತಕ್ಕೆ ಮಂಜೂರಾತಿ

ಚುನಾವಣೆಗೆ ಕಣ್ಣು: ಕಾಮಗಾರಿಗೆ ಒತ್ತು

● ಭರತ್ ಜೋಶಿ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ರಾಜಕೀಯ ಪಕ್ಷಗಳು ಅಣಿಗೊಳ್ಳುತ್ತಿರುವ ಹೊತ್ತಿನಲ್ಲೇ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಒದಗಿಸಿದ ಮೊತ್ತಕ್ಕಿಂತ ಸುಮಾರು ಮೂರು ಪಟ್ಟು ಅಧಿಕ ವೆಚ್ಚದ 13 ಸಾವಿರಕ್ಕೂ ಹೆಚ್ಚು ಗ್ರಾಮೀಣ ರಸ್ತೆಗಳ ಕಾಮಗಾರಿಗಳಿಗೆ ಬಿಜೆಪಿ ಸರ್ಕಾರ ಮಂಜೂರಾತಿ ನೀಡಿದೆ.

ಒಂದೇ ಲೆಕ್ಕ ಶೀರ್ಷಿಕೆಯಡಿ (5054) ಈ ಎಲ್ಲ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪೈಕಿ ಬಹುತೇಕ ಕಾಮಗಾರಿಗಳಿಗೆ ಶಾಸಕರ ಬೇಡಿಕೆಯಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಜೂರಾತಿ ನೀಡಿದ್ದಾರೆ.

ಬಜೆಟ್‌ನಲ್ಲಿ ಅನುದಾನ ಒದಗಿಸದೇ ಇದ್ದರೂ, ಗ್ರಾಮೀಣ ರಸ್ತೆಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡುವ ಮೂಲಕ ಶಾಸಕರನ್ನು ಸಂತೃಪ್ತಿಪಡಿಸಲು ಮುಖ್ಯಮಂತ್ರಿ ಮುಂದಾಗಿದ್ದಾರೆ ಎಂದು ಹೇಳಲಾಗಿದೆ.

ಗ್ರಾಮೀಣ ರಸ್ತೆ ಕಾಮಗಾರಿ

ವರ್ಷ	ಕಾಮಗಾರಿ	ವೆಚ್ಚ (₹ ಕೋಟಿಗಳಲ್ಲಿ)	ಬಜೆಟ್ ಅನುದಾನ (₹ ಕೋಟಿಗಳಲ್ಲಿ)
2021-22	10,761	2,783,47	800
2022-22	3,089	1,465.14	720
ಒಟ್ಟು	13,850	4,248.61	1,520

ಪ್ರಜಾವಾಣಿ ವಿಶೇಷ

2021-22 ಮತ್ತು 2022–23ನೇ ಸಾಲಿನ ಬಜೆಟ್‌ನಲ್ಲಿ ₹ 1,520 ಕೋಟಿ ಮೊತ್ತವನ್ನು ಈ ಉದ್ದೇಶಕ್ಕೆ ನೀಡಲಾಗಿತ್ತು. ಈ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರ ₹ 4,248.61 ಕೋಟಿ ವೆಚ್ಚದ ಒಟ್ಟು 13,850 ರಸ್ತೆ ಕಾಮಗಾರಿಗಳಿಗೆ ಮಂಜೂರಾತಿ ನೀಡಿದೆ.

ಒಟ್ಟು ಕಾಮಗಾರಿಯಲ್ಲಿ ಐದನೇ ಎರಡು ಭಾಗದಷ್ಟು ಕಾಮಗಾರಿಗಳನ್ನು ಬಿಜೆಪಿ ಪಾಲಿಗೆ ಮಹತ್ವದ ಜಿಲ್ಲೆಗಳಾದ ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ತುಮಕೂರು ಜಿಲ್ಲೆಗಳಿಗೆ ಮಂಜೂರು ಮಾಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಬಿಜೆಪಿ ತನ್ನ ಶಕ್ತಿ ವೃದ್ಧಿಸಿಕೊಳ್ಳಲು ಯತ್ನಿಸುತ್ತಿರುವ ಹಾಸನ, ತುಮಕೂರು ಮತ್ತು ರಾಮನಗರ ಜಿಲ್ಲೆಗಳಿಗೆ ಅತೀ ಹೆಚ್ಚು ಸಂಖ್ಯೆಯಲ್ಲಿ ಹೊಸ ರಸ್ತೆ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

ಆದರೆ, ಇತ್ತೀಚೆಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಪೈಕಿ ಹಲವು ರಸ್ತೆಗಳ ಕಾಮಗಾರಿ ಇನ್ನೂ ಆರಂಭ ಆಗದಿರುವುದನ್ನು ಗಮನಿಸಿರುವ ಮುಖ್ಯಮಂತ್ರಿ, ಶೀಘ್ರದಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಕಾಮಗಾರಿಗಳು ಪೂರ್ಣಗೊಂಡ ಬಳಿಕ ಬಿಲ್‌ಗಳ ಪಾವತಿಗಾಗಿ ಆಡಳಿತಾತ್ಮಕ ಅನುಮೋದನೆಗೆ ಕಳುಹಿಸಲಾಗುತ್ತದೆ. ಈ ಬಿಲ್‌ಗಳನ್ನು ಬಾಕಿ ಬಿಲ್‌ಗಳೆಂದು ಪರಿಗಣಿಸಿ ಪೂರಕ ಅಂದಾಜಿನಲ್ಲಿ ಸೇರಿಸಲಾಗುತ್ತದೆ. ಆ ಮೂಲಕ, ಬಜೆಟ್ ಹಂಚಿಕೆಗಿಂತಲೂ ಹೆಚ್ಚು ಎಂದು ಪರಿಗಣಿಸಿ ಪಾವತಿಸಲಾಗುತ್ತದೆ' ಎಂದು ಆರ್ಥಿಕ ಇಲಾಖೆ ಮೂಲಗಳು ತಿಳಿಸಿವೆ.

'ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ (2018-19) ಅವಧಿಯಿಂದಲೂ 5054 ಲೆಕ್ಕ ಶೀರ್ಷಿಕೆಯಡಿ ಮಂಜೂರಾತಿ ನೀಡಿದ ಕಾಮಗಾರಿಗಳ ಬಿಲ್ ಬಾಕಿ ಇದೆ. ಆಗ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ ಅವರು ₹ 983 ಕೋಟಿ ಮೊತ್ತದ ಬಿಲ್‌ಗಳನ್ನು ವಿಲೇವಾರಿ ಮಾಡಿದ್ದರು. ಆ ಬಳಿಕ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸುಮಾರು ₹ 2,100 ಕೋಟಿ ವೆಚ್ಚದ ರಸ್ತೆ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ತಿರಂಗಾದ ಬಗ್ಗೆ ಹಗುರ ಮಾತು ದೇಶಭಕ್ತಿಯಲ್ಲ'

ಮೈಸೂರು: 'ತ್ರಿವರ್ಣ ಧ್ವಜದ ಬಗ್ಗೆ ಹಗುರವಾಗಿ ಮಾತನಾಡುವುದು ದೇಶಭಕ್ತಿಯಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ಗುರುವಾರ ಪ್ರತಿಪಾದಿಸಿದರು.

'ಹರ್ ಘರ್ ತಿರಂಗಾ' ಅಭಿಯಾನದ ಕುರಿತು ಕಾಂಗ್ರೆಸ್ ನಾಯಕರ ಟೀಕೆಗೆ ತಿರುಗೇಟು ನೀಡಿದ ಅವರು, 'ದೇಶ ಮತ್ತು ನಮ್ಮ ಜನರ ಭಾವನೆ ದೊಡ್ಡದಿದೆ. ಜನರು ಸ್ವಯಂ ಪ್ರೇರಣೆಯಿಂದ ಮನೆಗಳ ಮೇಲೆ ಹಾರಿಸುತ್ತಾರೆ' ಎಂದರು.

ಕರ್ನಾಟಕ ಸರಕಾರ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹಾನಗಲ್ಲ ತಾ॥ ಹಾನಗಲ್ಲ–581104 ಹಾವೇರಿ ಜಿಲ್ಲೆ

ದೂರವಾಣಿ ಸಂ. 08379–262265 E-mail : cdpohangal@gmail.com

ಸಂಖ್ಯೆ: ಶಿಅಯೋಹಾ/ಕೋಮೊ/ಟೆಂಡರ/ಪ್ರ/2022–23 ದಿನಾಂಕ : 08–08–2022

ಅಂಗನವಾಡಿ ಕೇಂದ್ರಗಳಿಗೆ ಕೋಳಿಮೊಟ್ಟೆ ಸರಬರಾಜು ಮಾಡಲು ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ ಮರು ಟೆಂಡರ್ ಪ್ರಕಟಣೆ

(1) ಟೆಂಡರ್ ಉಲ್ಲೇಖ ಸಂಖ್ಯೆ : ಶಿಅಯೋಹಾ/ಮೊಟ್ಟೆ/ಟೆಂಡರ್/2022–23 ದಿನಾಂಕ : 08.08.2022 (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : **08.08.2022** (3) ಇ–ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **20.08.2022** ರಿಂದ 5:00 PM ರವರೆಗೆ (4) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : **22.08.2022**, 11:00 AM ಅನಂತರ (5) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **26.08.2022**, 11:00 AM (6) ಟೆಂಡರ್‌ಗಳನ್ನು ತೆರೆಯುವ ಸ್ಥಳ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (7) EMD ಮೊತ್ತ : ರೂ. **237281=00** (8) ಟೆಂಡರ್ ಮೊತ್ತ : ರೂ. **15818700=00** (9) ಸಂವಹನಕ್ಕಾಗಿ ವಿಳಾಸ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನವನಗರ ಕ್ರಾಸ್, ಹಾನಗಲ್ಲ, ಹಾವೇರಿ, ಕರ್ನಾಟಕ –581104 ಇಮೇಲ್ : cdpohangal@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಹಾನಗಲ್ಲ

ವಾಸಾಸಂಇ/ಹಾವೇರಿ/ಎಂಸಿಎ/216/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ನರಸಿಂಹರಾಜ ಚೌಕ, ಬೆಂಗಳೂರು – 02.

ಸಂಖ್ಯೆ: ಕಾಪಾಅ/ರಮೂಸೌ–ಟಿಇಸಿ/ಟೆಂಡರ್/12/2022–23 ದಿನಾಂಕ: 11.08.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಗಳಲ್ಲಿ ಪ್ರಧಾನ ಮತ್ತು ಉಪ ಪ್ರಧಾನ ರಸ್ತೆಗಳಿಗೆ ಸಂಚಾರ ಪೊಲೀಸರ ಅವಶ್ಯಕತೆಯಂತೆ ರಂಬ್ಲರ್ ಸ್ಟ್ರಿಪ್‌ಗಳಿಗೆ ಥರ್ಮೋಪ್ಲಾಸ್ಟಿಕ್ ಬಣ್ಣ ಬಳಿಯುವುದು, ಪ್ರಸ್ತುತವಿರುವ ರಸ್ತೆ ಉಬ್ಬುಗಳಿಗೆ ಬಣ್ಣ ಬಳಿಯುವುದು, ಜಂಕ್ಷನ್ ಗುರುತಿಸುವಿಕೆ, ಕರ್ಬ್ ಮತ್ತು ಮೀಡಿಯನ್‌ಗಳಿಗೆ ಬಣ್ಣ ಬಳಿಯುವುದು ಹಾಗೂ ಇತರೆ ಸಂಬಂಧಿತ ರಸ್ತೆ ಸುರಕ್ಷತೆ ನಿಬಂಧನೆಗಳನ್ನು ಒದಗಿಸುವುದು.	320.68	4.90

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆಯ ದಿನಾಂಕ: **12.08.2022**ರಿಂದ (2) ಬಿಡ್–ಪೂರ್ವಭಾವಿ ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **19.08.2022**ರ ಮಧ್ಯಾಹ್ನ **1:30** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **19.08.2022**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **23.08.2022**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ **24.08.2022**ರ ಸಂಜೆ **4:30** ಗಂಟೆಗೆ. (6) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕವನ್ನು ನಂತರ ಟೆಂಡರುದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, (ರಮೂ–ಟಿ.ಇ.ಸಿ)

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾವೇರಿ ಭವನ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಬೆಂಗಳೂರು–560009 ದೂರವಾಣಿ ಸಂಖ್ಯೆ: 2311 8888

ಈ–ಮೇಲ್ : https://ashraya.karnataka.gov.in

ನೋಟಿಫಿಕೇಷನ್ ನಂ. ಆರ್‌ಜಿಹೆಚ್‌ಸಿಎಲ್ 02 ಎಲ್‌ಆರ್‌ಪಿ 2022 ದಿನಾಂಕ: 11.08.2022

ಸರ್ಕಾರದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೆರವು ನೀಡಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಕೊಟೇಷನ್ ಆಹ್ವಾನ (2ನೇ ಪ್ರಕಟಣೆ) (ಮರು ಟೆಂಡರ್)

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು ಕರ್ನಾಟಕ ಸರ್ಕಾರದ ವತಿಯಿಂದ ಕಂಪನಿ ಕಾಯ್ದೆಯನ್ವಯ ನೋಂದಣಿಯಾಗಿರುವ ಕಂಪನಿಯಾಗಿದ್ದು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ವಸತಿಯನ್ನು ಕಲ್ಪಿಸಲು ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದೆ. ನಿಗಮದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ರೂ.250 ಕೋಟಿಗಳ ಸಾಲ ಪಡೆಯಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಅನುಮತಿ ನೀಡಿದೆ. ಕರ್ನಾಟಕ ಸರ್ಕಾರದ ಖಾತರಿಯ ಆಧಾರದಲ್ಲಿ ಸಾಲ ಪಡೆಯಲಾಗುವುದು. ಸದರಿ ಸಾಲವನ್ನು ಫಲಾನುಭವಿ ವಂತಿಕೆಯಿಂದ ಭರಿಸಲಾಗುವುದು.

ನಿಗಮವು ದಿನಾಂಕ 01.09.2022 ರೊಳಗೆ ಸಾಲದ ಮೊತ್ತವನ್ನು ಡ್ರಾ ಮಾಡಲು ಪ್ರಸ್ತಾಪಿಸಿರುತ್ತದೆ. ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ನಮೂದಿಸುವ ಬಡ್ಡಿಯ ದರಗಳು ದಾಖಲೆಗಳಲ್ಲಿ ನಮೂದಿಸಿದಂತೆ ಸಂಪೂರ್ಣ ಸಾಲಕ್ಕೆ ಅನ್ವಯವಾಗಲಿದೆ.

ನಿಗಮಕ್ಕೆ ಸಾಲ ನೀಡುವಾಗ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳು ಅನ್ವಯವಾಗುತ್ತವೆ.

1. ಕನಿಷ್ಠ ಒಂದು ವರ್ಷದ ಮಾರಿಟೋರಿಯಂನೊಂದಿಗೆ, ಸಾಲ ಮರುಪಾವತಿಯ ಅವಧಿ 10 ವರ್ಷ.
2. ಬಡ್ಡಿ ದರವನ್ನು ಮಾಸಿಕ ಆಧಾರದಲ್ಲಿ ಲೆಕ್ಕಹಾಕಲಾಗುವುದು, ರಾಜ್ಯ ಸರ್ಕಾರದ ನಿಯಮಾನುಸಾರ ಬಡ್ಡಿ ಮತ್ತು ಅಸಲನ್ನು ತ್ರೈಮಾಸಿಕವಾಗಿ ಮರು ಪಾವತಿಸಲಾಗುವುದು.
3. ವಾರ್ಷಿಕ ಮರುಹೊಂದಾಣಿಕೆಯೊಂದಿಗೆ, ಒಂದು ವರ್ಷದ ಅವಧಿಗೆ MCLR ಬಡ್ಡಿಯ ದರವನ್ನು ಲೆಕ್ಕ ಹಾಕಬೇಕು.
4. ಯಾವುದೇ ದಾಖಲಾತಿ ಶುಲ್ಕ, ಸಂಸ್ಕರಣಾ ಶುಲ್ಕ ಹಾಗೂ ತೆರಿಗೆ ಇತ್ಯಾದಿ ಶುಲ್ಕಗಳನ್ನು ವಿಧಿಸುವಂತಿಲ್ಲ.
5. ನಿಗಮದಿಂದ ಬಡ್ಡಿ ಪಾವತಿಸುವ ಅಥವಾ ಸಾಲದ ಅವಧಿಗಿಂತ ಮುಂಚಿತವಾಗಿ ಸಾಲವನ್ನು ಸಂಪೂರ್ಣ ಪಾವತಿಸುವ ಸಂದರ್ಭದಲ್ಲಿ ಯಾವುದೇ ದಂಡವನ್ನು ವಿಧಿಸಬಾರದು.

ಆಸಕ್ತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ಅಲ್ಪಾವಧಿ ಸಾಲಕ್ಕಾಗಿ ಕಡಿಮೆ ದರವನ್ನು ನಮೂದಿಸಿ, ಇತರೆ ನಿಯಮಗಳು ಮತ್ತು ಇತರೆ ವೆಚ್ಚಗಳನ್ನು ಸೇರಿಸಿ ಕೊಟೇಷನ್ ಸಲ್ಲಿಸಬಹುದು, ಕೊಟೇಷನ್ ಅನ್ನು ಬ್ಯಾಂಕ್/ಹಣಕಾಸು ಸಂಸ್ಥೆ ಸಲ್ಲಿಸಬಹುದು ಅಥವಾ ಒಂದು ಬ್ಯಾಂಕ್/ ಹಣಕಾಸು ಸಂಸ್ಥೆಯಿಂದ ಕನಿಷ್ಠ ರೂ.50.00 ಕೋಟಿ ಸಾಲ ನೀಡುವಂತೆ ಬ್ಯಾಂಕುಗಳ ಒಕ್ಕೂಟವೂ ಕೊಟೇಷನ್ ಸಲ್ಲಿಸಬಹುದು, ಬ್ಯಾಂಕುಗಳ ಒಕ್ಕೂಟ ಕೊಟೇಷನ್ ನೀಡಿದಾಗ ಎಲ್ಲಾ ಬ್ಯಾಂಕುಗಳೂ ಒಂದೇ ಬಡ್ಡಿದರವನ್ನು ನಮೂದಿಸಬೇಕು ಮತ್ತು ನಿಯಮಾವಳಿಗಳು ಏಕರೂಪವಾಗಿರಬೇಕು. ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ನಿರ್ದಿಷ್ಟ ಸಾಲದ ಸ್ವರೂಪದ ಆಧಾರದಲ್ಲಿ ನಿರ್ದಿಷ್ಟ ಬಡ್ಡಿ ದರಗಳನ್ನು ನಮೂದಿಸಬೇಕು. ಸರಾಸರಿ ದರಗಳನ್ನು ನಮೂದಿಸಬಾರದು. ಸರಾಸರಿ ದರಗಳನ್ನು ನಮೂದಿಸಿದ ಬ್ಯಾಂಕುಗಳನ್ನು ಪರಿಗಣಿಸಲಾಗುವುದಿಲ್ಲ. ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ನೀಡಲಾದ ದರಗಳನ್ನು ಮಾತ್ರ ಪರಿಗಣಿಸಲಾಗುವುದು.

ಕೊಟೇಷನ್ ಸಲ್ಲಿಸಲು ಕೊನೆಯ ದಿನಾಂಕ: 22.08.2022 ಮಧ್ಯಾಹ್ನ 04.00 ಗಂಟೆ. ನಿಗದಿತ ಸಮಯದ ನಂತರ ಸಲ್ಲಿಕೆಯಾಗುವ ಕೊಟೇಷನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಮೊಹರು ಮಾಡಿದ ಕೊಟೇಷನ್ ಲಕೋಟೆಯ ಮೇಲೆ **"ಮುಖ್ಯ ಮಂತ್ರಿಗಳ ಒಂದು ಲಕ್ಷ ವಸತಿ ಯೋಜನೆಯ ಅನುಷ್ಠಾನಕ್ಕಾಗಿ ಅಲ್ಪಾವಧಿ ಸಾಲ ಒದಗಿಸಲು ಕೊಟೇಷನ್"** ಎಂದು ನಮೂದಿಸಿ, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ರಾ.ಗಾಂ.ವ.ನಿ.ನಿ

ವಾ.ಸಾ.ಸಂ.ಇ/ವಾಪ್ರ/1773/ಅಕಾರ್/22-23

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ 4/2022–23 ದಿನಾಂಕ 10–8–2022

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಹುಣಸೂರು ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಟೆಂಡರ್ ಕರೆಯಲಾಗಿದ್ದು, **ದಿನಾಂಕ: 10.8.2022** ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ **ರೂ. 125.15 ಲಕ್ಷಗಳು** ಮತ್ತು ಕನಿಷ್ಠ **ರೂ. 72.23 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ. 2,00,000/– ಮತ್ತು ಕನಿಷ್ಠ ರೂ. 1,44,460/–** ಗುತ್ತಿಗೆ ಕಾಲಾವಧಿ **ಗರಿಷ್ಠ 9–ತಿಂಗಳು ಕನಿಷ್ಟ 4–ತಿಂಗಳು** ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ **20.8.2022 (16.00 ಗಂಟೆಯವರೆಗೆ)** ಎಂದು ನಿಗದಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ವಾಸಾಸಂಇ/ಉನಿ–ಮೈ/ಎಂಸಿ&ಎ/365/2022–23

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ, ಹುಬ್ಬಳ್ಳಿ

ನಂ:ಎಚ್.ಡಿ.ಎಮ್.ಸಿ./74/05/2022–23 ದಿನಾಂಕ : 11–08–2022

ದರವಾರು ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಹುಬ್ಬಳ್ಳಿ ವಿಭಾಗದ ಕಾರವಾರ ರಸ್ತೆಯಲ್ಲಿರುವ ಗಾರ್ಬೇಜ್ ಯಾರ್ಡ್‌ಗೆ ಹಾಗೂ ಧಾರವಾಡ ವಿಭಾಗದ ಹೊಸಯಲ್ಲಾಪೂರ ಗಾರ್ಬೇಜ್ ಯಾರ್ಡ್‌ಗೆ ನಗರದಿಂದ ಪ್ರತಿನಿತ್ಯ ಮನೆ–ಮನೆಯಿಂದ ಸಂಗ್ರಹಿಸುವ ಕಸವು, ವಾಣಿಜ್ಯ ಪ್ರದೇಶಗಳಿಂದ ಬರುವ ಘನತ್ಯಾಜ್ಯವು ಆಟೋಟಿಪ್ಪರ, ಹುಕ್ಕ ಲೋಡರ್ ವಾಹನಗಳು, ಕಂಪ್ಯಾಕ್ಟರ್ ವಾಹನಗಳು ಮುಖಾಂತರ ಸಂಗ್ರಹಿಸಿ ಕಾರವಾರ ರಸ್ತೆಯಲ್ಲಿರುವ ಗಾರ್ಬೇಜ್ ಯಾರ್ಡ್‌ಗೆ ತಂದು ವಿಲೇವಾರಿ ಮಾಡಲಾಗುತ್ತಿದೆ. ಸದರಿ ಜಾಗದಲ್ಲಿರುವ ಹಳೆಯ ಕಸವನ್ನು ಒಂದೆಡೆ ಸೇರಿಸಿ ಅದನ್ನು ಸಮತಟ್ಟು ಮಾಡಲು ಒಂದು Dozer (Wheeled –D50) ಅವಶ್ಯವಿರುತ್ತದೆ. ಸಧ್ಯ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ದರ ಪಟ್ಟಿ 2021–22 ರಲ್ಲಿ Dozer (Wheeled –D50) ಭಾಡಿಗೆ ಆಧಾರದ ಮೇಲೆ ಪಡೆಯಲು ಏಕ ರೂಪದ ದರಗಳು ಲಭ್ಯವಿಲ್ಲದ ಕಾರಣ ಮಾರುಕಟ್ಟೆಯ ಪ್ರತಿ ದಿನದ ಭಾಡಿಗೆ ದರವನ್ನು ನಿಗದಿಪಡಿಸುವ ಬಗ್ಗೆ ದರವಾರು ಕೇಳಿ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಈ ಕೆಳಕಂಡ ನಿಗದಿತ ನಮೂನೆಯಲ್ಲಿ ದಿ: **16/08/2022** ಸಮಯ ಸಂಜೆ 05:30 ಗಂಟೆಯೊಳಗೆ ಮೊಹರು ಮಾಡಿ ಮುಚ್ಚಿದ ಲಕೋಟೆಯಲ್ಲಿ ಅಥವಾ ಇ–ಮೇಲ್ ವಿಳಾಸ **hdmcswm2021@gmail.com** ಈ ಕೆಳಗೆ ಸಹಿ ಮಾಡಿದ ಅಧಿಕಾರಿಯ ಕಛೇರಿಗೆ ಸಲ್ಲಿಸಲು ಗುತ್ತಿಗೆದಾರರು/ಸರಬರಾಜುದಾರರಲ್ಲಿ ಕೋರಿದೆ.

ಕ್ರ.ಸಂ.	ಯಂತ್ರೋಪಕರಣದ ವಿವರ	ಪ್ರಮಾಣ	ಪ್ರತಿ ಘಂಟೆಗೆ ರೂ.
1	Hiring of Dozer (Wheeled –D50) for Shifting of garbage in MSW Processing Site of Hubli and Dharwad		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(SWM) ಹು–ಧಾ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾಸಾಸಂಇ/ಧಾ/ಎಂಸಿಎ/446/2022–23

KARNATAKA NEERAVARI NIGAM LIMITED

(A Government of Karnataka Enterprises)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.

ಸಂ1)ಕನೀನಿನಿ/ಜಿಆರ್‌ಬಿಸಿಸಿವಿ–3/ಡಿಬಿ/ಚಚಡಿಎಲ್‌ಆಯ್‌ಎಸ್/ಟೆಂಡರ್/2022–23/6ದಿನಾಂಕ:–11–08–2022.2) ಕನೀನಿನಿ/ಜಿಆರ್‌ಬಿಸಿಸಿ ವಿ–3/ಡಿಬಿ/ಗೊಡಚಿನಮಲ್ಕಿಎಲ್‌ಆಯ್‌ಎಸ್ ಸ್ಟೇಜ್–1 ಟೆಂಡರ/2022–23/7 ದಿನಾಂಕ:– 11–08–2022

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ–2 ಮತ್ತು 3 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಶೇಕಡಾ ವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಎರಡು ಲಕೋಟೆ ಪದ್ಧತಿಯಲ್ಲಿ) ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಟೆಂಡರ ಕರೆಯಲಾಗಿದೆ.

(1) ಚಚಡಿ ಏತ ನೀರಾವರಿ ಯೋಜನೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಕಾಮಗಾರಿಗಳಿಗೆ (05) ಕಾಮಗಾರಿಗಳ ಇಂಡೆಂಟ್ ನಂಬರುಗಳು. 32940, 32935, 33493, 32936, 32937 ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 33.53 ಲಕ್ಷ ದಿಂದ ರೂ. 48.41 ಲಕ್ಷಗಳು ಇರುತ್ತದೆ. (2) ಚಚಡಿ ಏತ ನೀರಾವರಿ ಯೋಜನೆಯ ಸಾಮಾನ್ಯ ಕಾಮಗಾರಿಗಳು (15) ಕಾಮಗಾರಿಗಳ ಇಂಡೆಂಟ್ ನಂಬರುಗಳು. 32951, 33494, 32955, 32933, 32941, 32942, 32943, 32944, 32945, 32945, 32946, 32947, 32949, 32954, 33495, 33496,) ಇಟ್ಟ ಅಂದಾಜು ಟೆಂಡರ ಮೊತ್ತವು (ಜಿ.ಎಸ್.ಟಿ. ಹೊರಗೊಂಡಿರುತ್ತದೆ) ರೂ. 35.06 ಲಕ್ಷ ದಿಂದ ರೂ. 98.15 ಲಕ್ಷಗಳು ಇರುತ್ತದೆ (3) ಗೊಡಚಿನಮಲ್ಕಿ ಎಲ್‌ಆಯ್‌ಎಸ್ ಸ್ಟೇಜ್–1 ಸಾಮಾನ್ಯ ಕಾಮಗಾರಿ ಇಂಡೆಂಟ್ ನಂಬರುಗಳು. 32568 ರೂ. 59.22 ಲಕ್ಷಗಳು ಇರುತ್ತದೆ. (1) ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಟೆಂಡರ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ 22–08–2022 17.00 ಘಂಟೆಯವರೆಗೆ (2) ಟೆಂಡರಗಳನ್ನು ದಿ: 16–08–2022 ರಿಂದ ದಿ: 23–08–2022 ರಂದು 17.00 ಘಂಟೆಯವರೆಗೂ ಸಲ್ಲಿಸಬಹುದಾಗಿದೆ. (3) ತಾಂತ್ರಿಕ ಬಿಡ್ ತೆರೆಯುವ ದಿ: 25–08–2022, 11.00 ಘಂಟೆ (4) ಆರ್ಥಿಕ ಬಿಡ್ ತೆರೆಯುವ ದಿ: ತಾಂತ್ರಿಕ ಬಿಡ್ ಅನುಮೋದನೆ ಪಡೆದ ನಂತರ.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://eproc.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು / ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಇ–ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು ಕನೀನಿನಿ ಜಿಆರಬಿಸಿಸಿ ವಿಭಾಗ ನಂ–3, ಗೋಕಾಕ.

DIPR/BGM/RO-NO-693/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಬಿಬಿಎಂಪಿ, ಆನೆಕ್ಸ್ ಕಟ್ಟಡ – 3, ರೂಮ್ ನಂ. 5, ಎನ್. ಆರ್. ವೃತ್ತ, ಬೆಂಗಳೂರು – 560 002

ಸಂ:ಉಅಸಂ/ಪಿಆರ್/ಟೆಂಡರ್/03/2022–23 ದಿನಾಂಕ: 09.08.2022

ತಿದ್ದುಪಡಿ – I

ದಿನಾಂಕ 11.08.2022ರಂದು ಈ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಟೆಂಡರ್ ಪ್ರಕಟಣೆ ಸಂಖ್ಯೆ : **NO. DCF/TENDER/03/2022-23 DATE : 09.08.2022**ರ ಬೊಮ್ಮನಹಳ್ಳಿ ವಲಯದ ಕ್ರಮಸಂಖ್ಯೆ 1 – ಬ್ಲಾಕ್–1ರ ಟೆಂಡರ್‌ಗಿಟ್ಟ ಅಂದಾಜು ಮೊತ್ತವನ್ನು ರೂ. 7,80,000/– ರ ಬದಲಾಗಿ ರೂ. 78,00,000/– ಎಂದು ಓದಿಕೊಳ್ಳುವುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

ಕರ್ನಾಟಕ ಸರಕಾರ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹಾವೇರಿ

ದೂರವಾಣಿ ಸಂ. 08375–232164 E-mail : cdpohvr232164@gmail.com

2022–23 ನೇ ಸಾಲಿನ ಕೋಳಿ ಮೊಟ್ಟೆ ಖರೀದಿಯ ಪರಿಷ್ಕೃತ ಟೆಂಡರ್ ವೇಳಾಪಟ್ಟಿ

(1) ಟೆಂಡರ್ ಉಲ್ಲೇಖ ಸಂಖ್ಯೆ : DWCD/2022-23/IND1708 ದಿನಾಂಕ : **15.07.2022** (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : **15.07.2022** (3) ಇ–ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **13.08.2022** ರಿಂದ 5:00 PM ರವರೆಗೆ (4) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : **16.08.2022**, 11:00 AM ಅನಂತರ (5) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **22.08.2022**, 11:00 AM (6) ಟೆಂಡರ್‌ಗಳನ್ನು ತೆರೆಯುವ ಸ್ಥಳ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (7) ಟೆಂಡರ್ ಮೊತ್ತ : ರೂ. **15892200** (8) ಇ ಎಮ್ ಡಿ ಮೊತ್ತ : ರೂ. **238400** (9) ಸಂವಹನಕ್ಕಾಗಿ ವಿಳಾಸ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜೆ.ಹೆಚ್ ಪಟೇಲ ಸರ್ಕಲ್, ಮುನ್ಸಿಪಲ್ ಹೈಸ್ಕೂಲ್ ರೋಡ ಹಾವೇರಿ ತಾಲೂಕು ಹಾವೇರಿ ಜಿಲ್ಲೆ, ಪಿನ್‌ಕೋಡ್–581110 ದೂರವಾಣಿ: **+919481966242–** <<**08375** ಕೋಡ್, ಲ್ಯಾಂಡ್‌ಲೈನ್ ಸಂಖ್ಯೆ–232164 ಇಮೇಲ್: email id- **cdpohvr232164@gmail.com**

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಹಾವೇರಿ

ವಾಸಾಸಂಇ/ಹಾವೇರಿ/ಎಂಸಿಎ/212/2022–23

ಕರ್ನಾಟಕ ಸರ್ಕಾರ

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ವಿಜಯನಗರ. ಎಂ.ಪಿ. ಪ್ರಕಾಶ್ ನಗರ, **ಹೊಸಪೇಟೆ –583201 ದೂರವಾಣಿ ಸಂಖ್ಯೆ: 9480855005**

ಇಮೇಲ್:ceozpvijayanagara@gmail.com

ಸಂಖ್ಯೆ:ಜಿ.ಪಂ.ವಿ/ಆಡಳಿತ/ಹೊರಗುತ್ತಿಗೆ/1/2022–23/ ದಿನಾಂಕ:10–08–2022.

2022–23ನೇ ಸಾಲಿಗೆ ವಿಜಯನಗರಜಿಲ್ಲಾ ಪಂಚಾಯಿತಿಕಛೇರಿಯ ಹಾಗೂ ಹೊಸಪೇಟೆ ಹಾಗೂ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ ಮತ್ತುಕೊಟ್ಟೂರುತಾಲ್ಲೂಕು ಪಂಚಾಯಿತಿಕಛೇರಿಗಳಲ್ಲಿ ಖಾಲಿ ಇರುವಗಣಕಯಂತ್ರ ನಿರ್ವಾಹಕರು, ವಾಹನ ಚಾಲಕರು ಮತ್ತುಗ್ರೂಪ್ 'ಡಿ' ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ಪಡೆಯುವಕುರಿತು.

Through e-procurement portal: 1. ಉಲ್ಲೇಖ: **ಸಂಖ್ಯೆ: ಜಿ.ಪಂ.ವಿ/ ಆಡಳಿತ/ ಹೊರಗುತ್ತಿಗೆ/ 1/ 2022–23 ದಿನಾಂಕ: 10–08–2022.** 2. ಟೆಂಡರ್‌ದಸ್ತಾವೇಜು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿಅಪ್ಲೋಡ್ ಮಾಡುವ ದಿನಾಂಕ: **11–08–2022.** 3. ಟೆಂಡರ್‌ಮೊತ್ತ: **8525617/–(ಏಂಭತ್ತೈದು ಲಕ್ಷದಇಪ್ಪತ್ತೈದು ಸಾವಿರದಆರು ನೂರ ಹದಿನೇಳು ರೂ ಮಾತ್ರ).** 4. ಟೆಂಡರ್‌ಇ.ಎಂ.ಡಿ ಮೊತ್ತ: **128000/–(ಒಂದು ಲಕ್ಷದಇಪ್ಪತ್ತೆಂಟು ಸಾವಿರ ಮಾತ್ರ).** 5. ಟೆಂಡರ್‌ಸಲ್ಲಿಸುವಕೊನೆಯ ದಿನಾಂಕ: **25–08–2022 ಸಾಯಂಕಾಲ 5.30.** 6. ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: **26–08–.2022 ಬೆಳಿಗ್ಗೆ 11.00.** 7. ಆರ್ಥಿಕ ಬಿಡ್‌ತೆರೆಯುವ ದಿನಾಂಕ: **01.–09–2022 ಬೆಳಿಗ್ಗೆ 11.00.** 8. ಕಛೇರಿ ವಿಳಾಸ: **ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ ,ಜಿಲ್ಲಾ ಪಂಚಾಯತ್ , ವಿಜಯನಗರ ಎಂ.ಪಿ. ಪ್ರಕಾಶ್ ನಗರ , ಹೊಸಪೇಟೆ –583201**

ಹೆಚ್ಚಿನ ಮಾಹಿತಿಗಾಗಿ **https://www.eproc.karnataka.gov.in** ಈ ವೆಬ್‌ಸೈಟ್ ಸಂಪರ್ಕಿಸಬಹುದಾಗಿದೆ.

ಸಹಿ/–ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ ವಿಜಯನಗರ.

ಡಿಐಪಿಆರ್/ಹೊಸಪೇಟೆ/90/ಎಂಸಿಎ/2022–23

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಟೆಂಡರ್ ಪ್ರಕಟಣೆ ಸಂಖ್ಯೆ.16/2022–23 ದಿ:08.08.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ ಕಾಮಗಾರಿ ಮೊತ್ತ ದನ್ವಯ 2, 3ನೇ ಹಾಗೂ 4ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1/KW-2/KW-3/KW-4ರೀತ್ಯಾ (ಏಕ & ದ್ವಿ ಲಕೋಟೆ ಪದ್ಧತಿಯಂತೆ) ಹೆಚ್.ಡಿ.ಕೋಟೆ ತಾಲ್ಲೂಕಿನ 11 ಕಾಮಗಾರಿ ಹಾಗೂ 1 ಮಿಸಲಾತಿ ಕಾಮಗಾರಿ, ಸರಗೂರು ತಾಲ್ಲೂಕಿನ 08 ಕಾಮಗಾರಿಗಳಿಗೆ & ಮೈಸೂರು ತಾಲ್ಲೂಕಿನ 04 ಕಾಮಗಾರಿಗಳಿಗೆ **(ಟೆಂಡರ್‌ಗಿಟ್ಟ ಮೊತ್ತ ರೂ. 29.08 ಲಕ್ಷಗಳಿಂದ ರೂ. 199.87 ಲಕ್ಷದವರೆಗೆ)** ಹಾಗೂ ನಂಜನಗೂಡು ತಾಲ್ಲೂಕಿನ 09 ಕಾಮಗಾರಿ ಹಾಗೂ 03 ಪ್ಯಾಕೇಜ್ ಕಾಮಗಾರಿ, ಟಿ.ನರಸೀಪುರ ತಾಲ್ಲೂಕಿನ 07 ಕಾಮಗಾರಿ ಹಾಗೂ 11 ಪ್ಯಾಕೇಜ್ ಕಾಮಗಾರಿಗಳಿಗೆ **(ಟೆಂಡರ್‌ಗಿಟ್ಟ ಮೊತ್ತ ರೂ. 20.00 ಲಕ್ಷಗಳಿಂದ ರೂ. 400.00 ಲಕ್ಷದವರೆಗೆ)** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 16.08.2022 ರಿಂದ 23.08.2022 ಸಂಜೆ 4.00 ಘಂಟೆಯವರೆಗೆ ಪ್ರಿ–ಬಿಡ್ಡಿಂಗ್ ಮೀಟಿಂಗ್ ದಿನಾಂಕ: 19.08.2022 ಬೆಳಿಗ್ಗೆ 11.00 ಘಂಟೆ, ಸಾಧ್ಯವಾದರೆ ಟೆಂಡರ್ ತೆರೆಯುವ ದಿನಾಂಕ: 24.08.2022 ರ ಬೆಳಿಗ್ಗೆ 11.00 ಘಂಟೆಯ ನಂತರ.** ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(e-procurement portal)** ವೆಬ್ ಸೈಟ್‌ನಲ್ಲಿ ಪಡೆಯಬಹುದು. **https://eprockarnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821–2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು

ವಾಸಾಸಂಇ/ಉನಿ–ಮೈ/ಎಂಸಿ&ಎ/355/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–3 ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ–1, ದಾಸಪ್ಪ ಆಸ್ಪತ್ರೆ ಕಟ್ಟಡ, ಬೆಂಗಳೂರು–560002.

ಸಂಖ್ಯೆ: ಕಾಅ–3/ಘತ್ಯಾನಿ/ಟೆಂಡರ್/01/2022–23/ಕರೆ–3 ದಿನಾಂಕ: 11–08–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)–(ಅಲ್ಪಾವಧಿ)– (3ನೇ ಕರೆ)

(ದ್ವಿ–ಲಕೋಟೆ ಟೆಂಡರ್) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಗೆ ತಿಳಿಸಿರುವ ಸಾಮಗ್ರಿಗಳು / ಸಲಕರಣೆಗಳನ್ನು ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಪ್ಯಾಕೇಜ್–3: ಬಿಬಿಎಂಪಿಯ 8 ವಲಯಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೆ ಬೀದಿ ಕಸ ಗುಡಿಸುವ ಸಲಕರಣೆಗಳನ್ನು ಸರಬರಾಜು ಮಾಡುವುದು.	692.30	10.38

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿನಾಂಕ: **16–08–2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **19–08–2022 ರಂದು ಮಧ್ಯಾಹ್ನ 3.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **20–08–2022 ರಂದು ಸಂಜೆ 4.00 ಗಂಟೆಗೆ ಕೆಳಸಹಿದಾರರ ಕಛೇರಿಯಲ್ಲಿ.** 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **26–08–2022 ರಂದು ಸಂಜೆ 4.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **29–08–2022 ರಂದು ಸಂಜೆ 4.00 ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಬೆಂಗಳೂರು – 560009

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **24.08.2022ರ ಸಂಜೆ 4.00 ಗಂಟೆಯವರೆಗೆ**

ಕ್ರ. ಸಂ	ಕಾಮಗಾರಿಯ ಸ್ಥಳ	Work Indent & IFT No	ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ
1	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು ಕುಡುಪು ಪ್ಲಾಟ್–ಎ ಬಹುಮಹಡಿ ವಸತಿ ಸಮುಚ್ಚಯದಲ್ಲಿ ಸೆಕ್ಯೂರಿಟಿ ಕಾವಲುಗಾರರನ್ನು ಹಾಗೂ ವಸತಿ ಸಮುಚ್ಚಯದಲ್ಲಿ ಸ್ವಚ್ಚತೆಯನ್ನು ಕಾಪಾಡುವ ದೃಷ್ಟಿಯಿಂದ ಜಾಡಮಾಲಿಗಳನ್ನು 12 ತಿಂಗಳ ಅವಧಿಗೆ ನೇಮಿಸುವ ಸಲುವಾಗಿ	KHB/2022-23/ OW/Work Indent 1014 & IFT No. 112/2022-23 Date: 10.08.2022	5,79,087.00
2	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು ಕೋಟೆಕರ್‌ನ ಬಹುಮಹಡಿ ವಸತಿ ಸಮುಚ್ಚಯದಲ್ಲಿ ಸೆಕ್ಯೂರಿಟಿ ಕಾವಲುಗಾರರನ್ನು ಹಾಗೂ ವಸತಿ ಸಮುಚ್ಚಯದಲ್ಲಿ ಸ್ವಚ್ಚತೆಯನ್ನು ಕಾಪಾಡುವ ದೃಷ್ಟಿಯಿಂದ ಜಾಡಮಾಲಿಗಳನ್ನು 12 ತಿಂಗಳ ಅವಧಿಗೆ ನೇಮಿಸುವ ಸಲುವಾಗಿ	KHB/2022-23/ OW/Work Indent 1013 & IFT No. 111/2022-23 Date: 10.08.2022	5,79,087.00

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 / 080–22100077 ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

ವಾಸಾಸಂಇ/ವಾಪ್ರ/ಅಡ್ವಿಟ್/1761/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443/2022–23/2320 ದಿನಾಂಕ:10.08.2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್–72–600 ಏರ್‌ಕ್ರಾಪ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ–2)– ಕಾಮಗಾರಿಗೆ ಏವಿಯೋನಿಕ್ಸ್ ಮತ್ತು ಭದ್ರತಾ ಸಲಕರಣೆ ಅಳವಡಿಸುವದು. (ಏರ್ಫೀಲ್ಡ್ ನೆಲದ ಬೆಳಕು ಮತ್ತು ಬಾಹ್ಯ ಪ್ರದೇಶದ ಬೆಳಕು ಸೇರಿದಂತೆ) (ಇಂಡೆಂಟ ನಂ. 142516) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು **ಅಂದಾಜು ಮೊತ್ತ ರೂ. 1612.70 ಲಕ್ಷಗಳು. ಸದರಿ ಕಾಮಗಾರಿಯ ಟೆಂಡರ ಅವಧಿ 11 ತಿಂಗಳು ಮಳೆಗಾಲ ಸಹಿತ ಹಾಗೂ ಮುಂಗಡ ಠೇವಣಿ ಮೊತ್ತ 16,12,700/– ರೂ.ಗಳು.** ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತ್ರತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಬದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:– 06.09.2022** ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:–15.09.2022** ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 17.09.2022** ರ ಮುಂಜಾನೆ 11.00 ಘಂಟೆಯ ನಂತರ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ:19.09.2022** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in (ಫೋನ್ ನಂ. 918025501216 & 918025501227) ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/360/ಎಂಸಿಎ/2022–23

ಮೈಸೂರಿನಲ್ಲಿ ಯುವಜನ ಮಹೋತ್ಸವ, ಮುಖ್ಯಮಂತ್ರಿ ಭಾಗಿ

ಯುವಜನರ ಜೋಶ್, ಯಶ್ ಹವಾ

ಪ್ರಜಾವಾಣಿ ವಾರ್ತೆ

ಮೈಸೂರು: ತ್ರಿವರ್ಣ ಧ್ವಜ ಪ್ರದರ್ಶಿಸುತ್ತಾ ಸಂಭ್ರಮಿಸಿದ ಸಾವಿರಾರು ಯುವಕ–ಯುವತಿಯರು. ರಂಗು ತುಂಬಿದ ಚಿತ್ರ ನಟ ಯಶ್ ಹವಾ. ರಂಜಿಸಿದ ಗೀತ–ಗಾಯನ. ದೇಶಭಕ್ತಿಯನ್ನು ಉದ್ದೀಪಿಸಿದ ನೃತ್ಯ ಪ್ರಸ್ತುತಿ. ಯುವಜನರ ಹರ್ಷೋದ್ಗಾರ, ಕೇಕೆ.

– ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಮೈಸೂರು ವಿಶ್ವವಿದ್ಯಾಲಯವು ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ‘ಯುವಜನ ಮಹೋತ್ಸವ’ದಲ್ಲಿ ಯುವಜನರ ಜೋಶ್‌ನ ಝಲಕ್‌ಗಳಿವು.

ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜು ಕಟ್ಟಡ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಯೂ ನೆರವೇರಿದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ತ್ರಿವರ್ಣ ಧ್ವಜಗಳನ್ನು ಸಂಭ್ರಮದಿಂದ ಹಿಡಿದು ಪಾಲ್ಗೊಂಡಿದ್ದರು. ಭಾರತ ಮಾತೆಗೆ ಜೈಕಾರ ಮುಗಿಲು ಮುಟ್ಟಿತ್ತು.

ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಕೆಡೆಟ್‌ಗಳು, ಎನ್‌ಸಿಸಿಯ ಸ್ವಯಂಸೇವಕರು ಮೆರುಗು ಹೆಚ್ಚಿಸಿದರು. ನಾಡಹಬ್ಬದ ದಸರೆಗೂ ಮುನ್ನವೇ ‘ಯುವ ಸಂಭ್ರಮ’ದ ಹೊನಲು ಹರಿಯಿತು.

ಭಾವೈಕ್ಯದ ನೃತ್ಯ ಸಂಗಮದ ಉತ್ಸವವು ಹಲವು ತಾಸುಗಳವರೆಗೆ ರಸದೌತಣ ಉಣಬಡಿಸಿತು. ಪ್ರೊ. ರಾಜಶೇಖರ್, ಚೇತನ್ ಮಾರ್ಗದರ್ಶನದಲ್ಲಿ ಕೊರಿಯೋಗ್ರಾಫರ್ ವಿಶ್ವಾಸ್ ನೇತೃತ್ವದಲ್ಲಿ ನಡೆದ ಪ್ರಸ್ತುತಿಯು ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ರಾಜ್ಯಗಳ ಕಲೆ, ಸಂಸ್ಕೃತಿ ಪರಿಚಯ, ವೀರ ಯೋಧರು, ವೀರ ವನಿತೆಯರು, ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿ, ಭಾವೈಕ್ಯದ ಸಂದೇಶವನ್ನು ಸಾರಿತು. ಸ್ವಾತಂತ್ರ್ಯ ಸೇನಾನಿಗಳ ರೂಪಕಗಳು ರೋಮಾಂಚನ ಮೂಡಿಸಿದವು.

ಹುಣಸೂರು ಕಾಲೇಜಿನ ಸಹ ಪ್ರಾಧ್ಯಾಪಕ ಲೋಕೇಶ್ ಪ್ರಸ್ತುತಪಡಿಸಿದ ‘ಆಡಿಸಿ ನೋಡು ಬೀಳಿಸಿ ನೋಡು’ ಗೀತೆಯು ನಟ ಪುನೀತ್ ರಾಜಕುಮಾರ್ ಅವರನ್ನು ನೆನಪಿಸಿತು. ಯುವಜನ ಮೊಬೈಲ್ ಫೋನ್ ಟಾರ್ಚ್ ಆನ್ ಮಾಡಿ ಗೌರವ ಸಲ್ಲಿಸಿದರು.

ಡಾ.ಲೋಕೇಶ್ ಮತ್ತು ಡಾ.ಶಿವಾನಂದ ತಂಡ, ಡಾ.ರಶ್ಮಿ ಹಾಡಿದರು. ಮೈಸೂರು ಮಂಜುನಾಥ್ ಪುತ್ರ ಸುಮಂತ್ ಮಂಜುನಾಥ್ ಮತ್ತು ತಂಡದವರು ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಿದರು. ವೇದಿಕೆ ಕಾರ್ಯಕ್ರಮದ ಬಳಿಕ ಚಲನಚಿತ್ರ ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ಮತ್ತು ತಂಡದವರು ಗಾಯನದಿಂದ ನೆರೆದಿದ್ದವರನ್ನು ರಂಜಿಸಿದರು.

‘ಸರ್ಕಾರ ಹಮ್ಮಿಕೊಂಡಿರುವ ‘ಹರ್ ಘರ್ ತಿರಂಗಾ’ ಕಾರ್ಯಕ್ರಮದ ಅಂಗವಾಗಿ ನಿಮಗೆ ಕೊಟ್ಟಿರುವ ಬಾವುಟಗಳನ್ನು ಮನೆ, ಹಾಸ್ಟೆಲ್ ಹಾಗೂ ಕೊಠಡಿಗಳ ಮೇಲೆ ಹಾರಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿದ್ಯಾರ್ಥಿಗಳನ್ನು ಕೋರಿದರು. 40ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ‘ಯುವಜನ ಮಹೋತ್ಸವ’ದಲ್ಲಿ ವಿದ್ಯಾರ್ಥಿನಿಯರು ತ್ರಿವರ್ಣ ಧ್ವಜದೊಂದಿಗೆ ಭಾಗವಹಿಸಿದ್ದರು

ಯುವಶಕ್ತಿಯನ್ನು ಸದ್ಬಳಕೆ ಮಾಡಿಕೊಂಡರೆ ಮುಂದಿನ 25 ವರ್ಷಗಳಲ್ಲಿ ದೇಶವು ವಿಶ್ವದಲ್ಲೇ ನಂ.1 ಆಗುತ್ತದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಿಎಂ ಜೊತೆಗೇ ಬಂದಿಳಿದ ಯಶ್

ನಟ ಯಶ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರೊಂದಿಗೆ ಬೆಂಗಳೂರಿನಿಂದ ಹೆಲಿಕಾಪ್ಟರ್‌ನಲ್ಲಿ ಬಂದಿಳಿದರು.

ಯಶ್ ವೇದಿಕೆಗೆ ಬರುತ್ತಿದ್ದಂತೆಯೇ ವಿದ್ಯಾರ್ಥಿಗಳಿಂದ ಸಿಳ್ಳೆ–ಚಪ್ಪಾಳೆಗಳ ಮಳೆ ಸುರಿಯಿತು. ರಾಕಿ, ರಾಕಿ, ರಾಕಿ... ಎಂದು ಜೋರಾಗಿ ನಿರಂತರವಾಗಿ ನಿಮಿಷಗಳವರೆಗೆ ಕೂಗುತ್ತಾ ಅಭಿಮಾನ ವ್ಯಕ್ತಪಡಿಸಿದರು. ಇದರಿಂದಾಗಿ ಯಶ್ ಜೊತೆಗೆ ಭಾಗವಹಿಸಿದ್ದ ಮುಖ್ಯಮಂತ್ರಿ ಆದಿಯಾಗಿ ಅತಿಥಿಗಳೆಲ್ಲರೂ ಪುಳಕ ಅನುಭವಿಸಿದರು.

ಯುವಜನ ಮಹೋತ್ಸವದಲ್ಲಿ ನಟ ಯಶ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಮರಣಿಕೆ ನೀಡಿ ಗೌರವಿಸಿದರು. ಶಾಸಕ ಎಲ್.ನಾಗೇಂದ್ರ, ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದಾರೆ —ಪ್ರಜಾವಾಣಿ ಚಿತ್ರ

ಬೀಟ್ ಹಾಕಿಕೊಂಡಿದ್ದೆ, ಆಮೇಲೆ ಬದಲಾದೆ!

‘ವಿದ್ಯಾರ್ಥಿಯಾಗಿದ್ದಾಗ ಬೀಟ್ ಹಾಕಿಕೊಂಡಿದ್ದೆ, ಸಣ್ಣ ಬದಲಾವಣೆಗಳೇ ನನ್ನನ್ನು ಬದಲಾಯಿಸಿದವು’ ಎಂದು ನಟ ಯಶ್ ನೆನಪಿಗೆ ಜಾರಿದರು.

‘ವಿದ್ಯಾರ್ಥಿ ಜೀವನದಲ್ಲಿ ಖಂಡಿತವಾಗಿಯೂ ತಂದೆ–ತಾಯಿ ಖುಷಿಯಾಗುವಷ್ಟು ಒಳ್ಳೆಯ ರೀತಿಯಲ್ಲಿದ್ದವನಲ್ಲ. ಬೇಜವಾಬ್ದಾರಿಯಿಂದ, ಸ್ಟಂಟ್ ಮಾಡಿಕೊಂಡು, ಹುಡುಗರೊಂದಿಗೆ ಕಾಳಿದಾಸ ರಸ್ತೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ಗಂಗೋತ್ರಿಯಲ್ಲಿ ಬೀಟ್ ಹಾಕಿಕೊಂಡಿದ್ದವ ನಾನು. ಈಗ ಅದೇ ಊರಲ್ಲಿ ಇಷ್ಟೊಂದು ಪ್ರೀತಿ ಸಿಗುತ್ತಿರುವುದು ಖುಷಿಯ ವಿಚಾರ’ ಎಂದು ಹೆಮ್ಮೆ ವ್ಯಕ್ತಪಡಿಸಿದರು.

‘ಸಣ್ಣ ಬದಲಾವಣೆಗಳೇ ನಮ್ಮನ್ನು ಬದಲಾಯಿಸಿಬಿಡುತ್ತವೆ. ಮುಖ್ಯವಾಗಿ ಆತ್ಮವಿಶ್ವಾಸ ಇರಬೇಕು. ಸಾಧನೆಗೂ ಗಮನಹರಿಸಿ, ಜೊತೆಗೆ ಸಣ್ಣ ಖುಷಿಗಳನ್ನೂ ಅನುಭವಿಸಿ. ಸ್ನೇಹಿತರೊಂದಿಗೆ ಕಾಲ ಕಳೆಯಿರಿ. ತುಂಬಾ ಗಂಭೀರವಾಗಬೇಡಿ’ ಎಂದು ಸಲಹೆ ನೀಡಿದರು.

‘ಕನ್ನಡ ಸಿನಿಮಾಕ್ಕೆ ಇಡೀ ಭಾರತ ಇಷ್ಟು ಬೇಗ ದೊಡ್ಡ ಗೌರವ ಕೊಡುತ್ತದೆ ಎಂದು ನಂಬಿದ್ರಾ? ಅದು ಆಗಿದೆಯಲ್ಲವೇ? ಒಬ್ಬರಿಂದಲೇ ಎಲ್ಲವೂ ಆಗುವುದಿಲ್ಲ. ನಮ್ಮೊಳಗೆ ಒಂದು ಸರ್ಕಾರ ಹುಟ್ಟಬೇಕು. ಯೋಜನೆ ಹಾಕಿಕೊಳ್ಳಬೇಕು. ಕಾರ್ಯರೂಪಕ್ಕೆ ತರಬೇಕು. ಆಗ ದೇಶ ತಾನಾಗಿಯೇ ಮುಂದೆ ಹೋಗುತ್ತದೆ’ ಎಂದರು.



400 ಮಕ್ಕಳಿದ್ದರಷ್ಟೆ ಸಹ ಶಿಕ್ಷಕರಿಗೆ ಪ್ರಭಾರ ಭತ್ಯೆ

ಬೆಂಗಳೂರು: ಪ್ರಾಥಮಿಕ ಶಾಲೆಗಳಲ್ಲಿ 400ಕ್ಕೂ ಹೆಚ್ಚು ಮಕ್ಕಳಿದ್ದರೆ ಮಾತ್ರ ಮುಖ್ಯ ಶಿಕ್ಷಕ ಹುದ್ದೆ ಮಂಜೂರಾತಿಗೆ ಅವಕಾಶವಿದ್ದು, ಅಂತಹ ಹುದ್ದೆಗಳಲ್ಲಿ ಪ್ರಭಾರವಿರುವ ಸಹ ಶಿಕ್ಷಕರಿಗೆ ಪ್ರಭಾರ ಭತ್ಯೆ ನೀಡಲು ಸರ್ಕಾರ ಸಮ್ಮತಿಸಿದೆ.

400ಕ್ಕೂ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಮುಖ್ಯ ಶಿಕ್ಷಕ ಹುದ್ದೆಗೆ ಒಬ್ಬ ಸಹ ಶಿಕ್ಷಕರನ್ನು ನೇಮಿಸಿದರೂ, ಅವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ 68ರ ಅನ್ವಯ ಪ್ರಭಾರ ಭತ್ಯೆ ನೀಡಲು ಅವಕಾಶವಿಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

‘ಸಿಎಂ ಬದಲಾವಣೆ ಮಾತು ನಿರಾಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬದಲಾವಣೆಯ ಮಾತುಗಳಿಗೆ ಯಾವುದೇ ಆಧಾರ ಇಲ್ಲ. ಇದೊಂದು ರಾಜಕೀಯ ಪ್ರೇರಿತ ನಡೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇದರಿಂದಾಗಿ ಮುಂದಿನ ದಿನಗಳಲ್ಲಿ ನನ್ನ ನಿರ್ಣಯಗಳು ಇನ್ನಷ್ಟು ಗಟ್ಟಿಯಾಗುತ್ತವೆ’ ಎಂದರು. ‘ಕಾಂಗ್ರೆಸ್‌ನವರು ಏನೋ ಅಂದುಕೊಂಡಿದ್ದಾರೆ. ಅವರ ಮನಸ್ಸಿನಲ್ಲಿ ಅತಂತ್ರ ಇದೆ. ಅದನ್ನು ರಾಜ್ಯ ತುಂಬಾ ಜನರ ಮನಸ್ಸಿನಲ್ಲಿ ಹರಡಬೇಕೆಂದಿದ್ದಾರೆ. ರಾಜ್ಯದ ಜನರು ಅದನ್ನು ನಂಬುವ ಸ್ಥಿತಿಯಲ್ಲಿ ಇಲ್ಲ. ಅದಕ್ಕಿಂತ ಹೆಚ್ಚಾಗಿ ನಾನು ಸ್ಥಿತಪ್ರಜ್ಞನಾಗಿದ್ದೇನೆ. ಸತ್ಯ ನನಗೆ ಗೊತ್ತಿದೆ’ ಎಂದರು.

‘ರಾಜ್ಯಕ್ಕೆ, ರಾಜ್ಯದ ಜನರಿಗಾಗಿ ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬೇಕು ಎಂಬ ಪ್ರೇರಣೆಯನ್ನು ಈ ಎಲ್ಲ ವಿಚಾರಗಳು ನೀಡಿವೆ. ದಿನಕ್ಕೆ ಇನ್ನೂ 2 ಗಂಟೆಗಳಷ್ಟು ಹೆಚ್ಚಿನ ಕೆಲಸ, ರಾಜ್ಯ ಅಭಿವೃದ್ಧಿಗೆ ಅತಿ ಹೆಚ್ಚು ಸಮಯವನ್ನು ನೀಡಲು ತೀರ್ಮಾನಿಸಿದ್ದೇನೆ. ಬರುವ ದಿನಗಳಲ್ಲಿ ಪಕ್ಷದ ಬಲವರ್ಧನೆ ಹಾಗೂ ಜನರ ಬಳಿಗೆ ಹೋಗುವ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತೇನೆ’ ಎಂದು ಹೇಳಿದರು.

ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ: ಜೆ.ಪಿ. ನಡ್ಡಾ

‘ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

ಬಿಜೆಪಿಯ ಕರ್ನಾಟಕ ಘಟಕವು ತನ್ನ ಫೇಸ್‌ಬುಕ್ ಪುಟದಲ್ಲಿ ನಡ್ಡಾ ಹೇಳಿಕೆಯನ್ನು ಉಲ್ಲೇಖಿಸಿದೆ. ‘ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದಲ್ಲೇ ವಿಧಾನಸಭೆ ಚುನಾವಣೆ ಎದುರಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷವನ್ನು ಕೇಳಿ ಮುಖ್ಯಮಂತ್ರಿ ಬದಲಾವಣೆ ಮಾಡುವ ಅನಿವಾರ್ಯ ನಮಗಿಲ್ಲ. ಅವರನ್ನು ಬದಲಾವಣೆ ಮಾಡುವ ಯಾವುದೇ ನಿರ್ಣಯವನ್ನು ಹೈಕಮಾಂಡ್ ಕೈಗೊಂಡಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿಳಿಸಿದ್ದಾರೆ.

‘ಕುಮಾರಸ್ವಾಮಿ ಕಣ್ಣೀರು ನಾಟಕ’

ಮಂಡ್ಯ: ‘ಎಚ್.ಡಿ.ಕುಮಾರಸ್ವಾಮಿ ಅವರ ಕಣ್ಣೀರು ಭಾವನಾತ್ಮಕ ಅಲ್ಲ, ಬರೀ ನಾಟಕ. ಅಧಿಕಾರ ಇದ್ದಾಗ ಕೆಲಸ ಮಾಡಬೇಕು, ಕಣ್ಣೀರು ಹಾಕಿದರೆ ಏನು ಪ್ರಯೋಜನ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಗುರುವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಅವರು ಮುಖ್ಯಮಂತ್ರಿಯಾಗಿದ್ದಾಗ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಇದ್ದು ಸರ್ಕಾರ ನಡೆಸುತ್ತಿದ್ದರು. ಈ ವಿಚಾರದ ಬಗ್ಗೆ ಅವರು ಇಲ್ಲಿಯವರೆಗೂ ಉತ್ತರ ಕೊಡಲು ಸಾಧ್ಯವಾಗಿಲ್ಲ’ ಎಂದರು.

ಅಶ್ವತ್ಥನಾರಾಯಣ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ

‘ಹಗಲು ದರೋಡೆಗೆ ಹೊರಟಿದ್ದು ಯಾರು?’

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ‘ಬಿ.ಎಸ್.ಯಡಿಯೂರಪ್ಪ 2010ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಕಾರ್ಪೋರೇಷನ್‌ನ ₹15 ಸಾವಿರ ಕೋಟಿ ಮೊತ್ತದ ಕಾಮಗಾರಿಗಳ ದಾಖಲೆ ಇದ್ದ ಕೊಠಡಿಗೆ ಬೆಂಕಿ ಇಟ್ಟು ಹಗಲುದರೋಡೆ ಮಾಡಲು ಹೊರಟಿದ್ದರು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ತಾಲ್ಲೂಕಿನ ನೀಲಕಂಠನಹಳ್ಳಿ ಬಳಿಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ‘ಆಗ ಅಶ್ವತ್ಥನಾರಾಯಣ ಅವರ ಹಗಲು ದರೋಡೆ ವಿಷಯ ಕೆದಕ್ಕಿದ್ದು ಜೆಡಿಎಸ್. ಈವರೆಗೂ ಅದರ ಬಗ್ಗೆ ತನಿಖೆ ನಡೆದಿಲ್ಲ. ಮೊದಲು ಈ ಬಗ್ಗೆ ಚರ್ಚೆ ಮಾಡಬೇಕಿದ್ದು, ಕಲಾಪ ಕರೆಯಿರಿ’ ಎಂದರು.

‘ಈತ ನಕಲಿ ಸರ್ಟಿಫಿಕೇಟ್ ಮಾರಾಟದ ಹಿನ್ನೆಲೆಯುಳ್ಳವರು ಎಂಬುದು ಗೊತ್ತಿದೆ. ನಾನು ಹೇಳಿದ ನಕಲಿ ಸರ್ಟಿಫಿಕೇಟ್ ವಿಚಾರದ ಬಗ್ಗೆ ಇನ್ನೂ ಅವರು ಉತ್ತರ ಕೊಟ್ಟಿಲ್ಲ. ನಾನು ಎಂದಿಗೂ ಯಾವುದೇ ದಾಖಲೆ ಇಲ್ಲದೆ ಆರೋಪ ಮಾಡಿ ಹಿಟ್ ಆ್ಯಂಡ್ ರನ್ ಮಾಡಿಲ್ಲ’ ಎಂದು ಹೇಳಿದರು.

‘ಅಶ್ವತ್ಥನಾರಾಯಣಗೆ ದುಡ್ಡಿನ ಮದ ಇದೆ. ಅದು ರಕ್ಷಣೆ ಮಾಡಲ್ಲ. ರಕ್ಷಣೆ ಮಾಡೋರು ಈ ನಾಡಿನ ಜನತೆ. ಈ ಮದ ಇಳಿಸೋದು ಹೇಗೆ ಎಂಬುದು ಕುಮಾರಸ್ವಾಮಿಗೆ ಗೊತ್ತಿದೆ. ಲಕ್ಷಾಂತರ ಕಾರ್ಯಕರ್ತರ ಆಶೀರ್ವಾದ ನನ್ನ ಮೇಲಿದ್ದು, ನಾನು ಏನು ಎಂಬುದನ್ನು ಮುಂದೆ ತೋರಿಸುತ್ತೇನೆ’ ಎಂದು ತಿಳಿಸಿದರು.

ಭ್ರಷ್ಟರಿಗೆ ಸಿಂಹಸ್ವಪ್ನವಾಗಿದ್ದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳ ಸ್ಥಾಪನೆಯಾಗುವವರೆಗೂ ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದ ಕರ್ನಾಟಕ ಲೋಕಾಯುಕ್ತ ಭ್ರಷ್ಟರ ಪಾಲಿಗೆ ಸಿಂಹಸ್ವಪ್ನದಂತೆ ಕಾರ್ಯನಿರ್ವಹಿಸಿತ್ತು. ನ್ಯಾಯಮೂರ್ತಿ ವೆಂಕಟಾಚಲ ಅವರು ಲೋಕಾಯುಕ್ತದ ಶಕ್ತಿಯನ್ನು ತೋರಿಸಿದ್ದರೆ, ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಅದರ ಪರಾಕ್ರಮವನ್ನು ಜಗಜ್ಜಾಹೀರುಗೊಳಿಸಿದ್ದರು.

ನ್ಯಾ.ಸಂತೋಷ ಹೆಗ್ಡೆ ಅವರು ಲೋಕಾಯುಕ್ತರಾಗಿದ್ದಾಗ ಬಲಿಷ್ಠ ತಂಡ ಅವರ ಜತೆಗಿತ್ತು.

ಆರು ವರ್ಷದಲ್ಲಿ ಎಸಿಬಿ ಮಾಡಿದ್ದೇನು?

ಮುಖ್ಯಮಂತ್ರಿಯಾಗಿದ್ದವರನ್ನೇ ಜೈಲಿಗೆ ಕಳುಹಿಸುವ ಸಾಮರ್ಥ್ಯ ಹೊಂದಿದ್ದ ಲೋಕಾಯುಕ್ತವನ್ನು ದುರ್ಬಲಗೊಳಿಸಲು ಎಸಿಬಿ ರಚಿಸಲಾಗಿತ್ತು ಎಂಬ ಆರೋಪಕ್ಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಗುರಿಯಾಗಿತ್ತು. 'ತಾವು ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲೇ ಎಸಿಬಿ ರದ್ದುಗೊಳಿಸಿ, ಲೋಕಾಯುಕ್ತ ಬಲಪಡಿಸುತ್ತೇವೆ' ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು 2018ರ ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿ ಘೋಷಿಸಿದ್ದರು.

ಎರಡೂ ಪಕ್ಷಗಳು ಅದನ್ನು ಮಾಡಲಿಲ್ಲ. ಆದರೆ, ಹೈಕೋರ್ಟ್ ಈಗ ಎಸಿಬಿಯನ್ನು ರದ್ದುಪಡಿಸಿದೆ.

ಎಸಿಬಿ ಸ್ಥಾಪಿಸಿದಾಗ, ಲೋಕಾಯುಕ್ತಕ್ಕೆ ಇದ್ದ ಪೊಲೀಸ್ ಬಲವನ್ನು ಕಿತ್ತುಕೊಂಡು ಅದನ್ನು ಎಸಿಬಿಗೆ ವರ್ಗಾಯಿಸಲಾಗಿತ್ತು. ಅಲ್ಲದೇ, ಯಾವುದೇ ಪ್ರಕರಣದಲ್ಲಿ ದಾಳಿ, ಶೋಧ ನಡೆಬೇಕಾದರೆ ಮುಖ್ಯಕಾರ್ಯದರ್ಶಿ ನೇತೃತ್ವದ ಉನ್ನತ ಸಮಿತಿಯ ಪೂರ್ವಾನುಮತಿಯನ್ನೂ ಪಡೆಯಬೇಕಾಗಿತ್ತು. ಹೀಗಾಗಿ, ಸರ್ಕಾರದ ಆಣತಿಯಂತೆ ಎಸಿಬಿ ನಡೆಯುತ್ತಿದೆ ಎಂಬ ಆಪಾದನೆಯೂ ತನಿಖಾ ಸಂಸ್ಥೆಯ ಮೇಲೆ ಇತ್ತು.

2016 ಮಾರ್ಚ್ 19ರಂದು ಎಸಿಬಿ ಅಸ್ತಿತ್ವಕ್ಕೆ ಬಂದಿದ್ದು, ಈವರೆಗೆ 350ಕ್ಕೂ ಹೆಚ್ಚು ಎಫ್ಐಆರ್‌ಗಳನ್ನು ದಾಖಲಿಸಿಕೊಂಡು ತನಿಖೆ ನಡೆಸಿದೆ. 105 ಪ್ರಕರಣಗಳಲ್ಲಿ 'ಬಿ' ವರದಿಯನ್ನೂ ಎಸಿಬಿ ಸಲ್ಲಿಸಿದೆ.

ನೋಟಿನ ಚೀಲವನ್ನು ಕಿಟಕಿಯಿಂದ ಆಚೆಗೆ ಎಸೆದಿದ್ದ ಕೆಐಎಡಿಬಿ ಮುಖ್ಯ ಅಭಿವೃದ್ಧಿ ಅಧಿಕಾರಿ ಆಗಿದ್ದ ಟಿ.ಆರ್. ಸ್ವಾಮಿ, ಪೈಪ್‌ನಲ್ಲಿ ಹಣ ಬಚ್ಚಿಟ್ಟಿದ್ದ ಲೋಕೋಪಯೋಗಿ ಇಲಾಖೆ ಕಲಬುರಗಿಯಲ್ಲಿ ಕಿರಿಯ ಎಂಜಿನಿಯರ್ ಆಗಿದ್ದ ಶಾಂತಗೌಡ ಬಿರಾದಾರ್, ಬಿಡಿಎ ಎಂಜಿನಿಯರ್ ಎನ್.ಜಿ. ಗೌಡಯ್ಯ ವಿರುದ್ಧದ ದಾಳಿಗಳು ಗಮನ ಸೆಳೆದಿದ್ದವು.

ಶಾಸಕ ಜಮೀರ್ ಅಹಮದ್ ವಿರುದ್ಧವೂ ಅಕ್ರಮ ಆಸ್ತಿ ಸಂಪಾದನೆ ಆರೋಪದಲ್ಲಿ ಎಸಿಬಿ ದಾಳಿ ನಡೆಸಿತ್ತು. ಇತ್ತೀಚೆಗೆ ಜೈಲು ಸೇರಿರುವ ಬೆಂಗಳೂರು ಜಿಲ್ಲಾಧಿಕಾರಿಯಾಗಿದ್ದ ಜೆ.ಮಂಜುನಾಥ್ ಪ್ರಕರಣದಲ್ಲಿ ಎಸಿಬಿ ಕಾರ್ಯವೈಖರಿ ಬಗ್ಗೆ ಹೈಕೋರ್ಟ್ ಇತ್ತೀಚೆಗೆ ತೀವ್ರ ತರಾಟೆಗೆ ತೆಗೆದುಕೊಂಡಿತ್ತು.

- ಕರ್ನಾಟಕದಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆ ಕುರಿತು ನಾಲ್ಕು ಸಾವಿರ ಪುಟಗಳ ಪ್ರಧಾನ ವರದಿ ಸಲ್ಲಿಕೆಯಾಗಿತ್ತು. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದ ಯಡಿಯೂರಪ್ಪ ಕೊನೆಗೆ ಜೈಲಿಗೂ ಹೋದರು.
- ಈಗ ಸಚಿವರಾಗಿರುವ ಆನಂದ್ ಸಿಂಗ್, ಹಿಂದೆ ಸಚಿವರಾಗಿದ್ದ ಜನಾರ್ದನ ರೆಡ್ಡಿ, ಮಾಜಿ ಶಾಸಕ ಸುರೇಶಬಾಬು, ಹಾಲಿ ಶಾಸಕ ಬಿ. ನಾಗೇಂದ್ರ ಕೂಡಾ ಅಕ್ರಮ ಗಣಿಗಾರಿಕೆ–ಅದಿರು ಸಾಗಣೆ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ್ದರು.
- 2008–2013ರ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಮಾಲೂರು ಕೃಷ್ಣಯ್ಯ ಶೆಟ್ಟಿ ಭೂ ಅಕ್ರಮದಲ್ಲಿ ಜೈಲು ಕಂಡಿದ್ದರು.
- ಮಾಜಿ ಮುಖ್ಯಮಂತ್ರಿಗಳಾಗಿದ್ದ ಎಚ್.ಡಿ. ದೇವೇಗೌಡ, ಧರಂಸಿಂಗ್, ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವರಾಗಿರುವ ಆರ್.ವಿ. ದೇಶಪಾಂಡೆ, ಡಿ.ಕೆ.ಶಿವಕುಮಾರ್, ಸಿ.ಟಿ.ರವಿ, ಆರ್. ರೋಷನ್‌ಬೇಗ್, ಅರವಿಂದ ಲಿಂಬಾವಳಿ, ಬಾಬುರಾವ್ ಚಿಂಚನಸೂರು, ಖಮರುಲ್ ಇಸ್ಲಾಂ, ಈಗಲೂ ಸಚಿವರಾಗಿರುವ ಆರ್. ಅಶೋಕ, ಮುರುಗೇಶ ನಿರಾಣಿ, ವಿ. ಸೋಮಣ್ಣ, ಮುನಿರತ್ನ ಸೇರಿದಂತೆ 66 ಜನ ಶಾಸಕರು ಲೋಕಾಯುಕ್ತರ ವಿಚಾರಣೆ ಎದುರಿಸಿದ್ದರು.
- ಬಿಜೆಪಿ ಶಾಸಕರಾಗಿದ್ದ ಕೆಜಿಎಫ್‌ನ ವೈ. ಸಂಪಂಗಿ ಅವರು ಶಾಸಕರ ಭವನದಲ್ಲಿ ಲಂಚ ಸ್ವೀಕರಿಸುವಾಗಲೇ ಲೋಕಾಯುಕ್ತ ದಾಳಿಗೆ ಸಿಕ್ಕಿಬಿದ್ದಿದ್ದರು.
- ಮುಖ್ಯಕಾರ್ಯದರ್ಶಿಯಾಗಿದ್ದವರೂ ಸೇರಿದಂತೆ 28 ಐಎಎಸ್, ಎಂಟು ಜನ ಐಪಿಎಸ್ ಅಧಿಕಾರಿಗಳು ವಿಚಾರಣೆ ಎದುರಿಸಿದ್ದರು.
- 1986 ರಿಂದ ಆರಂಭವಾದ ಲೋಕಾಯುಕ್ತ ಸಂಸ್ಥೆಯು 5,294 ಪ್ರಕರಣಗಳನ್ನು ವಿಲೇವಾರಿ ಮಾಡಿದೆ. ಈ ಪೈಕಿ 1,046 ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದ್ದರೆ, 3,636 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗಿದ್ದಾರೆ. 240 ಪ್ರಕರಣಗಳನ್ನು ಕೈಬಿಡಲಾಗಿದ್ದು, ಆರೋಪಿಗಳು ಮೃತಪಟ್ಟ ಕಾರಣಕ್ಕೆ 266 ಪ್ರಕರಣಗಳು ಖುಲಾಸೆಯಾಗಿವೆ. 106 ಪ್ರಕರಣಗಳಲ್ಲಿ ಎಫ್ಐಆರ್ ರದ್ದಾಗಿವೆ.

ಎಸಿಬಿ ರದ್ದು: ಲೋಕಾಯುಕ್ತ ಸಿಂಧು

ಒಂದನೇ ಪುಟದಿಂದ

'ಆರೋಪಿಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಎಚ್ಚರಿಕೆ ನೀಡಿರುವ ನ್ಯಾಯಪೀಠ, 'ಈಗಾಗಲೇ ಎಸಿಬಿ ಮುಂದೆ ಬಾಕಿ ಇರುವ ತನಿಖಾ, ವಿಚಾರಣಾ ಮತ್ತು ಶಿಸ್ತುಕ್ರಮದ ಅಡಿಯಲ್ಲಿನ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಬೇಕು' ಎಂದು ಹೇಳಿದೆ.

'ಆದಾಗ್ಯೂ, ಈತನಕ ಎಸಿಬಿಯು ತನಿಖೆ, ವಿಚಾರಣೆ ಮತ್ತು ಶಿಸ್ತುಕ್ರಮಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನೀಡಿರುವ ಶಿಕ್ಷೆ ಅಥವಾ ಬಿಡುಗಡೆಯ ಆದೇಶಗಳನ್ನು ಎಸಿಬಿ ಆದೇಶಕ್ಕೆ ಅನುಗುಣವಾಗಿ ಕಾಪಾಡಿಕೊಂಡು ಹೋಗತಕ್ಕದ್ದು ಮತ್ತು ಎಸಿಬಿ ಮುಂದಿದ್ದ ಪ್ರಕರಣಗಳನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರು ಈಗ ಅವು ಯಾವ ಹಂತದಲ್ಲಿವೆಯೋ ಅಲ್ಲಿಂದ ಮುಂದುವರಿಸಿಕೊಂಡು ಹೋಗಬೇಕು' ಎಂದು ನಿರ್ದೇಶಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 2 (ಎಸ್) ಅಡಿಯಲ್ಲಿ 1991ರ ಫೆಬ್ರುವರಿ 6, 2002ರ ಮೇ 8 ಮತ್ತು 2002ರ ಡಿಸೆಂಬರ್ 5ರಂದು ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಅನುಸಾರ ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ನೀಡಲಾಗಿರುವ ತನಿಖಾಧಿಕಾರವನ್ನು ಮರುಸ್ಥಾಪಿಸಿ ಆದೇಶಿಸಲಾಗಿದೆ.

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಅಡಿ ಅಪರಾಧ ದಾಖಲು ಮತ್ತು ತನಿಖೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರಿಗಿದ್ದ ಅಧಿಕಾರವನ್ನು ಹಿಂಪಡೆದಿರುವ ಅಧಿಸೂಚನೆಯನ್ನು ಸಮರ್ಥನೆ ಮಾಡಿಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ–1988ರ ಕಲಂ 12(4)ಕ್ಕೆ ತುರ್ತಾಗಿ ತಿದ್ದುಪಡಿ ಮಾಡುವ ಅಗತ್ಯವಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿದಾರ ಚಿದಾನಂದ ಅರಸ್ ಪರ ಹಿರಿಯ ವಕೀಲ ರವಿ.ಬಿ.ನಾಯಕ್, ಕೆ.ಬಿ.ಮೋನೇಶ್ ಕುಮಾರ್ ಸೇರಿದಂತೆ ಪ್ರತ್ಯೇಕ ಅರ್ಜಿದಾರರ ಪರ ಖ್ಯಾತ ವಕೀಲರ ದಂಡೇ ಪ್ರಕರಣದಲ್ಲಿ ವಾದ ಮಂಡಿಸಿತ್ತು.

ರಾಜ್ಯ ಸರ್ಕಾರಕ್ಕೆ ಶಿಫಾರಸುಗಳು

- ಜನಕಲ್ಯಾಣದ ಬಗ್ಗೆ ನಿಜವಾದ ಕಾಳಜಿ ಹೊಂದಿದ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವ ಸಚ್ಚಾರಿತ್ರ್ಯವಂತರನ್ನು ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳಿಗೆ ನೇಮಕ ಮಾಡಬೇಕು.
- ಹುದ್ದೆಗಳು ರಾಜಕೀಯ ಪ್ರೇರಿತವಾಗಿರಬಾರದು ಮತ್ತು ಕೆಲವರ ಪಾಲಿನ ಪುನರ್ವಸತಿ ಕೇಂದ್ರಗಳಾಗಬಾರದು.
- ಲೋಕಾಯುಕ್ತ ಹುದ್ದೆಗಳಿಗೆ ನಡೆಯುವ ನೇಮಕ ಪಾರದರ್ಶಕವಾಗಿರಬೇಕು. ಉತ್ತಮ ಹಿನ್ನೆಲೆ ಹೊಂದಿರುವ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿ ಅದನ್ನು ಸದೃಢಗೊಳಿಸಬೇಕು.
- ಈಗ ಎಸಿಬಿಯಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಲೋಕಾಯುಕ್ತ ಆಡಳಿತ ವ್ಯಾಪ್ತಿಗೆ ಒಳಪಡಲಿದ್ದಾರೆ.
- ತನಿಖೆಯನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ವ್ಯಾಜ್ಯದಲ್ಲಿರುವ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿ ಮಾಡಲು ಲೋಕಾಯುಕ್ತ ಮತ್ತು ಉಪಲೋಕಾಯುಕ್ತರು ಅಗತ್ಯ ಕ್ರಮ ಕೈಗೊಳ್ಳಬೇಕು.
- ಕನಿಷ್ಠ ಮೂರು ವರ್ಷ ಕರ್ತವ್ಯ ಪೂರ್ಣಗೊಳಿಸದ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಅನುಮತಿ ಪಡೆಯದೇ ವರ್ಗಾವಣೆ ಮಾಡುವಂತಿಲ್ಲ.

ರಾಜ್ಯದ ಜನರಿಗೆ ಸಂದ ವಿಜಯ

ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ತೀರ್ಪು ಕರ್ನಾಟಕದ ಜನರಿಗೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ನಾಗರಿಕ ಸಮಾಜಕ್ಕೆ ಸಂದ ವಿಜಯ. ಇದೊಂದು ಐತಿಹಾಸಿಕ ತೀರ್ಪಾಗಿ ಉಳಿಯಲಿದೆ. ಲೋಕಾಯುಕ್ತ ಸಂಸ್ಥೆಯನ್ನು ಸಶಕ್ತ ಮಾಡುವ ಬದಲು ಅದನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ಸಿದ್ದರಾಮಯ್ಯ ಮಾಡಿದ್ದರು. ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲೇ ಲೋಕಾಯುಕ್ತಕ್ಕೆ ಅಧಿಕಾರ ಹೆಚ್ಚಿಸುವ ಭರವಸೆಯನ್ನು ಬಿಜೆಪಿ ನೀಡಿತ್ತು. ಆದರೆ, ಈಡೇರಿಸಲಿಲ್ಲ. ಈಗ ಅದನ್ನು ಹೈಕೋರ್ಟ್ ಸರಿಪಡಿಸಿದೆ. ಸುಪ್ರೀಂ ಕೋರ್ಟ್‌ಗೆ ಹೋದರೂ ಸರ್ಕಾರಕ್ಕೆ ಛೀಮಾರಿ ಬೀಳಲಿದೆ. ಸಾರ್ವಜನಿಕರ ಹಣ ವೆಚ್ಚ ಮಾಡಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಪ್ರಯತ್ನ ಮಾಡಬಾರದು.

–**ಎಸ್.ಆರ್.ಹಿರೇಮಠ,** ಸಮಾಜ ಪರಿವರ್ತನಾ ಸಮುದಾಯ

ತೀರ್ಪಿನ ಸಂಪೂರ್ಣ ಅಧ್ಯಯನ ಮಾಡಬೇಕು. ಈ ಹಂತದಲ್ಲಿ ಏನನ್ನಾದರೂ ಹೇಳುವುದು ಕಷ್ಟ.

ಪ್ರಭುಲಿಂಗ ಕೆ.ನಾವದಗಿ, ಅಡ್ವೊಕೇಟ್ ಜನರಲ್

ತೀರ್ಪಿಗೆ ಪ್ರತಿಕ್ರಿಯೆಗಳು

ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಕೇವಲ ಒಂದು ಸಂಸ್ಥೆ ತನಿಖೆ ನಡೆಸಬೇಕು. ತನಿಖೆ ರಾಜಕೀಯ ಮಧ್ಯಪ್ರವೇಶದಿಂದ ಮುಕ್ತವಾಗಿರಬೇಕು ಎಂಬ ಲೋಕಾಯಕ್ತ ಕಾಯ್ದೆಯ ಆಶಯ ಈಡೇರಿದಂತಾಗಿದೆ. ಆಡಳಿತ ಸುಧಾರಣೆಗಾಗಿ ರಚಿಸಲಾದ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆಯ ಮುಖ್ಯ ಉದ್ದೇಶವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ.

ವಿ.ಲಕ್ಷ್ಮಿನಾರಾಯಣ, ಪ್ರಕರಣದಲ್ಲಿ ಅಮಿಕಸ್ ಕ್ಯೂರಿ

ಎಸಿಬಿ ಸರ್ಕಾರದ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿತ್ತು. ಸರ್ಕಾರದ ಪ್ರಮುಖ ಸ್ಥಾನದಲ್ಲಿದ್ದವರ ಮೇಲೆ ಭ್ರಷ್ಟಾಚಾರದ ಆರೋಪ ಬಂದಾಗ ಸಹಜವಾಗಿಯೇ ಅಲ್ಲಿ ಸರ್ಕಾರಿ ನಿಯಂತ್ರಣ ಇರುತ್ತಿತ್ತು. ಈಗ ಹೈಕೋರ್ಟ್ ನೀಡಿರುವ ತೀರ್ಪಿನಿಂದ ಯಾವುದೇ ಪ್ರಭಾವಕ್ಕೆ ಒಳಗಾಗದೆ ಸ್ವತಂತ್ರವಾಗಿ ತನಿಖೆ ನಡೆಸಲು ಅವಕಾಶ ದೊರೆತಿದೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಾಯುಕ್ತರು ಇದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು.

ಅಶೋಕ ಹಾರನಹಳ್ಳಿ, ಲೋಕಾಯುಕ್ತ ಪರ ಹಾಜರಾಗಿದ್ದ ಹಿರಿಯ ವಕೀಲರು

ಕಳೆದ ನಾಲ್ಕು ವರ್ಷಗಳಿಂದ ಎಸಿಬಿಯಲ್ಲಿ ನಡೆಯುತ್ತಿದ್ದ ವ್ಯಾಪಕ ಭ್ರಷ್ಟಾಚಾರವೇ ಈ ತೀರ್ಪಿಗೆ ಕಾರಣ. ಭ್ರಷ್ಟಾಚಾರ ನಿಗ್ರಹ ಮಾಡಬೇಕಾದ ಸಂಸ್ಥೆಯೇ ಭ್ರಷ್ಟಾಚಾರದಲ್ಲಿ ತೊಡಗಿದ್ದ ಕಾರಣ ಹೈಕೋರ್ಟ್ ಮಧ್ಯಪ್ರವೇಶಿಸಿದೆ. ತೀರ್ಪಿಗೆ ತಲೆಬಾಗಲೇ ಬೇಕು. ಸಂವಿಧಾನ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆ ಅಡಿ ಎಸಿಬಿಯನ್ನು ರಚಿಸುವ ಅಧಿಕಾರ ಸರ್ಕಾರಕ್ಕೆ ಇದೆ.

ಎ.ಎಸ್.ಪೊನ್ನಣ್ಣ, ಹಿರಿಯ ವಕೀಲರು, ಕಾಂಗ್ರೆಸ್ ಆಡಳಿತದಲ್ಲಿ ಎಸಿಬಿ ರಚನೆ ಸಮರ್ಥಿಸಿಕೊಂಡಿದ್ದ ಮಾಜಿ ಹೆಚ್ಚುವರಿ ಅಡ್ವೊಕೇಟ್ ಜನರಲ್

ಭೂಕುಸಿತ: ಕಾಫಿ, ಅಡಿಕೆ ಮರಗಳು ಹಾಗೂ ಕಾಳುಮೆಣಸು ಬಳ್ಳಿಗಳಿಗೆ ಹಾನಿ

ಕೊಡಗಿನಲ್ಲಿ ಬಿರುಸಿನ ಮಳೆ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆ ಹಾಗೂ ಮಲೆನಾಡು ಭಾಗದಲ್ಲಿ ಜೋರು ಮಳೆಯಾಗಿದೆ. ಉಳಿದ ಜಿಲ್ಲೆಗಳಲ್ಲಿ ಮಳೆಯಾಗಿದ್ದರೂ, ಅಬ್ಬರ ಕಡಿಮೆಯಾಗಿದೆ.

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಅಮ್ಮತ್ತಿ ಹೊಸಕೋಟದಲ್ಲಿ ಗಾಳಿಗೆ ಮರ ಬಿದ್ದು, ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಹ್ಯ ಗ್ರಾಮದಲ್ಲಿ ಕಾರ್ಮಿಕ ಕೆ.ಕೆ ಪ್ರಕಾಶ್ (45) ಎಂಬುವವರು ಮೃತಪಟ್ಟಿದ್ದಾರೆ.

ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭೂಕುಸಿತದಿಂದಾಗಿ ತೋಟದಲ್ಲಿನ ಕಾಫಿ, ಅಡಿಕೆ ಮರಗಳು, ಕಾಳು ಮೆಣಸು ಬಳ್ಳಿ ಹಾಳಾಗಿವೆ.

ಚಿಕ್ಕಮಗಳೂರು ತಾಲ್ಲೂಕಿನ ಚಿಕ್ಕಮಾಗರಹಳ್ಳಿ ಗ್ರಾಮದ ಲೋಕೇಶ್ ಗೌಡ ಎಂಬುವವರ ತೋಟದಲ್ಲಿ ಭೂಕುಸಿತವಾಗಿದೆ. ಸೋಮವಾರಪೇಟೆ ತಾಲ್ಲೂಕಿನ ಊರುಗುತ್ತಿಯಲ್ಲಿ ಬಿ.ವಿ.ಸುಮಿತ್ರಾ ವೆಂಕಟೇಶ್ ಅವರ ಕಾಫಿ ತೋಟದಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಕುಸಿತವಾಗಿದ್ದು, ಅರ್ಧ ಎಕರೆಯಷ್ಟು ಕಾಫಿ ಗಿಡಗಳು, ಕಾಳಮೆಣಸಿನ ಬಳ್ಳಿ, ಸಿಲ್ವರ್ ಮರಗಳು ನಾಶವಾಗಿವೆ. ಲಕ್ಷ್ಮಣ ತೀರ್ಥ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕಾವೇರಿ ನದಿ ಮತ್ತೆ ತುಂಬಿ ಹರಿಯಲಾರಂಭಿಸಿದೆ.

ಮಹಾರಾಷ್ಟ್ರದ ಕೊಂಕಣ ಭಾಗದಲ್ಲಿ ಭಾರಿ ಮಳೆಯಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ಅದರ ಉಪನದಿಗಳ ನೀರಿನ ಮಟ್ಟ ಹೆಚ್ಚಳವಾಗಿದೆ. ರಾಯಬಾಗ ತಾಲ್ಲೂಕಿನ ಬಾವನಸೌಂದತ್ತಿ ಗ್ರಾಮದ ಸುಗಂಧಾದೇವಿ ದೇವಸ್ಥಾನ ಮುಳುಗಡೆಯಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣದ ನದಿ ತೀರದ ಮೂರು ಕುಟುಂಬಗಳನ್ನು ಗುರುವಾರ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಮನೆಗಳಿಗೆ ಹಾನಿ: ಕೊಪ್ಪ ಹಾಗೂ ಎನ್.ಆರ್.ಪುರ ತಾಲ್ಲೂಕಿನಲ್ಲಿ ತಲಾ ಒಂದು, ಮೂಡಿಗೆರೆ ತಾಲ್ಲೂಕಿನಲ್ಲಿ ನಾಲ್ಕು ಮನೆಗಳಿಗೆ ಹಾನಿಯಾಗಿದೆ. ಜೊಯಿಡಾ ತಾಲ್ಲೂಕಿನ ರಾಮನಗರ, ಕಾರವಾರ ತಾಲ್ಲೂಕಿನಲ್ಲಿ ತಲಾ ಒಂದು ಹಾಗೂ ಶಿರಸಿ ತಾಲ್ಲೂಕಿನಲ್ಲಿ ಒಟ್ಟು ಮೂರು ಮನೆಗಳ ಗೋಡೆಗಳು ಕುಸಿದಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	121.84	69,953	65,240
ಹಾರಂಗಿ	2,859	2,854.56	7,860	4,100
ಕಬಿನಿ	2,284	2,282.33	27,000	27,000
ಹೇಮಾವತಿ	2,922	2,921.25	33,414	30,560
ಲಿಂಗನಮಕ್ಕಿ	1,819	1,809	46,362	2,274
ಸೂಪಾ (ಮೀ)	564	545.70	27,365	-
ಮಾಣಿ	595	587	4,676	-
ತುಂಗಭದ್ರಾ	1,633	1,631.71	1,62,522	1,63,522
ಮಲಪ್ರಭಾ	2,079.50	2,074.60	15,773	194
ಘಟಪ್ರಭಾ	2,175	2,171.33	29,133	2,486
ಭದ್ರಾ	186	183	28,426	17,454
ಆಲಮಟ್ಟಿ (ಮೀ)	519.60	518.92	1,31,330	2,00,000
ನಾರಾಯಣಪುರ (ಮೀ)	492.25	491.19	2,10,000	2,18,200

* ನೆಲಮಟ್ಟದಿಂದ

ಕೆರೆ ಒಡೆದು 50 ಎಕರೆ ಬೆಳೆ ಹಾನಿ

ಹಾಸನ: ಸಕಲೇಶಪುರ ತಾಲ್ಲೂಕಿನ ದೋಣಿಗಲ್‌ನಲ್ಲಿ ನಿರ್ಮಾಣವಾಗಿದ್ದ ಕೆರೆ ಒಡೆದು, ಸುಮಾರು 50 ಎಕರೆಗೂ ಅಧಿಕ ಬೆಳೆ ಹಾನಿಯಾಗಿದೆ.

ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ನಿರ್ಮಾಣಕ್ಕೆ ಅವೈಜ್ಞಾನಿಕವಾಗಿ ಸುರಿದಿದ್ದ ಸಾವಿರಾರು ಲೋಡ್ ಮಣ್ಣಿನಿಂದ ಕೆರೆ ನಿರ್ಮಾಣವಾಗಿತ್ತು. ಒಳಗಿನ ಒತ್ತಡ ಹೆಚ್ಚಾಗಿ, ತಡೆಗೋಡೆ ಇಲ್ಲದ್ದರಿಂದ ಒಮ್ಮೆಲೇ ನುಗ್ಗಿದ ನೀರು ಹಾಗೂ ಮಣ್ಣಿನಿಂದಾಗಿ 16 ರೈತರ ಕಾಫಿ, ಅಡಿಕೆ, ಬಾಳೆ, ಏಲಕ್ಕಿ ಬೆಳೆ ಬೇರು ಸಮೇತ ಕೊಚ್ಚಿ ಹೋಗಿದೆ.

ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ಧ್ವಜಾರೋಹಣ, ಅವರೋಹಣ ಕೆಲಸ: ಸಿಬ್ಬಂದಿ

ವಿಧಾನಸೌಧ ಧ್ವಜ ಹಾರಾಟದ ಹಿಂದಿದೆ ಶ್ರಮ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಳೆಯಿರಲಿ, ಚಳಿಯಿರಲಿ ವಿಧಾನಸೌಧದ ಮುಕುಟದ ಮೇಲೆ ರಾಷ್ಟ್ರಧ್ವಜ ನಿತ್ಯ ಹಾರಾಡುತ್ತಲೇ ಇರುತ್ತದೆ. ವಿಧಾನಸೌಧದ ಎದುರು ಓಡಾಡುವ ಜನ ಅದನ್ನು ನೋಡಿ ಖುಷಿಪಡುತ್ತಾರೆ. ಈ ಧ್ವಜ ಹಾರಾಡುವುದರ ಹಿಂದೆ ವಿಧಾನಸೌಧ ಸಿಬ್ಬಂದಿಯ ಒಂದು ತಂಡದ ಶ್ರಮ ಅಡಗಿದೆ.

ಪ್ರತಿನಿತ್ಯ ಬೆಳಿಗ್ಗೆ ಹಾರಾಡುವ ಧ್ವಜವನ್ನು ಸಂಜೆ ವೇಳೆಗೆ ಬಿಚ್ಚಿಡಲಾಗುತ್ತದೆ. ಈ ಧ್ವಜವನ್ನು ಮನಸಿಗೆ ಬಂದಾಗ ಹಾರಿಸಲು ಮತ್ತು ಬಿಚ್ಚಿಡಲು ಸಾಧ್ಯವಿಲ್ಲ. ಸೂರ್ಯೋದಯದ ಸಮಯ ತಿಳಿದುಕೊಂಡು ನಿಖರ ಸಮಯಕ್ಕೆ ಧ್ವಜ ಹಾರಿಸಲಾಗುತ್ತದೆ. ಅದೇ ರೀತಿ ಸೂರ್ಯಾಸ್ತದ ಸಮಯವನ್ನೂ ನಿಖರವಾಗಿ ತಿಳಿದುಕೊಂಡು ಧ್ವಜ ಬಿಚ್ಚಿಡಲಾಗುತ್ತದೆ.

'ಪ್ರತಿನಿತ್ಯ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯ ಬದಲಾಗುತ್ತಿರುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ಸಮಯವನ್ನು ನೋಡಿಕೊಂಡು ಧ್ವಜ ಹಾರಿಸುವ ಮತ್ತು ಇಳಿಸುವ ಕೆಲಸ ಮಾಡುತ್ತಿದ್ದೇವೆ' ಎಂದು ವಿಧಾನ ಸೌಧದಲ್ಲಿ ಧ್ವಜ ಹಾರಿಸುವ ಕೆಲಸವನ್ನು 26 ವರ್ಷಗಳಿಂದ ಮಾಡುತ್ತಿರುವ ಅಂಥೋನಿ ದಾಸ್ ಹೇಳುತ್ತಾರೆ.

ವಿಧಾನಸೌಧದ ಮೇಲೆ ಹಾರಾಡುತ್ತಿರುವ ರಾಷ್ಟ್ರಧ್ವಜ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

'ವಿಧಾನಸೌಧದ ಭದ್ರತೆ ಮತ್ತು ಧ್ವಜ ನಿರ್ವಹಣೆ ಮಾಡಲು 1997ರಲ್ಲಿ 90ಕ್ಕೂ ಹೆಚ್ಚು ಸಿಬ್ಬಂದಿ ಇದ್ದೆವು. ಅವರಲ್ಲಿ ಈಗ ಏಳು ಜನ ಮಾತ್ರ ಉಳಿದುಕೊಂಡಿದ್ದೇವೆ. ಇನ್ನು ನಾಲ್ಕು ವರ್ಷಗಳಲ್ಲಿ ಎಲ್ಲರೂ ನಿವೃತ್ತಿ ಆಗುತ್ತೇವೆ. ಸಿಬ್ಬಂದಿ ನೇಮಕವನ್ನು ಸರ್ಕಾರ ಮಾಡಿಯೇ ಇಲ್ಲ. ಆದರೆ, ಗೃಹ ರಕ್ಷಕ ಸಿಬ್ಬಂದಿಯನ್ನು ನೇಮಿಸಿಕೊಂಡಿದೆ' ಎಂದು ವಿವರಿಸಿದರು.

'ಮೂರು ಪಾಳಿಯಲ್ಲಿ ಕೆಲಸ ಮಾಡುತ್ತೇವೆ. ರಾತ್ರಿ ಪಾಳಿಯಲ್ಲಿ ಇದ್ದವರಿಗೆ ಬೆಳಗಿನ ಜಾವ ಧ್ವಜ ಹಾರಿಸುವ ಜವಾಬ್ದಾರಿ ಇರುತ್ತದೆ. ಮಧ್ಯಾಹ್ನ 2ರಿಂದ ಆರಂಭವಾಗುವ ಪಾಳಿಯವರಿಗೆ ಸಂಜೆ ಧ್ವಜ ಇಳಿಸುವ ಜವಾಬ್ದಾರಿ ಇರುತ್ತದೆ. ಎಲ್ಲರೂ ಈ ಕೆಲಸವನ್ನು 15 ದಿನಕ್ಕೊಮ್ಮೆ ಹಂಚಿಕೊಂಡು ನಿರ್ವಹಿಸುತ್ತೇವೆ' ಎಂದು ಹೇಳಿದರು.

'ಇದರೊಂದಿಗೆ ವಿಧಾನಸೌಧದ ಎಲ್ಲಾ ಕೊಠಡಿಗಳು ಮತ್ತು ಮುಖ್ಯ ದ್ವಾರಗಳಿಗೆ ಬೀಗ ಹಾಕುವ ಜವಾಬ್ದಾರಿಯನ್ನೂ ನಿರ್ವಹಿಸುತ್ತೇವೆ. ಒಂದು ಮಹಡಿಯಲ್ಲಿ ಒಂದು ಸುತ್ತು ಬರಬೇಕೆಂದರೆ ಒಂದು ಕಿಲೋ ಮೀಟರ್ ನಡೆಯಬೇಕು. ನಾಲ್ಕು ಮಹಡಿಯಲ್ಲಿ ಬೀಗ ಹಾಕಲು ನಾಲ್ಕು ಕಿಲೋ ಮೀಟರ್ ಸುತ್ತಿದಂತೆ ಆಗಲಿದೆ. ಪ್ರತಿ ಮಹಡಿಯನ್ನೂ ತಲಾ ಇಬ್ಬರು ವಹಿಸಿಕೊಂಡು ಈ ಕೆಲಸ ಮಾಡುತ್ತೇವೆ' ಎಂದು ಅಂಥೋನಿ ದಾಸ್ ವಿವರಿಸಿದರು.

ಧ್ವಜ ಹಾರಿಸಲು ₹50 ಭತ್ಯ

'ಧ್ವಜ ಹಾರಿಸುವ ಜವಾಬ್ದಾರಿ ನಿರ್ವಹಿಸುವ ನೌಕರರಿಗೆ ಸರ್ಕಾರ ದಿನಕ್ಕೆ ₹50 ಭತ್ಯೆ ನೀಡುತ್ತಿದೆ. 1996ರಲ್ಲಿ ನಾನು ಕೆಲಸಕ್ಕೆ ನಿಯೋಜನೆಗೊಂಡಾಗ ₹1 ಇತ್ತು' ಎಂದು ಅಂಥೋನಿ ದಾಸ್ ಹೇಳಿದರು.

'ಭತ್ಯೆ ಹೆಚ್ಚಿಸಲು ಮನವಿಗಳ ಮೇಲೆ ಮನವಿ ಸಲ್ಲಿಸಿ ಈಗ ₹50ಕ್ಕೆ ಬಂದಿದೆ. ಮತ್ತೆ ಹೆಚ್ಚಳ ಮಾಡಬೇಕೆಂದರೆ ಮನವಿ ಸಲ್ಲಿಸಬೇಕಾಗುತ್ತದೆ. ಹೆಚ್ಚಾಗಲು ಇನ್ನೆಷ್ಟು ದಿನ ಬೇಕೋ ಗೊತ್ತಿಲ್ಲ' ಎಂದರು.

ಸುದ್ದಿ 2 ನಿಮಿಷ

ಸ್ವಾತಂತ್ರ್ಯೋತ್ಸವ: ಬಿಎಂಟಿಸಿ ಬಸ್‌ನಲ್ಲಿ ಉಚಿತ ಪ್ರಯಾಣ

ಬೆಂಗಳೂರು: 75ನೇ ಸ್ವಾತಂತ್ರ್ಯೋತ್ಸವ ಮತ್ತು ಬಿಎಂಟಿಸಿ ಸಂಸ್ಥೆಯ ರಜತ ಮಹೋತ್ಸವ ಅಂಗವಾಗಿ ಆಗಸ್ಟ್ 15ರಂದು ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಬಿಎಂಟಿಸಿ ಅವಕಾಶ ಕಲ್ಪಿಸಿದೆ.

'ಈ ಸಂಬಂಧ ಸಲ್ಲಿಸಿದ್ದ ಪ್ರಸ್ತಾವನೆಗೆ ಮುಖ್ಯಮಂತ್ರಿ ಅನುಮೋದನೆ ನೀಡಿದ್ದು, ಸಾರ್ವಜನಿಕರು ಒಂದು ದಿನ ವೋಲ್ವೊ ಸೇರಿ ಎಲ್ಲಾ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು' ಎಂದು ಬಿಎಂಟಿಸಿ ಅಧ್ಯಕ್ಷ ನಂದೀಶ್‌ರೆಡ್ಡಿ ತಿಳಿಸಿದರು.

'ಬಿಎಂಟಿಸಿಯ ದಿನದ ವರಮಾನ ₹3 ಕೋಟಿ ಇದ್ದು, ಅದರ ಹೊರೆ ಸಂಸ್ಥೆಯ ಮೇಲೆ ಬೀಳಲಿದೆ. ಸರ್ಕಾರ ಅನುಮತಿ ನೀಡಿದ್ದರಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ' ಎಂದು ಹೇಳಿದರು.

300 ಎಲೆಕ್ಟ್ರಿಕ್ ಬಸ್: ಸ್ವಾತಂತ್ರ್ಯ ದಿನದ ಮುನ್ನಾ ದಿನ(ಆ.14) 300 ಎಲೆಕ್ಟ್ರಿಕ್ ಬಸ್‌ಗಳನ್ನು ಲೋಕಾರ್ಪಣೆ ಮಾಡಲಾಗುತ್ತಿದೆ. ವಿಧಾನಸೌಧದ ಪೂರ್ವ ದ್ವಾರದಲ್ಲಿ ಬಸ್‌ಗಳನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗುವುದು ಎಂದು ನಂದೀಶ್‌ರೆಡ್ಡಿ ತಿಳಿಸಿದರು.

ಈಗಾಗಲೇ 9 ಮೀಟರ್ ಉದ್ದದ 90 ಮಿನಿ ಎಲೆಕ್ಟ್ರಿಕ್ ಬಸ್‌ಗಳು ರಸ್ತೆಯಲ್ಲಿ ಓಡಾಡುತ್ತಿವೆ. 12 ಮೀಟರ್ ಉದ್ದದ ಎಲೆಕ್ಟ್ರಿಕ್ ಬಸ್‌ಗಳನ್ನು ಇದೇ ಮೊದಲ ಬಾರಿಗೆ ಸಾರ್ವಜನಿಕ ಸೇವೆಗೆ ನೀಡಲಾಗುತ್ತಿದೆ ಎಂದು ವಿವರಿಸಿದರು.

'ಅಪಘಾತರಹಿತ ಚಾಲಕರಿಗೆ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಆ.16ರಂದು ವಿತರಿಸಲಾಗುವುದು. 168 ಮಂದಿಗೆ ಚಿನ್ನದ ಪದಕ ಮತ್ತು 2,968 ಮಂದಿಗೆ ಬೆಳ್ಳಿ ಪದಕ ವಿತರಿಸಲಾಗುತ್ತಿದೆ. ಬಿಎಂಟಿಸಿ ಸಿಬ್ಬಂದಿಯಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಜಯದೇವ ಆಸ್ಪತ್ರೆಯಲ್ಲಿ ಉಚಿತವಾಗಿ ಹೃದಯ ತಪಾಸಣೆಗೆ ವ್ಯವಸ್ಥೆ ಮಾಡಲಾಗಿದೆ. 10,700 ಸಿಬ್ಬಂದಿ ಇದರ ಲಾಭ ಪಡೆದುಕೊಳ್ಳಲಿದ್ದು, ಈ ಯೋಜನೆಗೂ ಚಾಲನೆ ನೀಡಲಾಗುತ್ತಿದೆ' ಎಂದು ವಿವರಿಸಿದರು.

'ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜಾರೋಹಣ: ಅಂತರ್ಜಾಲಕ್ಕೆ ಅಪ್ಲೋಡ್ ಮಾಡಿ'

ಬೆಂಗಳೂರು: ನಗರದ ಅಪಾರ್ಟ್‌ಮೆಂಟ್‌ಗಳಲ್ಲಿರುವ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಮನವಿ ಮಾಡಿದರು.

ಆಗಸ್ಟ್ 13ರಿಂದ 15ರವರೆಗೆ ಹಮ್ಮಿಕೊಂಡಿರುವ 'ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ' ಅಭಿಯಾನದ ಅಂಗವಾಗಿ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ನಡೆದ ವರ್ಚುವಲ್ ಸಭೆಯಲ್ಲಿ ಗುರುವಾರ ಅವರು ಮಾತನಾಡಿದರು.

ಅಪಾರ್ಟ್‌ಮೆಟ್‌ಗಳಲ್ಲಿ ನಡೆದ ಅಭಿಯಾನದ ಛಾಯಾಚಿತ್ರ ಹಾಗೂ ದೃಶ್ಯಾವಳಿಗಳನ್ನು ಸಂಗ್ರಹಿಸಿ ಅಂತರ್ಜಾಲ https://harghartiranga.com ನಲ್ಲಿ ಅಪ್ಲೋಡ್ ಮಾಡಲು ತಿಳಿಸಿದರು.

ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಮಾತನಾಡಿ, ಬಿಬಿಎಂಪಿ ವ್ಯಾಪ್ತಿಯ ಪ್ರತಿಯೊಂದು ಮನೆಯಲ್ಲೂ ರಾಷ್ಟ್ರ ಧ್ವಜವನ್ನು ಹಾರಿಸಬೇಕು. ಅದರಂತೆ ಇದುವರೆಗೆ 10 ಲಕ್ಷ ಧ್ವಜಗಳನ್ನು ವಿತರಿಸಿದ್ದು, ಇನ್ನೂ 5 ಲಕ್ಷ ಧ್ವಜಗಳನ್ನು ವಿತರಣೆ ಮಾಡಲಾಗುತ್ತಿದೆ. ಆಯಾ ವಲಯ ಜಂಟಿ ಆಯುಕ್ತರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳನ್ನು ಸಂಪರ್ಕಿಸಿ ಧ್ವಜಗಳನ್ನು ಮಾರಾಟ ಮಾಡಲು ತಿಳಿಸಿದರು.

'ಈ ಬಾರಿ ರಾಷ್ಟ್ರಧ್ವಜವನ್ನು ಆ.12ರಿಂದ 15ರವರೆಗೆ ಹಗಲುರಾತ್ರಿ ಹಾರಿಸಬಹುದು. ಅಮೃತ ಮಹೋತ್ಸವದ ಅಂಗವಾಗಿ ವಿನಾಯಿತಿ ನೀಡಿಲಾಗಿದೆ. ಅಭಿಯಾನ ಮುಗಿದ ಬಳಿಕ ಅಂದರೆ ಆ.15ರ ಸೋಮವಾರ ಸಂಜೆ ರಾಷ್ಟ್ರಧ್ವಜವನ್ನು ನಿಯಮಾನುಸಾರ ತೆಗೆದು ಮನೆಗಳಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು' ಎಂದು ಹೇಳಿದರು.

ಸಭೆಯಲ್ಲಿ ಎಲ್ಲಾ ವಲಯ ಜಂಟಿ ಆಯುಕ್ತರು, ನೋಡಲ್ ಅಧಿಕಾರಿಗಳು ಹಾಗೂ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

₹80 ಸಾವಿರ ಹಣವಿದ್ದ ಬ್ಯಾಗ್ ಕಳ್ಳತನ

ಬೆಂಗಳೂರು: ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣಕ್ಕೆ ಬಂದಿಳಿದಿದ್ದ ಹೈದರಾಬಾದ್‌ನ ಎಚ್.ಸಿ.ಬಿ.ಸಿ ಬ್ಯಾಂಕ್ ಸಹಾಯಕ ವ್ಯವಸ್ಥಾಪಕ ದಾದಾಪೀರ್ ಎಂ.ಎಸ್. ಅವರ ಬ್ಯಾಗ್ ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದಾದಾಪೀರ್ ಅವರು ಕೆಲಸ ನಿಮಿತ್ತ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಆಗಸ್ಟ್ 7ರಂದು ಬೆಳಿಗ್ಗೆ ಮೆಜೆಸ್ಟಿಕ್ ನಿಲ್ದಾಣಕ್ಕೆ ಬಂದಿಳಿದಿದ್ದರು. ಇದೇ ವೇಳೆಯೇ ಅವರ ಬ್ಯಾಗ್ ಕಳ್ಳತನವಾಗಿದೆ. ₹ 80 ಸಾವಿರ ನಗದು, ಲ್ಯಾಪ್‌ಟಾಪ್, ಎಟಿಎಂ ಕಾರ್ಡ್ ಹಾಗೂ ಇತರೆ ಗುರುತಿನ ಚೀಟಿಗಳು ಬ್ಯಾಗ್‌ನಲ್ಲಿದ್ದವು. ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಚಾಮರಾಜಪೇಟೆ ಮೈದಾನ • ಅಧಿಕಾರಿಗಳ ಸಭೆಯಲ್ಲಿ ತೀರ್ಮಾನ

ಸರ್ಕಾರದಿಂದಲೇ ಧ್ವಜಾರೋಹಣ: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಮೈದಾನ ಕಂದಾಯ ಇಲಾಖೆಗೆ ಸೇರಿದ್ದು, ಇದೇ 15 ರಂದು ಧ್ವಜಾರೋಹಣವನ್ನು ಸರ್ಕಾರದ ವತಿಯಿಂದ ಉಪವಿಭಾಗಾಧಿಕಾರಿ ನೆರವೇರಿಸಲಿದ್ದಾರೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಚಾಮರಾಜಪೇಟೆ ಮೈದಾನದಲ್ಲಿ ಧ್ವಜಾರೋಹಣ ವಿಷಯ ವಿವಾದದ ಸ್ವರೂಪ ಪಡೆಯುತ್ತಿರುವ ಬೆನ್ನಲ್ಲೇ ಸಚಿವ ಅಶೋಕ ಗುರುವಾರ ಅಧಿಕಾರಿಗಳ ಸಭೆ ನಡೆಸಿದರು. ಸಭೆಯ ತೀರ್ಮಾನವನ್ನು ಬಳಿಕ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ಮೈದಾನದಲ್ಲಿ ಯಾವುದೇ ಸಂಘ–ಸಂಸ್ಥೆಗಳಿಗೂ ಧ್ವಜಾರೋಹಣಕ್ಕೆ ಅವಕಾಶ ನೀಡುವುದಿಲ್ಲ ಎಂದೂ ಸ್ಪಷ್ಟಪಡಿಸಿದರು.

> **ಈದ್ಗಾ ಮೈದಾನ ಕಂದಾಯ ಇಲಾಖೆಗೆ ಸೇರಿದೆ. ಸರ್ಕಾರದ ನೀತಿ ನಿಯಮಗಳ ಪ್ರಕಾರ ಸಭೆ ಸಮಾರಂಭಗಳು, ಉತ್ಸವಗಳನ್ನು ಕೈಗೊಳ್ಳಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

'ಸರ್ಕಾರದ ನಿಯಮಗಳ ಪ್ರಕಾರ ಸ್ಥಳೀಯ ಶಾಸಕರು ಮತ್ತು ಸಂಸದರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು. ಶಾಸಕ ಜಮೀರ್ ಅಹಮದ್ ಅವರಾಗಲಿ ಇತರ ಯಾವುದೇ ವ್ಯಕ್ತಿಗಳಿಗೂ ಧ್ವಜಾರೋಹಣ ಮಾಡುವಂತಿಲ್ಲ. ಸಾರ್ವಜನಿಕರೂ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಮೈದಾನದ ಸುತ್ತಮುತ್ತ ಪೊಲೀಸ್ ಬಂದೋಬಸ್ತ್ ಇರುತ್ತದೆ. ಈ ಎಲ್ಲ ವಿಷಯಗಳ ಬಗ್ಗೆ ಮುಖ್ಯಮಂತ್ರಿ ಜತೆ ಸುದೀರ್ಘ ಚರ್ಚೆ ಮಾಡಿದ್ದೇನೆ' ಎಂದು ಅಶೋಕ ತಿಳಿಸಿದರು.

'ಕಂದಾಯ ಇಲಾಖೆಯ ಅಧಿಕಾರಿಗಳು, ಕಾನೂನು ತಜ್ಞರ ಜತೆ ಈ ಮೈದಾನಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ಚರ್ಚೆ ನಡೆಸಿದ್ದೇನೆ. ಮೂಲತಃ ಈ ಜಮೀನು ಕಂದಾಯ ಇಲಾಖೆಗೆ ಸೇರಿದ್ದು, '40 ಗುಟ್ಟಹಳ್ಳಿ, ಚಾಮರಾಜಪೇಟೆ ಕಂದಾಯ ಇಲಾಖೆ' ಎಂಬ ಸ್ಪಷ್ಟ ಉಲ್ಲೇಖವಿದ್ದು, ಅದೇ ಹೆಸರಿನಲ್ಲೇ ಜಮೀನು ಅಸ್ತಿತ್ವದಲ್ಲಿದೆ. ಬೇರೆ ಯಾವುದೇ ಹೆಸರು ಇಲ್ಲ. ಈ ಜಾಗವನ್ನು ಮುಂದೆ ಬಿಬಿಎಂಪಿಗೆ ಕೊಡಬೇಕಾ, ಬಿಡಿಎಗೆ ಹಸ್ತಾಂತರಿಸಬೇಕಾ ಅಥವಾ ಕಂದಾಯ ಇಲಾಖೆಯಲ್ಲೇ ಉಳಿಸಿಕೊಳ್ಳಬೇಕಾ ಎಂಬ ಬಗ್ಗೆ ಮುಖ್ಯಮಂತ್ರಿಯವರ ಜತೆ ಚರ್ಚಿಸುತ್ತೇನೆ. ಅಲ್ಲಿ ಈಗ ಇರುವ ಎಲ್ಲ ರಚನೆಗಳೂ (ಗೋಡೆ) ಹಾಗೇ ಮುಂದುವರಿಯುತ್ತವೆ. ಯಾವುದೇ ಬದಲಾವಣೆಗಳನ್ನು ಮಾಡುವುದಿಲ್ಲ' ಎಂದು ಅವರು ತಿಳಿಸಿದರು.

ಈ ಜಮೀನನ್ನು ಕಂದಾಯ ಇಲಾಖೆ ಯಾವುದೇ ಸಂಘ–ಸಂಸ್ಥೆಗಳಿಗೂ ಹಸ್ತಾಂತರ ಮಾಡಿಲ್ಲ. ಈ ಹಿಂದೆ ಸುಪ್ರೀಂಕೋರ್ಟ್ ಈ ಜಾಗದಲ್ಲಿ ವರ್ಷದಲ್ಲಿ ಎರಡು ಬಾರಿ ಪ್ರಾರ್ಥನೆಗೆ ಅವಕಾಶ ನೀಡಬೇಕು ಎಂದು ಹೇಳಿತ್ತು. ಈಗ ಜಮೀನು ಕಂದಾಯ ಇಲಾಖೆ ಸುಪರ್ದಿಗೆ ಬಂದಿರುವುದರಿಂದ ಅಲ್ಲಿ ಧಾರ್ಮಿಕ ಚಟುವಟಿಕೆಗಳೂ ಸೇರಿ ಯಾವ ಯಾವ ಚಟುವಟಿಕೆಗಳಿಗೆ ಅವಕಾಶ ನೀಡಬೇಕು ಎಂಬ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಶೋಕ ಹೇಳಿದರು.

'ಈ ಜಾಗದ ಹಕ್ಕನ್ನು ಯಾರಿಗೂ ಕೊಟ್ಟಿಲ್ಲ. ಇವೆಲ್ಲ ಅಂಶಗಳನ್ನೂ ದಾಖಲೆಗಳ ಮೂಲಕ ಖಚಿತಪಡಿಸಿಕೊಳ್ಳಲಾಗಿದೆ. ಸರ್ಕಾರದ ಈ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಬಗ್ಗೆ ಯಾವುದೇ ಸಂಘ–ಸಂಸ್ಥೆಗಳಿಗೆ ಆಕ್ಷೇಪ ಇದ್ದರೆ ನ್ಯಾಯಾಲಯಕ್ಕೆ ಹೋಗಬಹುದು' ಎಂದರು.

ಹದಗೆಟ್ಟ ರಸ್ತೆ: ಬೈಕ್‌ನಿಂದ ಬಿದ್ದ ಬಾಲಕನ ಮೇಲೆ ಹರಿದ ಸೇನಾ ವಾಹನ

ಕೆ.ಆರ್.ಪುರ: ಹದಗೆಟ್ಟ ರಸ್ತೆಯಿಂದಾಗಿ ಬಾಲಕನೊಬ್ಬ ಸಾವಿಗೀಡಾದ ಘಟನೆ ಬೆಂಗಳೂರಿನ ಕೆ.ಆರ್.ಪುರದಲ್ಲಿ ನಡೆದಿದೆ. ತಂದೆ ಜೊತೆ ಬೈಕ್‌ನಲ್ಲಿ ಹೋಗುತ್ತಿದ್ದ ಜೀವನ್ (10) ಮೃತ ದುರ್ದೈವಿ.

ಜೀವನ್

ಮೃತ ಬಾಲಕನ ತಂದೆ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಆಗಿದ್ದು, ಸಂಜೆ ಮಗನ ಜೊತೆ ಬೈಕ್‌ನಲ್ಲಿ ಕೆ.ಆರ್. ಪುರದ ಮಾರುಕಟ್ಟೆಗೆ ಹೋಗುತ್ತಿದ್ದರು. ಇತ್ತೀಚಿಗೆ ಸುರಿದ ಮಳೆಯಿಂದ ರಸ್ತೆ ಹದಗೆಟ್ಟಿತ್ತು. ರಸ್ತೆಯಲ್ಲಿ ಹರಡಿಕೊಂಡಿದ್ದ ಪುಡಿ ಜಲ್ಲಿಯಿಂದಾಗಿ ಬೈಕ್ ಸ್ಕಿಡ್ ಆಗಿದ್ದು, ಬಾಲಕ ಆಯತಪ್ಪಿ ರಸ್ತೆ ಮೇಲೆ ಬಿದ್ದಿದ್ದಾನೆ. ಹಿಂದೆಯಿಂದ ಬಂದ ಸೇನೆಗೆ ಸೇರಿದ ವಾಹನ ಆತನ ಮೇಲೆ ಹರಿದಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ವಾಹನ ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ.

ನೋಟರಿ ವಿರುದ್ಧದ ವಿಚಾರಣೆಗೆ ಪೂರ್ವಾನುಮತಿ ಅಗತ್ಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೋಟರಿ ಪಬ್ಲಿಕ್‌ಗಳ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಅಗತ್ಯ' ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, 'ನಕಲಿ ದಾಖಲೆ ಸೃಷ್ಟಿಸಿ ನೋಟರಿ ಮಾಡಿಕೊಟ್ಟಿದ್ದಾರೆ' ಎಂಬ ಆರೋಪಕ್ಕೆ ಒಳಗಾಗಿದ್ದ ನೋಟರಿ ಗಣಪತಿ ವೆಂಕಟರಮಣ ಹೆಗಡೆ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಿದೆ.

ಈ ಕುರಿತಂತೆ ನೋಟರಿ ಗಣಪತಿ ವಿ.ಹೆಗಡೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಅರ್ಜಿದಾರರ ವಿರುದ್ಧ 4ನೇ ಎಸಿಎಂಎಂ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಪಡಿಸಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಪಿ.ಕುಲಕರ್ಣಿ, 'ನೋಟರಿ ಪಬ್ಲಿಕ್ ಗಣಪತಿ ವಿರುದ್ಧ ಪ್ರಕರಣ ದಾಖಲಿಸುವ ಮುನ್ನ ತನಿಖಾಧಿಕಾರಿ ನೋಟರಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ಇಂತಹ ಪ್ರಕರಣಗಳಲ್ಲಿ ನೋಟರಿ ಕಾಯ್ದೆ–1952ರ ಕಲಂ 13ರ ಅನುಸಾರ ಪೂರ್ವಾನುಮತಿ ಅವಶ್ಯವಾಗಿರುತ್ತದೆ. ಒಂದು ವೇಳೆ ಕಲಂ 13ರ ಅಡಿಯಲ್ಲಿ ಅನುಮತಿ ಪಡೆಯದೇ ಹೋದಲ್ಲಿ, ಅಂತಹ ಆರೋಪ ಹೊತ್ತ ಪ್ರಕರಣ ಊರ್ಜಿತವಾಗುವುದಿಲ್ಲ' ಎಂದು ವಾದ ಮಂಡಿಸಿದ್ದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ನೋಟರಿ ವಿರುದ್ಧದ ವಿಚಾರಣೆ ರದ್ದುಗೊಳಿಸಿದೆ.

ಪ್ರಕರಣವೇನು?: ಫ್ಲ್ಯಾಟ್ ಖರೀದಿ ವಿಚಾರಕ್ಕೆ ಸಂಬಂಧಿಸಿದಂತೆ ಸಾಲ ಪಡೆಯುವ ದಸ್ತಾವೇಜುಗಳಿಗೆ ಗಣಪತಿ ಹೆಗಡೆ ದೂರುದಾರ ತಂದಿದ್ದ ಜಂಟಿ ಒಪ್ಪಂದ ಪತ್ರಕ್ಕೆ ನೋಟರಿ ಮಾಡಿಕೊಟ್ಟಿದ್ದರು. 'ಗಣಪತಿ ಹೆಗಡೆ ಪ್ರಮಾಣೀಕರಿಸಿ ನೋಟರಿ ಮುದ್ರೆ ಒತ್ತಿದ ಈ ದಾಖಲೆಗಳು ಖೊಟ್ಟಿ' ಎಂದು ಆರೋಪಿಸಿ ಚಿಕ್ಕಸಂದ್ರದ ಎಚ್.ಎಲ್.ಮಂಜಪ್ಪ ಎಂಬುವರು ಗಣಪತಿ ವೆಂಕಟರಮಣ ಹೆಗಡೆ ಮತ್ತು ಇತರರ ವಿರುದ್ಧ ಖಾಸಗಿ ದೂರು ದಾಖಲಿಸಿದ್ದರು.

ಪ್ರಕರಣದ ತನಿಖೆ ನಡೆಸಿದ್ದ ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆ ಪೊಲೀಸರು 4ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದರನ್ವಯ ಕೋರ್ಟ್ ವಿಚಾರಣೆಗೆ ಮುಂದಾಗಿತ್ತು. ಇದನ್ನು ಪ್ರಶ್ನಿಸಿ ಗಣಪತಿ ಹೆಗಡೆ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸನ್ಮಾನ
75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ದೇಶಕ್ಕಾಗಿ ಸೇವೆ ಸಲ್ಲಿಸಿದ ವಾಯುಪಡೆ, ನೌಕಾಪಡೆ, ವೈದ್ಯ ಕ್ಷೇತ್ರದ ಕೊರೊನಾ ವಾರಿಯರ್‌ಗಳು ಹಾಗೂ ಪೌರಕಾರ್ಮಿಕರನ್ನು ಶಾಸಕರಾದ ಉದಯ ಗರುಡಾಚಾರ್, ಗರುಡಾ ಫೌಂಡೇಷನ್ ಸಂಸ್ಥಾಪಕಿ ಮೇದಿನಿ ಗರುಡಾಚಾರ್ ಸನ್ಮಾನಿಸಿದರು

ಟೆಂಡರ್ ಅವ್ಯವಹಾರ: ಕ್ರಮಕ್ಕೆ ಮನವಿ

ಬೆಂಗಳೂರು: 'ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದ್ದು, ಶಿವಾಜಿನಗರ ಹಾಗೂ ಪುಲಕೇಶಿನಗರ ವಿಭಾಗ ಕಾರ್ಯಪಾಲಕ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್.ಅರ್. ರಮೇಶ್ ದೂರು ಸಲ್ಲಿಸಿದ್ದಾರೆ.

ಬಿಬಿಎಂಪಿ ಆಡಳಿತಾಧಿಕಾರಿ ಹಾಗೂ ಮುಖ್ಯ ಆಯುಕ್ತರಿಗೆ ರಮೇಶ್ ದೂರು ಸಲ್ಲಿಸಿದ್ದು, 'ಇನ್‌ಫ್ರಾಕಾನ್ ಸ್ಟ್ರಕ್ಚರ್ಸ್' ಸಂಸ್ಥೆಯ ಆನಂದ್ ಪ್ರಮೋದ್ ಅವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು 'ವರ್ಕ್ಸ್ ಡನ್ ಸರ್ಟಿಫಿಕೇಟ್' (ಕೆಲಸ ಪೂರೈಸಿದ ಪ್ರಮಾಣಪತ್ರ) ಮತ್ತು ಇತರೆ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

'ಶಿವಾಜಿನಗರ ವಿಭಾಗದಲ್ಲಿ ತಲಾ ₹10 ಕೋಟಿಯ ಎರಡು ಪ್ಯಾಕೇಜ್ ಮತ್ತು ರಸ್ತೆಗಳ ಮೂಲಸೌಕರ್ಯಗಳ ವಿಭಾಗದ ಪೂರ್ವ ವಿಭಾಗದಲ್ಲಿ ತಲಾ ₹10 ಕೋಟಿಯ ಮೂರು ಪ್ಯಾಕೇಜ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಇದರಲ್ಲಿ ಮೂವರು ಗುತ್ತಿಗೆದಾರರು ಭಾಗವಹಿಸಿದ್ದಾರೆ. ಅರ್ಹರಾದ ಇಬ್ಬರನ್ನು ತಿರಸ್ಕರಿಸಿ, ನಿಯಮಬಾಹಿರವಾಗಿ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆ' ಎಂದು ದೂರಿದ್ದಾರೆ.

'ಈ ಗುತ್ತಿಗೆದಾರರು ಪುಲಕೇಶಿನಗರದ ವಿಭಾಗದಲ್ಲಿ ನಡೆಯದಿರುವ ಕಾಮಗಾರಿಗೆ ನಡೆದಿದೆ ಎಂದು ಪ್ರಮಾಣಪತ್ರವನ್ನೂ ಪಡೆದಿದ್ದಾರೆ. ಆದ್ದರಿಂದ ಈ ಎಲ್ಲ ಅಕ್ರಮಗಳಿಗೆ ಕಾರಣರಾದ ಕಾರ್ಯಪಾಲಕ ಎಂಜಿನಿಯರ್‌ಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು' ಎಂದು ದಾಖಲೆಗಳನ್ನು ಸಲ್ಲಿಸಿ ಆಗ್ರಹಿಸಿದ್ದಾರೆ.

ಹೆಸರು ಬದಲಿಸಿಕೊಂಡಿದ್ದ ಆರೋಪಿಗಳು

ನಗರದಲ್ಲಿ ಅಕ್ರಮ ವಾಸ: ಕೆಐಎನಲ್ಲಿ ಬಾಂಗ್ಲಾದ ಮೂವರು ಪ್ರಜೆಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದ ಮೂವರು ಪ್ರಜೆಗಳನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಲಸೆ ಅಧಿಕಾರಿಗಳು ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಬಾಂಗ್ಲಾದೇಶದ ಹಬಿಗಂಜ್‌ನ ನಿಖಿಲೇಶ್ ದಾಸ್ ಅಲಿಯಾಸ್ ನಿಖೇಶ್ (34), ಛಾಯನ್ ದಾಸ್ ಅಲಿಯಾಸ್ ದೀಪಾಂಜಲ್ (25) ಹಾಗೂ ನಾಜೀರ್ ಪೈಕ್ ಅಲಿಯಾಸ್ ಹೆಸರು ಅಮಿನ್ ಮೊಹಮ್ಮದ್ ಚೌಧರಿ (27) ಬಂಧಿತರು. ಹೊರ ದೇಶಕ್ಕೆ ಹೋಗಲು ನಿಲ್ದಾಣಕ್ಕೆ ಬಂದಿದ್ದ ವೇಳೆಯಲ್ಲೇ ಮೂವರು ವಲಸೆ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2013ರಲ್ಲಿ ಗಡಿ ಮೂಲಕ ದೇಶದೊಳಗೆ ನುಸುಳಿದ್ದ ನಿಖಿಲೇಶ್ ದಾಸ್ ಹಾಗೂ ಛಾಯನ್ ದಾಸ್, ಕೆಲ ದಿನ ಪಶ್ಚಿಮ ಬಂಗಾಳದಲ್ಲಿದ್ದರು. ಹೆಸರು ಬದಲಾಯಿಸಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಆಧಾರ್ ಪಡೆದಿದ್ದರು. ನಂತರ, ಪಾಸ್‌ಪೋರ್ಟ್ ಸಹ ಮಾಡಿಸಿದ್ದರು. ಬೆಂಗಳೂರಿಗೆ ಬಂದು ವಿವಿಧ ಕಂಪನಿಗಳಲ್ಲಿ ಕೆಲಸ ಮಾಡಿದ್ದರು.'

'ಮಲೇಷ್ಯಾಕ್ಕೆ ಹೋಗಲೆಂದು ಇಬ್ಬರೂ ಆಗಸ್ಟ್ 8ರಂದು ನಿಲ್ದಾಣಕ್ಕೆ ಬಂದಿದ್ದರು. ದಾಖಲೆಗಳ ಪರಿಶೀಲನೆ ವೇಳೆ ಅನುಮಾನ ಬಂದಿತ್ತು. ವಲಸೆ ಅಧಿಕಾರಿಗಳು ಹೆಚ್ಚಿನ ತಪಾಸಣೆ ನಡೆಸಿದಾಗ, ಬಾಂಗ್ಲಾದೇಶದವರೆಂದು ಆರೋಪಿಗಳು ತಪ್ಪೊಪ್ಪಿಕೊಂಡಿದ್ದರು. ಆರೋಪಿ ನಾಜೀರ್, 2008ರಲ್ಲೇ ಭಾರತಕ್ಕೆ ಬಂದು ಅಕ್ರಮವಾಗಿ ವಾಸವಿದ್ದ. ಈತನ ನಿಜವಾದ ಹೆಸರು ಅಮಿನ್ ಮೊಹಮ್ಮದ್ ಚೌಧರಿ. ಹೆಸರು ಬದಲಾಯಿಸಿಕೊಂಡು ನಕಲಿ ದಾಖಲೆ ಸೃಷ್ಟಿಸಿ, ಗುರುತಿನ ಚೀಟಿ ಪಡೆದಿದ್ದ. ಆಧಾರ್ ಹಾಗೂ ಪಾರ್ಸ್‌ಪೋರ್ಟ್ ಸಹ ಮಾಡಿಸಿದ್ದ. ಮಾಲ್ದೀವ್ಸ್‌ಗೆ ಆಗಸ್ಟ್ 8ರಂದು ನಿಲ್ದಾಣಕ್ಕೆ ಬಂದಿದ್ದಾಗಲೇ ವಲಸೆ ಅಧಿಕಾರಿಗಳಿಗೆ ಸಿಕ್ಕಿಬಿದ್ದ' ಎಂದೂ ಮೂಲಗಳು ಹೇಳಿವೆ.

'ಗಣೇಶ ಉತ್ಸವದಲ್ಲಿ ಪರಿಸರ ಜಾಗೃತಿ'

ಬೆಂಗಳೂರು: ಬಸವನಗುಡಿಯ ವಿದ್ಯಾರಣ್ಯ ಯುವಕ ಸಂಘವು 60ನೇ ವಾರ್ಷಿಕೋತ್ಸವ ಪ್ರಯುಕ್ತ ಈ ಬಾರಿ ಅದ್ದೂರಿಯಾಗಿ ಗಣೇಶ ಉತ್ಸವ ಆಚರಿಸು ವುದಾಗಿ ಘೋಷಿ ಸಿದ್ದು, ಇದೇ 13ರಿಂದ ಸೆ.10ರವರೆಗೆ ನಗರದ ವಿವಿಧೆಡೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ವ್ಯವಸ್ಥಾಪಕ ಟ್ರಸ್ಟಿ ನಂದೀಶ್ ಎಸ್. ಮರಿಯಪ್ಪ, 'ಈ ಬಾರಿಯ ಗಣೇಶ ಉತ್ಸವದಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಇದೇ ಶನಿವಾರ ಗಣೇಶ ಉತ್ಸವಕ್ಕೆ ಚಾಲನೆ ದೊರೆಯಲಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಮೂರು ದಿನಗಳ ನಾಟಕೋತ್ಸವವನ್ನೂ ಹಮ್ಮಿಕೊಳ್ಳಲಾಗಿದೆ. 16ರಂದು ಬಸವನಗುಡಿಯ ಶೃಂಗೇರಿ ಶಂಕರ ಮಠದಲ್ಲಿ ಸಹಸ್ರನಾರಿಕೇಳ ಗಣಯಾಗ ನಡೆಯಲಿದೆ. ರಾಜಾಜಿ ನಗರದ ಒರಿಯನ್ ಮಾಲ್‌ನಲ್ಲಿ 20, 21ರಂದು ರಾಜ್ ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಹಾಗೂ ರಘು ದೀಕ್ಷಿತ್ ಸಂಗೀತ ಸಂಜೆಯನ್ನೂ ಆಯೋಜಿಸಲಾಗಿದೆ' ಎಂದರು.

ಶ್ರೇಯಾ ಘೋಷಾಲ್

'28ರಂದು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಣ್ಣಿನ ಗಣಪತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. 31ರಿಂದ ಸೆ.10ರವರೆಗೆ ಖ್ಯಾತ ಗಾಯಕರಾದ ಶ್ರೇಯಾ ಘೋಷಾಲ್, ಅರ್ಮಾನ್ ಮಲಿಕ್, ಚಿತ್ರಾ, ಉದಿತ್ ನಾರಾಯಣ್, ವಿಜಯ ಪ್ರಕಾಶ್, ಶಿವಮಣಿ ಸೇರಿ ನೂರಕ್ಕೂ ಅಧಿಕ ಕಲಾವಿದರಿಂದ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮಗಳು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನ ಹಾಗೂ ಜಯನಗರ ಶಾಲಿನಿ ಮೈದಾನದಲ್ಲಿ ಆಯೋಜಿಸಲಾಗುವುದು' ಎಂದರು. ರಂಗಕಲಾವಿದೆ ಬಿ. ಜಯಶ್ರೀ, 'ಗಣೇಶೋತ್ಸವದಲ್ಲಿ 'ಹಯವದನ', 'ಸದಾರಮೆ', 'ಸುಭದ್ರ ಕಲ್ಯಾಣ' ಸೇರಿ ವಿವಿಧ ನಾಟಕಗಳು ಪ್ರದರ್ಶನ ಕಾಣಲಿವೆ' ಎಂದು ತಿಳಿಸಿದರು.

ಕಲಿಕಾ ಚೇತರಿಕೆಗೆ ಶಿಕ್ಷಕರ ಪ್ರಯತ್ನ

ಬೆಂಗಳೂರು: ಕೋವಿಡ್ ಬಳಿಕ, ಶಿಕ್ಷಣ ವ್ಯವಸ್ಥೆಯಲ್ಲಿ ಬದ್ಧತೆಯುಳ್ಳ ಶಿಕ್ಷಕರ ನಿರಂತರ ಪ್ರಯತ್ನವು ಹಿಂದೆ ಆಗಿದ್ದ ಕಲಿಕಾ ನಷ್ಟವನ್ನು ತುಂಬಿಕೊಡುವಲ್ಲಿ ಪರಿಣಾಮ ಬೀರುತ್ತಿದೆ ಎಂದು ಅಜೀಂ ಪ್ರೇಮ್‌ಜಿ ಫೌಂಡೇಷನ್ ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಕೋವಿಡ್ ಕಾಲದಲ್ಲಿ ಶಾಲೆಗಳು ಮುಚ್ಚಿದ್ದ ಕಾರಣ ಉಂಟಾದ ಕಲಿಕಾ ನಷ್ಟವನ್ನು ತುಂಬಿಕೊಡುವಲ್ಲಿ ಶಿಕ್ಷಕರು ವಹಿಸಿದ ಪಾತ್ರವನ್ನು ಗುರುತಿಸುವುದಕ್ಕಾಗಿ ಅಜೀಂ ಪ್ರೇಮ್‌ಜಿ ಫೌಂಡೇಷನ್ 2022ರ ಜನವರಿ ಮತ್ತು ಏಪ್ರಿಲ್ ನಡುವೆ ಕ್ಷೇತ್ರ ಅಧ್ಯಯನ ನಡೆಸಿತ್ತು. ಐದು ರಾಜ್ಯಗಳ 41 ಜಿಲ್ಲೆಗಳಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿತ್ತು.

ಎರಡರಿಂದ 5ನೇ ತರಗತಿಯವರೆಗಿನ 108 ಶಿಕ್ಷಕರು ಮತ್ತು ಅಷ್ಟೇ ಸಂಖ್ಯೆಯ ಶಾಲೆಗಳು ಹಾಗೂ 1644 ವಿದ್ಯಾರ್ಥಿಗಳು ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದರು.

ಶಿಕ್ಷಣದ ಕೇಂದ್ರ ಸ್ಥಾನದಲ್ಲಿರುವ ಶಿಕ್ಷಕರು ಕಲಿಕಾ ಮಟ್ಟದ ಚೇತರಿಕೆಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಹೀಗಾಗಿ, ಬದ್ಧತೆಯನ್ನು ಪ್ರದರ್ಶಿಸುತ್ತಾ ಬಂದಿರುವ ಶಿಕ್ಷಕರ ನಿರಂತರ ಯತ್ನಗಳು ಕಲಿಕಾ ನಷ್ಟವನ್ನು ನಿಭಾಯಿಸುವಲ್ಲಿ ಒಂದಷ್ಟು ಆರಂಭಿಕ ಯಶಸ್ಸನ್ನು ಪಡೆದಿವೆಯೇ ಅಥವಾ ಇಲ್ಲವೇ ಎಂಬುದನ್ನು ಅರಿತುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿತ್ತು ಎಂದು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸಿಇಒ ಅನುರಾಗ್ ಬೆಹರ್ ಹೇಳಿದ್ದಾರೆ.

ಸದ್ಯಕ್ಕೆ ತೀರಾ ಅಲ್ಪ ಪ್ರಮಾಣದಲ್ಲಿ ಮಾತ್ರವೇ ಪ್ರಗತಿ ಸಾಧಿಸಲಾಗಿದ್ದು, ಇಂತಹ ಬದ್ಧತೆಯ ಪ್ರಯತ್ನದ ಹೊರತಾಗಿಯೂ ಗಣನೀಯ ಪ್ರಮಾಣದ ವಿದ್ಯಾರ್ಥಿಗಳು ಹಿಂದಿನ ತರಗತಿಯ ಸಾಮರ್ಥ್ಯ ಮಟ್ಟಕ್ಕೆ ತಲುಪಿಲ್ಲ ಎಂಬುದನ್ನು ಸಹ ಈ ಅಧ್ಯಯನವು ತಿಳಿಸುತ್ತದೆ. ಶಾಲೆಗಳ ಮುಚ್ಚುವಿಕೆಯಿಂದಾಗಿ ವಿದ್ಯಾರ್ಥಿಗಳ ಕಲಿಕಾ ಮಟ್ಟದ ಮೇಲೆ ಉಂಟಾಗಿರುವ ವ್ಯಾಪಕ ಮತ್ತು ಆಳವಾದ ಪರಿಣಾಮದಿಂದಾಗಿ, ಕಲಿಕಾ ನಷ್ಟ ಇನ್ನಷ್ಟು ಆಗದಂತೆ ಇಡೀ ಸಾರ್ವಜನಿಕ ಶಾಲಾ ವ್ಯವಸ್ಥೆಯು ಅತ್ಯಂತ ಸುಸ್ಥಿರ ಹಾಗೂ ದೀರ್ಘಕಾಲಿಕ ಪ್ರಯತ್ನಗಳನ್ನು ಮಾಡಬೇಕು ಎಂದು ಈ ಅಧ್ಯಯನವು ಶಿಫಾರಸು ಮಾಡುತ್ತದೆ ಎಂದು ವಿವರಿಸಿದ್ದಾರೆ.

ಚಿತ್ರಾವಳಿ

1. ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಾಯರ 351ನೇ ಆರಾಧನಾ ಶಾಕೋತ್ಸವ ಅಂಗವಾಗಿ ಆರ್.ಕೆ. ವಾದಿಂದ್ರ ಆಚಾರ್ಯರ ನೇತೃತ್ವದಲ್ಲಿ ಗುರುರಾಯರ ಬೃಂದಾವನಕ್ಕೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ವಿಶೇಷ ಪೂಜಾ ಕಾರ್ಯಗಳು ನಡೆದವು
2. ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಬಿಬಿಎಂಪಿ ಕೇಂದ್ರ ಕಚೇರಿ ಎದುರಿನ ಹಡ್ಸನ್ ವೃತ್ತದಲ್ಲಿ ಆಕರ್ಷಕ ವಿದ್ಯುದ್ದೀಪಗಳ ಅಲಂಕಾರದ ಜತೆಗೆ ರಾಷ್ಟ್ರಧ್ವಜಗಳನ್ನು ಹಾರಿಸಿರುವುದು
3. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯ ಗುರುವಾರ ಆಯೋಜಿಸಿದ್ದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಚಾಲನೆ ನೀಡಿದರು. ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಇದ್ದರು
4. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯ ಆಯೋಜಿಸಿದ್ದ ಸ್ವತಂತ್ರ ಓಟದ ಸ್ಪರ್ಧೆ ಮತ್ತು ಜಾಥಾಕ್ಕೆ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಚಾಲನೆ ನೀಡಿದರು
5. ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶಾಸಕ ಬೈರತಿ ಸುರೇಶ್ ಅವರ ನೇತೃತ್ವದಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ತಿರಂಗ ಯಾತ್ರೆ ನಡೆಯಿತು.ಮುಖಂಡರಾದ ಅಬ್ದುಲ್ ವಾಜೀದ್, ಆನಂದ್ ಕುಮಾರ್ ಪಾಲ್ಗೊಂಡಿದ್ದರು
6. 'ಹರ್ ಘರ್ ತಿರಂಗಾ' ಅಭಿಯಾನದ ಭಾಗವಾಗಿ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಕಂಪನಿಯು ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಧ್ವಜಗಳನ್ನು ವಿತರಿಸಿತು. ಕಂಪನಿಯ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಬ್ಯಾನರ್ಜಿ ಹಾಗೂ ಅಧಿಕಾರಿಗಳು ಇದ್ದಾರೆ

–ಪ್ರಜಾವಾಣಿ ಚಿತ್ರಗಳು

19ಕ್ಕೆ ರಾಜ್ಯ ಲೆಕ್ಕ ಪರಿಶೋಧಕರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಆ.19ರಂದು ರಾಜ್ಯ ಲೆಕ್ಕ ಪರಿಶೋಧಕರ ಸಮ್ಮೇಳನ ಆಯೋಜಿಸಲಾಗಿದೆ.

ಸರಕು ಮತ್ತು ಸೇವಾ ತೆರಿಗೆ, ಜಿಎಸ್‌ಟಿ, ಆದಾಯ ತೆರಿಗೆ, ಲೆಕ್ಕ ಪರಿಶೋಧನೆ, ತೆರಿಗೆ ಸಂಬಂಧಿತ ಕಾನೂನು ವಿಷಯಗಳ ಕುರಿತು ಅರಿವು ಮೂಡಿಸಲು ಭಾರತೀಯ ಲೆಕ್ಕ ಪರಿಶೋಧನಾ ಸಂಸ್ಥೆ ಸಹಯೋಗದಲ್ಲಿ ದಕ್ಷಿಣ ಭಾರತದ ಪ್ರಾಂತೀಯ ಮಂಡಳಿ ಬೆಂಗಳೂರು ಶಾಖೆ 'ಜ್ಞಾನ ಸಂಗಮ-ಜ್ಞಾನ ಕೇಂದ್ರ' ಹೆಸರಿನಲ್ಲಿ ಸಮ್ಮೇಳನ ಆಯೋಜಿಸಿದೆ ಎಂದು ಲೆಕ್ಕ ಪರಿಶೋಧಕ ಟಿ.ಶ್ರೀನಿವಾಸ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಂದು ಬೆಳಿಗ್ಗೆ 10ಕ್ಕೆ ಐಸಿಎಐ ಮುಖ್ಯಸ್ಥ ಡಾ.ದೇಬಶಿಸ್ ಸಮ್ಮೇಳನ ಉದ್ಘಾಟಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉಪಸ್ಥಿತರಿರುವರು. ಬೆಳಗಾವಿ, ಬಳ್ಳಾರಿ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು ಮತ್ತು ಉಡುಪಿ ಶಾಖೆಗಳ ಸುಮಾರು 15 ಸಾವಿರ ಸದಸ್ಯರು, 40 ಸಾವಿರ ವಿದ್ಯಾರ್ಥಿಗಳು ಭಾಗವಹಿಸುವರು ಎಂದು ವಿವರ ನೀಡಿದರು.

ಸರ್ಕಾರಿ ಇಲಾಖೆಗಳಿಗೆ ನೋಟಿಸ್: ವಸೂಲಿಗೆ ಜಲಮಂಡಳಿ ಹರಸಾಹಸ

₹147 ಕೋಟಿ ನೀರಿನ ಶುಲ್ಕ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಬಿಡಬ್ಲ್ಯೂಎಸ್‌ಎಸ್‌ಬಿ) ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳೇ ಬರೋಬ್ಬರಿ ₹147.5 ಕೋಟಿ ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿವೆ.

ಈ ಮೊತ್ತವನ್ನು ವಸೂಲಿ ಮಾಡಲು ಜಲಮಂಡಳಿ ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದರೂ ಫಲ ದೊರೆಯುತ್ತಿಲ್ಲ. ನೀರಿನ ಶುಲ್ಕವೇ ಜಲಮಂಡಳಿಗೆ ಪ್ರಮುಖ ಆದಾಯವಾಗಿದೆ. ಹೀಗಾಗಿ, ಶುಲ್ಕ ಪಾವತಿಸುವಂತೆ ಇಲಾಖೆಗಳಿಗೆ ನೋಟಿಸ್ ನೀಡಿ ನೆನಪಿಸುತ್ತಿದೆ.

> **'ಅಸಲು ಪಾವತಿಸಿದರೆ ಬಡ್ಡಿ ಮನ್ನಾಗೆ ಪರಿಶೀಲನೆ'**
>
>
>
> ಎನ್. ಜಯರಾಮ್
>
> ಸುಮಾರು 15-20 ವರ್ಷಗಳಿಂದಲೂ ವಿವಿಧ ಇಲಾಖೆಗಳು ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿವೆ. ಬಾಕಿ ಪಾವತಿಸುವಂತೆ ಸರ್ಕಾರಿ ಇಲಾಖೆಗಳಿಗೆ ನಿರಂತರವಾಗಿ ನೋಟಿಸ್ ಕೊಡುತ್ತಿದ್ದೇವೆ. ಸಾರ್ವಜನಿಕರ ಹಿತ ದೃಷ್ಟಿಯಿಂದ ಸರ್ಕಾರಿ ಇಲಾಖೆಗಳ ವಿರುದ್ಧ ನೀರು ಸಂಪರ್ಕ ಸ್ಥಗಿತಗೊಳಿಸುವ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಶಿಕ್ಷಣ ಸಂಸ್ಥೆಗಳಿಗೆ ನೀರು ಸಂಪರ್ಕ ಸ್ಥಗಿತಗೊಳಿಸಿದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಇದೇ ರೀತಿ ಪರಿಸ್ಥಿತಿ ರೈಲ್ವೆ ಇಲಾಖೆಯದ್ದಾಗಿದೆ. ಮನ್ನಾ ಮಾಡುವಂತಹ ಕ್ರಮಗಳನ್ನು ಸಹ ಕೈಗೊಳ್ಳಲು ಸಾಧ್ಯವಿಲ್ಲ. ಆದರೆ, ಅಸಲು ಪಾವತಿಸಿದರೆ ಬಡ್ಡಿ ಮನ್ನಾ ಮಾಡುವ ಬಗ್ಗೆ ಪರಿಶೀಲಿಸಬಹುದು ಎಂದು ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್ ತಿಳಿಸಿದ್ದಾರೆ.

ನಗರದಲ್ಲಿರುವ ಕೇಂದ್ರ ಸರ್ಕಾರದ ಇಲಾಖೆಗಳೇ ₹21.75 ಕೋಟಿ ಮೊತ್ತ ಉಳಿಸಿಕೊಂಡಿದೆ. ಇದರಲ್ಲಿ ಬಾಕಿ ಮೇಲಿನ ₹3.19 ಕೋಟಿ ಬಡ್ಡಿ ಮೊತ್ತವೂ ಸೇರಿದೆ. ರಕ್ಷಣಾ ಇಲಾಖೆಯೇ ಅತಿ ಹೆಚ್ಚಿನ ₹26.43 ಕೋಟಿಯಷ್ಟು ನೀರಿನ ಶುಲ್ಕ ಪಾವತಿಸಬೇಕಾಗಿದೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಸಹ ₹71.61 ಕೋಟಿ ಬಾಕಿ ಉಳಿಸಿಕೊಂಡಿವೆ. ಇದರಲ್ಲಿ ಶಿಕ್ಷಣ ಇಲಾಖೆ ₹9.58 ಕೋಟಿ, ಆರೋಗ್ಯ ಇಲಾಖೆ ₹3.38 ಕೋಟಿ, ಪೊಲೀಸ್ ಇಲಾಖೆಯ ₹49.73 ಕೋಟಿ ಸೇರಿದೆ.

ಬಿಬಿಎಂಪಿ ಸಹ ₹19.29 ಕೋಟಿ ರೈಲ್ವೆ ಇಲಾಖೆ ₹18.73 ಕೋಟಿ, ಆರೋಗ್ಯ ಇಲಾಖೆ ₹3.38 ಕೋಟಿ ಮತ್ತು ಲೋಕೋಪಯೋಗಿ ಇಲಾಖೆ 43.64 ಕೋಟಿ ಉಳಿಸಿಕೊಂಡಿವೆ.

ಬಾಕಿ ಮೊತ್ತ ಪಾವತಿಸುವಂತೆ ಈ ಎಲ್ಲ ಇಲಾಖೆಗಳಿಗೆ ಜಲಮಂಡಳಿ ಪದೇ ಪದೇ ನೋಟಿಸ್ ನೀಡುತ್ತಿದೆ. ಆದರೆ, ಇಲಾಖೆಗಳು ಸ್ಪಂದಿಸುತ್ತಿಲ್ಲ. ಸರ್ಕಾರಿ ಇಲಾಖೆಗಳು ಸಾರ್ವಜನಿಕರಿಗಾಗಿಯೇ ಇರುವುದರಿಂದ ನೀರು ಪೂರೈಕೆಯನ್ನು ಸ್ಥಗಿತಗೊಳಿಸುವುದು ಪರಿಹಾರವಲ್ಲ. ಬಾಕಿ ಮೊತ್ತ ಪಾವತಿಸುವಂತೆ ಒತ್ತಡ ಹೇರುತ್ತಿದ್ದೇವೆ ಎಂದು ಜಲಮಂಡಳಿಯ ಅಧಿಕಾರಿಗಳು ಹೇಳುತ್ತಾರೆ.

ಕೆಲವು ಇಲಾಖೆಗಳು ವಿನಾಯಿತಿ ನೀಡುವಂತೆ ಕೋರಿವೆ. ಕೆಲ ಇಲಾಖೆಗಳು ಸಂಪೂರ್ಣ ಮನ್ನಾ ಮಾಡುವಂತೆ ಕೋರುತ್ತಿವೆ. ಇನ್ನು ಕೆಲ ಇಲಾಖೆಗಳು ಸಮಯಾವಕಾಶ ನೀಡಬೇಕು ಮತ್ತು ಬಡ್ಡಿ ಮನ್ನಾ ಮಾಡಲು ಕೋರಿವೆ. ಆದರೆ, ಮನ್ನಾ ಮಾಡುವ ಕ್ರಮಗಳಿಂದ ಜಲಮಂಡಳಿಗೆ ನಷ್ಟವಾಗುತ್ತದೆ ಎಂದು ಪ್ರತಿಪಾದಿಸುತ್ತಾರೆ.

ಜಲಮಂಡಳಿ 2013ರಲ್ಲಿ ತಿಂಗಳಿಗೆ ₹35 ಕೋಟಿಯಷ್ಟು ವಿದ್ಯುತ್ ಬಿಲ್ ಪಾವತಿಸುತ್ತಿತ್ತು. ಈಗ ತಿಂಗಳಿಗೆ ₹70 ಕೋಟಿ ಪಾವತಿಸುತ್ತಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಬೆಸ್ಕಾಂ ಸಹ ನಿರಂತರವಾಗಿ ದರ ಏರಿಸಿದೆ. ಪ್ರಸ್ತುತ 10.55 ಲಕ್ಷ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಹೀಗಾಗಿ, ಆಡಳಿತ ಮತ್ತು ನಿರ್ವಹಣೆಯ ವೆಚ್ಚವೂ ಹೆಚ್ಚಾಗುತ್ತಿದೆ. ಶುಲ್ಕ ಬಾಕಿ ಉಳಿಸಿಕೊಳ್ಳುವ ಧೋರಣೆ ಇದೇ ರೀತಿ ಮುಂದುವರಿದರೆ ಮಂಡಳಿಗೆ ಹೊರೆಯಾಗುತ್ತದೆ ಎಂದು ಹೇಳುತ್ತಾರೆ.

ಶಾಲೆಯಲ್ಲಿ ವಚನ ಶ್ರಾವಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನ ಎಂದರೆ ಕೇವಲ ಮಾತಲ್ಲ. ನಡೆಯೊಳಗೆ ನುಡಿಯ ಪೂರೈಕೆಯೇ ವಚನ. ಕೊಟ್ಟ ಭಾಷೆಗೆ ತಪ್ಪಲಾರದ್ದೇ ವಚನಗಳು, ಅವು ತಾಯಾಣೆ ಇದ್ದಂತೆ' ಎಂದು ವಚನಜ್ಯೋತಿ ಬಳಗ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ವಚನ ಶ್ರಾವಣದ 14ನೇ ದಿನದ ಕಾರ್ಯಕ್ರಮದಲ್ಲಿ ವೃಷಭಾವತಿನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅವರು ಮಾತನಾಡಿದರು.

'ತಾಯಿಯ ಆಣೆಯಾದ ವಚನಗಳು ಕನ್ನಡ ಭಾಷೆ ಮತ್ತು ಸಂಸ್ಕೃತಿಗೂ ತಾಯಿಯ ಸ್ಥಾನದಲ್ಲಿದ್ದು, ಭಾಷೆ ಮತ್ತು ಸಂಸ್ಕೃತಿಯನ್ನು ಪೋಷಿಸುತ್ತಿವೆ' ಎಂದು ಬಣ್ಣಿಸಿದರು.

ವಿದ್ಯಾರ್ಥಿಗಳಾದ ನಾಗರತ್ನ, ಸಿಂಚನ, ಸುಚಿತ್ರ, ಹಿತೇಶ್, ಪ್ರಿಯಾ, ಸಂಜನ, ಜಾಹ್ನವಿ ವಚನಗಳ ಕುರಿತು ಮಾತನಾಡಿದರು. ಪುಟಾಣಿಗಳು ವಚನಕಾರರ ವೇಷಭೂಷಣಗಳ ಧರಿಸಿ ವಚನ ಹಾಡಿದರು. ಶಾಲಾ ಮುಖ್ಯಸ್ಥ ಕುಮಾರಸ್ವಾಮಿ, ಸಾಮಾಜಿಕ ಕಾರ್ಯಕರ್ತ ಮರಿಲಿಂಗೇಗೌಡ ಪಾಟೀಲ್, ಶಿಕ್ಷಕರಾದ ಜಯಶ್ರೀ ಕುಮಾರಸ್ವಾಮಿ, ನಿರಂಜನಮೂರ್ತಿ, ಶಿವಲಿಂಗೇಗೌಡ, ಬಳಗದ ಗಂಗಾಧರ್, ರುದ್ರೇಶ್ ಇದ್ದರು.

ವಚನಜ್ಯೋತಿ ಬಳಗ ವೃಷಭಾವತಿನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ವಚನ ಶ್ರಾವಣದಲ್ಲಿ ವಿದ್ಯಾರ್ಥಿಗಳು ವಚನಕಾರರ ವೇಷಭೂಷಣ ಧರಿಸಿದ್ದರು. ಬಳಗದ ಅಧ್ಯಕ್ಷ ಪಿನಾಕಪಾಣಿ, ಸಂಚಾಲಕ ಗಂಗಾಧರ್, ಕಾರ್ಯದರ್ಶಿ ರುದ್ರೇಶ್, ಮುಖ್ಯ ಶಿಕ್ಷಕ ಕುಮಾರಸ್ವಾಮಿ ಇದ್ದರು.

ಉಚಿತ ಕೊಡುಗೆ, ಅಭಿವೃದ್ಧಿ ಯೋಜನೆ ಭಿನ್ನ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರವು ನೀಡುವ ಉಚಿತ ಕೊಡುಗೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ವ್ಯತ್ಯಾಸ ಇದೆ. ಉಚಿತ ಕೊಡುಗೆಗಳಿಂದಾಗಿ ಅರ್ಥವ್ಯವಸ್ಥೆಯು ಕಳೆದುಕೊಳ್ಳುವ ಹಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗುವ ಹಣದ ನಡುವೆ ಸಮತೋಲನ ಕಾಯ್ದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಉಚಿತ ಕೊಡುಗೆ ನೀಡುವುದಾಗಿ ಘೋಷಣೆ ಮಾಡಿದ ಪಕ್ಷಗಳ ಮಾನ್ಯತೆ ರದ್ದು ಮಾಡಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ನಿರಾಕರಿಸಿದೆ.

ಚುನಾವಣೆ ಸಂದರ್ಭದಲ್ಲಿ ಉಚಿತ ಕೊಡುಗೆಗಳನ್ನು ಘೋಷಿಸುವುದಕ್ಕೆ ತಡೆ ಒಡ್ಡಬೇಕು ಎಂದು ಕೋರಿ ಬಿಜೆಪಿ ಮುಖಂಡ ಅಶ್ವಿನಿ ಕುಮಾರ್ ಉಪಾಧ್ಯಾಯ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿ ಕೃಷ್ಣಮುರಾರಿ ಅವರಿದ್ದ ಪೀಠವು ನಡೆಸಿತು.

> **ರಾಜಕೀಯ ಪಕ್ಷಗಳ ಮಾನ್ಯತೆ ರದ್ದುಪಡಿಸುವ ವಿಚಾರಕ್ಕೆ ಹೋಗುವುದಿಲ್ಲ. ಇದು ಪ್ರಜಾಸತ್ತಾತ್ಮಕ ವಲ್ಲದ ವಿಚಾರ. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ ಅಲ್ಲವೇ?**
>
> **ಎನ್.ವಿ. ರಮಣ,** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ

ಚುನಾವಣಾ ಸಂದರ್ಭದಲ್ಲಿ ಉಚಿತ ಕೊಡುಗೆಗಳ ವಿವೇಚನಾರಹಿತ ಭರವಸೆ ನೀಡುವುದು ಗಂಭೀರ ವಿಚಾರ. ಈ ಕುರಿತು ಯಾವುದೇ ಕಾಯ್ದೆ ಇಲ್ಲ. ಹಾಗಿದ್ದರೂ ಸಂಸತ್ತಿನ ವ್ಯಾಪ್ತಿಯಲ್ಲಿ ಅತಿಕ್ರಮಣ ಮಾಡುವುದಿಲ್ಲ ಎಂದು ರಮಣ ಹೇಳಿದರು.

ಹೆಚ್ಚು ಮತಗಳನ್ನು ಪಡೆಯುವುದಕ್ಕಾಗಿ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ಘೋಷಿಸುವುದನ್ನು ನಿಯಂತ್ರಿಸಲು ಮಾರ್ಗಸೂಚಿಯನ್ನು ಕೇಂದ್ರವು ರೂಪಿಸಬೇಕು. ಕಾಯ್ದೆ ರೂಪುಗೊಳ್ಳುವವರೆಗೆ ಅದನ್ನು ಅನುಸರಿಸಬಹುದು ಎಂದು ಪೀಠವು ಹೇಳಿದೆ.

ಕೇಂದ್ರ ಸರ್ಕಾರದ ಕಾರ್ಯದರ್ಶಿ, ರಾಜ್ಯಗಳ ಕಾರ್ಯದರ್ಶಿಗಳು, ಪ್ರತಿ ರಾಜಕೀಯ ಪಕ್ಷದ ಪ್ರತಿನಿಧಿ, ನೀತಿ ಆಯೋಗದ ಪ್ರತಿನಿಧಿ, ಆರ್‌ಬಿಐ, ಹಣಕಾಸು ಆಯೋಗ, ರಾಷ್ಟ್ರೀಯ ತೆರಿಗೆ ಪಾವತಿದಾರರ ಸಂಘ ಮತ್ತು ಇತರರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಬೇಕು ಎಂಬ ಪ್ರಸ್ತಾವ ಇದೆ ಎಂದು ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಕಾಯ್ದೆ ಸಿದ್ಧವಾಗುವವರೆಗೆ ಅನುಸರಿಸುವುದಕ್ಕಾಗಿ ಪೀಠವು ಸೂಚನೆಗಳನ್ನು ನೀಡಬಹುದು ಎಂದು ಹೇಳಿದರು.

ಲೋಕಾಯುಕ್ತಕ್ಕೆ ಮತ್ತೆ ಶಕ್ತಿ: ಎಸ್.ಎಂ.ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರದಲ್ಲಿಯೇ ಮಾದರಿ ಸಾಂವಿಧಾನಿಕ ಸಂಸ್ಥೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಲೋಕಾಯುಕ್ತ ಸಂಸ್ಥೆಗೆ ಮತ್ತೆ ಶಕ್ತಿ ತುಂಬಲು ಹೈಕೋರ್ಟ್ ತೀರ್ಪು ಸಹಕಾರಿ ಆಗಲಿದೆ' ಎಂದು ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಎಸ್.ಎಂ.ಕೃಷ್ಣ

'ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಆಗಿದ್ದಾಗ ಆರಂಭಗೊಂಡ ಸಂಸ್ಥೆಗೆ ನಾನು ಮುಖ್ಯಮಂತ್ರಿ ಆಗಿದ್ದಾಗ ನ್ಯಾಯಮೂರ್ತಿ ಎನ್.ವೆಂಕಟಾಚಲ ಅವರನ್ನು ನೇಮಿಸಲಾಗಿತ್ತು. ಅವರು ಮತ್ತು ಸಂತೋಷ ಹೆಗ್ಡೆ ಅವರ ಪರಿಶ್ರಮದಿಂದ ದೇಶದ ಗಮನ ಸೆಳೆದಿದ್ದ ಲೋಕಾಯುಕ್ತ ಸಂಸ್ಥೆ, ಕಳೆದ ಕೆಲ ವರ್ಷಗಳ ಹಿಂದೆ ಎಸಿಬಿ ರಚನೆಯಿಂದ ಘನತೆ ಕಳೆದುಕೊಂಡಿತ್ತು' ಎಂದಿದ್ದಾರೆ. ಎಸಿಬಿಯಲ್ಲಿನ ಭ್ರಷ್ಟ ವ್ಯವಸ್ಥೆ ಬಗ್ಗೆ ಹೈಕೋರ್ಟ್ ಇತ್ತೀಚೆಗೆ ಚಾಟಿ ಬೀಸಿದ್ದು ಜನರ ಗಮನ ಸೆಳೆದಿತ್ತು. ಹೈಕೋರ್ಟ್‌ನ ಈ ತೀರ್ಪು ನ್ಯಾಯಾಲಯದ ಮೇಲಿನ ವಿಶ್ವಾಸ ಹೆಚ್ಚಿಸಿದೆ ಎಂದಿದ್ದಾರೆ.

ಲೋಕಾಯುಕ್ತಕ್ಕೆ ಮರುಜೀವ:ರವಿಕೃಷ್ಣ ರೆಡ್ಡಿ

'ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಲೋಕಾಯುಕ್ತ ನಾಶ ಮಾಡಿದ್ದರು. ಹೈಕೋರ್ಟ್ ಆದೇಶದಿಂದ ಮರುಜೀವ ಬಂದಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣ ರೆಡ್ಡಿ ಅವರು ಹೇಳಿದರು.

'2016ರ ಮಾರ್ಚ್‌ನಲ್ಲಿ ಎಸಿಬಿ ರಚನೆ ಆಯಿತು. ಆ ಸಂದರ್ಭದಲ್ಲಿ ಎಂಟು ದಿನಗಳ ಕಾಲ ಉಪವಾಸ ಸತ್ಯಾಗ್ರಹ ಮಾಡಿದ್ದೆವು. ಅದಕ್ಕೆ ಜನ ಬೆಂಬಲ ವ್ಯಕ್ತವಾಗಿದ್ದನ್ನು ಕಂಡು ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದ್ದರು. ಜೆಡಿಎಸ್ ಕೂಡ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ರಾಜ್ಯಪಾಲರಿಗೆ ಮನವಿ ನೀಡಿತ್ತು. ಅಧಿಕಾರಕ್ಕೆ ಬಂದಾಗ ಯಾರೂ ಲೋಕಾಯುಕ್ತವನ್ನು ಬಲಪಡಿಸಲಿಲ್ಲ' ಎಂದು ಹೇಳಿದರು.

'ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲಿ ಲೋಕಾಯುಕ್ತಕ್ಕೆ ಅಧಿಕಾರ ನೀಡುವ ಭರವಸೆ ನೀಡಿದ್ದ ಬಿಜೆಪಿ ಮಾತಿನಂತೆ ನಡೆದುಕೊಳ್ಳಲಿಲ್ಲ. ಆದರೀಗ ಹೈಕೋರ್ಟ್ ನ್ಯಾಯ ಸಮ್ಮತ ತೀರ್ಪು ನೀಡಿದೆ. ಎಸ್.ಆರ್.ಹಿರೇಮಠ ಅವರ ಸುದೀರ್ಘ ಕಾನೂನು ಹೋರಾಟಕ್ಕೆ ಜಯ ಸಂದಿದೆ' ಎಂದು ರವಿಕೃಷ್ಣ ರೆಡ್ಡಿ ಹೇಳಿದರು.

ಎಸಿಬಿ ರದ್ದು: ಎಎಪಿ ಸ್ವಾಗತ

ಪೃಥ್ವಿ ರೆಡ್ಡಿ

'ಎಸಿಬಿ ರದ್ದುಪಡಿಸುವ ಹೈಕೋರ್ಟ್ ಆದೇಶವನ್ನು ಆಮ್ ಆದ್ಮಿ ಪಕ್ಷ(ಎಎಪಿ) ಸ್ವಾಗತಿಸಿದ್ದು, ಆರು ವರ್ಷಗಳ ಹೋರಾಟಕ್ಕೆ ಯಶಸ್ಸು ದೊರಕಿದೆ' ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ತಿಳಿಸಿದ್ದಾರೆ.

'ಸಿದ್ದರಾಮಯ್ಯ ನೇತೃತ್ವದ ಸರ್ಕಾರ 2016ರಲ್ಲಿ ಲೋಕಾಯುಕ್ತದ ಅಧಿಕಾರ ಮೊಟಕುಗೊಳಿಸಿದಾಗ ಆಮ್ ಆದ್ಮಿ ಪಕ್ಷದ ಮುಖಂಡರು ಎಂಟು ದಿನಗಳ ಉಪವಾಸ ಸತ್ಯಾಗ್ರಹ ಮಾಡಿದ್ದೆವು. ಈಗ ಹೈಕೋರ್ಟ್ ಮಧ್ಯ ಪ್ರವೇಶಿಸಿ ಎಸಿಬಿಯನ್ನು ವಜಾ ಮಾಡಿರುವುದು ಸಂತಸದ ವಿಷಯ' ಎಂದಿದ್ದಾರೆ. 'ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿ ಸರ್ಕಾರ, ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡಲಿದೆ ಎಂದು ನಿರೀಕ್ಷಿಸುವುದು ಕೂಡ ಅಸಾಧ್ಯ. ಲೋಕಾಯುಕ್ತ ಸಂಸ್ಥೆಯು ಬಲಗೊಂಡು ಭ್ರಷ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಶಿಕ್ಷೆ ಆಗುವ ವ್ಯವಸ್ಥೆ ಜಾರಿಗೆ ಬರಬೇಕು' ಎಂದು ತಿಳಿಸಿದ್ದಾರೆ.

ಡ್ರಗ್ಸ್ ಜಪ್ತಿ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಇಎಲ್ ಬಡಾವಣೆಯಲ್ಲಿ ಡ್ರಗ್ಸ್ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ನಂದಿನಿ ಲೇಔಟ್ ನಿವಾಸಿ ಪ್ರಮೋದ್ ಹಾಗೂ ಕಡಬಗೆರೆಯ ಆಶೀಷ್ ವರ್ಮ ಬಂಧಿತರು. ಇವರಿಂದ 1 ಕೆ.ಜಿ. 50 ಗ್ರಾಂ ಗಾಂಜಾ, 52 ಗ್ರಾಂ ಎಂಡಿಎಂಎ ಹಾಗೂ ₹ 1,700 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಡಾವಣೆಯ ಉದ್ಯಾನದ ಬಳಿ ಆಗಸ್ಟ್ 9ರಂದು ಸಂಜೆ ಸುತ್ತಾಡುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.

'ಇಬ್ಬರೂ ಆರೋಪಿಗಳು ಹಲವು ದಿನಗಳಿಂದ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದರು. ಹೊರ ರಾಜ್ಯದಿಂದ ಡ್ರಗ್ಸ್ ಖರೀದಿಸಿ ತರುತ್ತಿದ್ದ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ದೆಹಲಿ: 3 ಬಾಲಕಿಯರ ಅಪಹರಣ, ಅತ್ಯಾಚಾರ– ಬಂಧನ

ನವದೆಹಲಿ (ಪಿಟಿಐ): ನಗರದ ರೋಹಿಣಿ ಪ್ರದೇಶದಲ್ಲಿ ಮೂವರು ಬಾಲಕಿಯರನ್ನು ಅಪಹರಿಸಿ, ನಿದ್ದೆ ಬರಿಸುವ ಪದಾರ್ಥಗಳನ್ನು ಮಿಶ್ರಣ ಮಾಡಿದ್ದ ಪಾನೀಯ ಕುಡಿಸಿ ಅವರ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಬಂಗಾಳಿಲಾಲ್ ಶರ್ಮಾ (45), ಸಂದೀಪ್ (36), ರುಕ್ಸಾನಾ (40) ಹಾಗೂ ಜ್ಯೋತಿ (19) ಎಂಬುವವರನ್ನು ಬಂಧಿಸಲಾಗಿದೆ. ಬಾಲಕಿಯರ ಮೇಲೆ ಅತ್ಯಾಚಾರ ಎಸಗಿದ್ದಾನೆ ಎನ್ನಲಾದ ಪ್ರಕಾಶ್ ಎಂಬಾತ ತಲೆ ಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಂಡಿರುವ ಬಗ್ಗೆ ಆ.14ರ ಒಳಗಾಗಿ ವರದಿ ಸಲ್ಲಿಸುವಂತೆ ದೆಹಲಿ ಮಹಿಳಾ ಆಯೋಗವು ಪೊಲೀಸರಿಗೆ ಸೂಚಿಸಿದೆ.

'ರುಕ್ಸಾನಾ ಜೊತೆಗೂಡಿ ಮಾನವ ಕಳ್ಳಸಾಗಣೆ ಜಾಲ ನಡೆಸುತ್ತಿದ್ದೆ. ಅಪಹರಿಸಲಾಗಿದ್ದ ಬಾಲಕಿಯರನ್ನು ಚಂಡೀಗಡದಲ್ಲಿ ಮಾರಾಟ ಮಾಡಲು ಉದ್ದೇಶಿಸಿದ್ದೆ ಎಂಬುದಾಗಿ ಆರೋಪಿ ಶರ್ಮಾ ವಿಚಾರಣೆ ವೇಳೆ ತಿಳಿಸಿದ್ದಾನೆ' ಎಂದು ಡಿಸಿಪಿ (ದಕ್ಷಿಣ) ಬೆನಿಟಾ ಮೇರಿ ಜೈಕರ್ ತಿಳಿಸಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾರಿ: ಸಚಿವ

ಆಸ್ತಿ, ನೀರಿನ ತೆರಿಗೆ ಸಂಗ್ರಹ ಗುರಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ಮತ್ತು ನೀರಿನ ತೆರಿಗೆ ಸಂಗ್ರಹ ಪ್ರಮಾಣವನ್ನು ಶೇ 90ಕ್ಕೆ ಏರಿಸಲು ಗುರಿ ನಿಗದಿ ಮಾಡಲಾಗಿದೆ ಎಂದು ಪೌರಾಡಳಿತ ಸಚಿವ ಎಂಟಿಬಿ ನಾಗರಾಜು ತಿಳಿಸಿದ್ದಾರೆ.

ಸಿಮ್ಯಾಕ್ ಸಂಸ್ಥೆಯು ಗುರುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿ, ಕೋವಿಡ್ ನಂತರ ಆಸ್ತಿ ಮತ್ತು ನೀರಿನ ತೆರಿಗೆ ಸಂಗ್ರಹ ಶೇ 50ರಿಂದ ಶೇ 60ಕ್ಕೆ ಕುಸಿದಿತ್ತು. ಈ ಪ್ರಮಾಣವನ್ನು ಶೇ 90ಕ್ಕೆ ಏರಿಸಿದರೆ ಮಾತ್ರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಲು ಸಾಧ್ಯ, ಎಂದು ಎಂಟಿಬಿ ನಾಗರಾಜು ಹೇಳಿದರು.

ಪಟ್ಟಣ ಮತ್ತು ನಗರ ಪ್ರದೇಶಗಳು ವೇಗವಾಗಿ ಬೆಳೆಯುತ್ತಿದ್ದು, ಅದಕ್ಕೆ ಅನುಗುಣವಾಗಿ ಜನಸಂಖ್ಯೆ ಮತ್ತು ವಾಹನ ದಟ್ಟಣೆ ಹೆಚ್ಚುತ್ತಿದೆ. ಅದಕ್ಕೆ ಪೂರಕವಾಗಿ ಸ್ಥಳೀಯ ಸಂಸ್ಥೆಗಳು ನಾಗರಿಕ ಸೌಲಭ್ಯಗಳನ್ನು ಕಲ್ಪಿಸಲು ಸಜ್ಜಾಗಬೇಕು ಎಂದು ಸಚಿವರು ಸೂಚಿಸಿದರು.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಈ ಯೋಜನೆಯ ಮೊತ್ತ ₹3,885 ಕೋಟಿ ಆಗಿದ್ದು, ಕಾಮಗಾರಿಗಳು ಸದ್ಯದಲ್ಲೇ ಆರಂಭವಾಗಲಿವೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಸೌಲಭ್ಯಗಳ ಅಭಿವೃದ್ಧಿ ಆಗಲಿದೆ ಎಂದು ನಾಗರಾಜು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ, ಕೆಎಸ್‌ಆರ್‌ಟಿಸಿ, ಬಳ್ಳಾರಿ ಮತ್ತು ಮೈಸೂರು ಮಹಾನಗರ ಪಾಲಿಕೆ, ಮುಳಗುಂದ, ತರೀಕೆರೆ ಮತ್ತು ಉಡುಪಿ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಅಲ್ಲದೆ, ವಿವಿಧ ಮಹಾನಗರ ಪಾಲಿಕೆಗಳಿಗೆ ಕೆಪಿಎಸ್‌ಸಿ ಮೂಲಕ ನೇಮಕಗೊಂಡ 52 ಕಿರಿಯ ಎಂಜಿನಿಯರ್‌ಗಳಲ್ಲಿ ಕೆಲವರಿಗೆ ನೇಮಕಾತಿ ಆದೇಶ ಪತ್ರವನ್ನೂ ಸಚಿವರು ವಿತರಿಸಿದರು.

ಪೋಕ್ಸೊ ಪ್ರಕರಣ: ಶಿಕ್ಷಕಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಯ ನರ್ಸರಿ ತರಗತಿಯ ಐದು ವರ್ಷದ ಮಗುವನ್ನು ಅಪಮಾನಕ್ಕೆ ಈಡುಮಾಡಿದ್ದ ಆರೋಪ ಹೊತ್ತಿರುವ ಶಿಕ್ಷಕಿಯ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಆರೋಪಪಟ್ಟಿ ರದ್ದುಪಡಿಸಬೇಕು' ಎಂದು ಕೋರಿ 41 ವರ್ಷದ ಶಿಕ್ಷಕಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿದೆ.

'ಐದು ವರ್ಷದ ಹೆಣ್ಣು ಮಗುವಿನೊಂದಿಗೆ ವ್ಯವಹರಿಸುವಾಗ ಶಿಕ್ಷಕರು ಜಾಗರೂಕರಾಗಿರಬೇಕಾಗುತ್ತದೆ. ಶಿಕ್ಷಕರು ಕೋಲನ್ನು ಬಿಟ್ಟು ಮಕ್ಕಳಿಗೆ ಒಲುಮೆಯಿಂದ ಕಲಿಸಲು ಮುಂದಾಗಬೇಕು. ಇದನ್ನು ಪ್ರತಿಯೊಬ್ಬ ಶಿಕ್ಷಕರೂ ನೆನಪಿನಲ್ಲಿಡಬೇಕು' ಎಂದು ನ್ಯಾಯಪೀಠವು ಹೇಳಿದೆ.

'ಶಿಕ್ಷಕಿಯು, ಬಾಲಕಿಯ ಪ್ಯಾಂಟ್ ಅನ್ನು ಉಳಿದ ಮಕ್ಕಳ ಮುಂದೆ ಎಳೆದು ಆ ಮಗು ನಾಚಿಕೆಯಿಂದ ಕುಗ್ಗಿ ಹೋಗುವಂತೆ ಮಾಡಿದ್ದಾರೆ. ಮಕ್ಕಳು ತಪ್ಪು ಮಾಡಿದಾಗ ತಿದ್ದುವ ಬದಲು, ಅವರನ್ನು ಈ ರೀತಿ ದಂಡಿಸಿದರೆ ಅದು ಆ ಎಳೆಯ ಮಗುವಿನ ಮನಸ್ಸಿನ ಮೇಲೆ ಆಘಾತ ಉಂಟು ಮಾಡುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಸಂತ್ರಸ್ತ ಮಗುವಿನ ತಾಯಿ 2017ರಲ್ಲಿ ಹಲಸೂರು ಠಾಣೆಯಲ್ಲಿ ಶಿಕ್ಷಕಿ ವಿರುದ್ಧ ದೂರು ನೀಡಿದ್ದರು. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ನಿಬಂಧನೆ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದರು. ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ರಾಖಿ ಸಂಭ್ರಮ ಸಂಪಂಗಿ ರಾಮನಗರದಲ್ಲಿ ಸಹೋದರನಿಗೆ ರಾಖಿ ಕಟ್ಟುವ ಮೂಲಕ ಸಹೋದರಿಯರು ರಕ್ಷಾ ಬಂಧನ ಆಚರಿಸಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ನಿಧನ ವಾರ್ತೆ

ಪ್ರೊ. ವಿ. ಎ. ನಾಡಿಗೇರ

ಬೆಂಗಳೂರು: ಧಾರವಾಡದ ಕರ್ನಾಟಕ ಕಾಲೇಜಿನ (ಕೆಸಿಡಿ) ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ. ವಿ.ಎ. ನಾಡಿಗೇರ (90) ಅವರು ಬುಧವಾರ (ಆಗಸ್ಟ್ 10) ನಿಧನರಾದರು.

ನಾಡಿಗೇರ ಅವರು ನಿವೃತ್ತಿ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಗುರುವಾರ ನಾಡಿಗೇರ ಅವರ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.

ಬೆಂಗಳೂರು ರೇಸ್

ಜೈಂಟ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೈಂಟ್ ಸ್ಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬೆನಿಗ್ನಿಟ 5, ಆಕ್ಟಿವೇಟೆಡ್ 9, ಟೈಟೊ ಆಲ್ಬಾ 1
2ನೇ ರೇಸ್: ಆಲ್ಡ್‌ಗೇಟ್ 1, ಮಾಂಟೆವರ್ಡಿ 4, ಕಲಮಿಟ್ಸ 2
3ನೇ ರೇಸ್: ಇಂಪೀರಿಯಲ್ ಪವರ್ 2, ಮೂನ್ಸ್ ಬ್ಲೆಸಿಂಗ್ಸ್ 4, ಕಿಂಗ್‌ಸ್ಟನ್ 3
4ನೇ ರೇಸ್: ಕ್ಯಾರಕಸ್ 4, ಫಾರೆವರ್ ಟುಗೆದರ್ 1, ಪ್ರಾಮಿಸ್ ಕೆಪ್ಟ್ 5
5ನೇ ರೇಸ್: ಜೈಂಟ್ ಸ್ಟಾರ್ 1, ಟ್ರೂಲಿ ಎಪಿಕ್ 3
6ನೇ ರೇಸ್: ಗೋಲ್ಡನ್ ಟೈಮ್ 6, ಹಾರ್ಮೋನಿಯಾ 1, ಇಂಪೆಕಬಲ್ 8
7ನೇ ರೇಸ್: ಮಾಂಟೆಲಿನಾ 3, ಇನ್‌ಯುಬಿಲೀವ್ 5, ಮ್ಯೂರ್‌ಫೀಲ್ಡ್ 1
8ನೇ ರೇಸ್: ಬೆನೆಡಿಕ್ಶನ್ 6, ಸದರ್ನ್ ಪವರ್ 1, ಬಾಲ್ಟಿಮೋರ್ 3

ಉತ್ತಮ ಬೆಟ್: ಆಲ್ಡ್‌ಗೇಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಗುಡುಗು ಸಹಿತ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡು ದಿನ ಮಳೆ ಮುಂದುವರೆಯಲಿದ್ದು, ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ಒಳನಾಡಿನ ಕೆಲವು ಕಡೆ ಶುಕ್ರವಾರ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಹಾಗೂ ಹಾಸನ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಯಲ್ಲಿ ಭಾರಿ ಮಳೆ ಆಗಲಿದೆ. ಉತ್ತರ ಒಳನಾಡಿನ ಬೆಳಗಾವಿ, ದಕ್ಷಿಣ ಒಳನಾಡಿನ ಹಾಸನ ಜಿಲ್ಲೆಯಲ್ಲಿ ಒಂದೆರಡು ಸಲ ಭಾರಿ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯು ಪ್ರತಿ ಗಂಟೆಗೆ 65 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಇಲಾಖೆ ಸೂಚಿಸಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ಒಂದೆರಡು ಬಾರಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ಹೇಳಿದೆ.

> **ಹಾನಿ: 3 ದಿನಗಳಲ್ಲಿ ಕೇಂದ್ರಕ್ಕೆ ವರದಿ**
>
> **ಬೆಂಗಳೂರು:** ಅತಿವೃಷ್ಟಿಯಿಂದ ಬೆಳೆ, ಮೂಲಸೌಕರ್ಯ ಹಾನಿ ಕುರಿತು ಮೂರು ದಿನಗಳಲ್ಲಿ ಕೇಂದ್ರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.
>
> ರಾಜ್ಯದಲ್ಲಿ ಅಧಿಕ ಮಳೆಯಾಗಿದೆ. ಮೂಲ ಸೌಕರ್ಯಗಳು ಹಾಳಾಗಿವೆ. ತುರ್ತು ಕಾಮಗಾರಿ ಕೈಗೊಳ್ಳಲು ರಾಜ್ಯ ಸರ್ಕಾರ ₹ 500 ಕೋಟಿ ಬಿಡುಗಡೆ ಮಾಡಿದೆ. ಹೆಚ್ಚಿನ ಪರಿಹಾರ ಕೋರಿ ಕೇಂದ್ರಕ್ಕೆ ಮನವಿ ಮಾಡಲಾಗುವುದು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ನಗರದಲ್ಲಿ ಇಂದು

ರಾಘವೇಂದ್ರಸ್ವಾಮಿಗಳ 351ನೇ ಆರಾಧನಾ ಮಹೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಅನುಷಾ ಪವನ್ ತಂಡ, ದಾಸವಾಣಿ: ಮೈಸೂರು ರಾಮಚಂದ್ರಾಚಾರ್, ಆಯೋಜನೆ ಹಾಗೂ ಸ್ಥಳ: ಶ್ರೀ ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ, ಬೆಳಿಗ್ಗೆ 8ರಿಂದ

ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ: ಉಪಸ್ಥಿತಿ: ವಿದ್ಯಾಧೀಶತೀರ್ಥ ಸ್ವಾಮೀಜಿ, ಆಯೋಜನೆ: ಸರ್ವಮೂಲ ಪ್ರತಿಷ್ಠಾನ, ಸ್ಥಳ: ಉಡುಪಿಯ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10

ರಾಜ್ಯಮಟ್ಟದ ಶೋಷಿತರ ಏಕತಾ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ರಮಾಬಾಯಿ ಆನಂದ್ ತೇಲ್ತುಂಬ್ಡೆ, ಅಧ್ಯಕ್ಷತೆ: ವಿ. ನಾಗರಾಜ್, ಮುಖ್ಯ ಅತಿಥಿಗಳು: ನ್ಯಾ. ಎಚ್.ಎನ್. ನಾಗಮೋಹನ ದಾಸ್, ಎಚ್.ಸಿ. ಮಹದೇವಪ್ಪ, ರವಿವರ್ಮ ಕುಮಾರ್, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಅಂಬೇಡ್ಕರ್ ಭವನ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಳಿಗ್ಗೆ 10.30

ದುಂಡು ಮೇಜಿನ ಸಭೆ: 'ಬಿಬಿಎಂಪಿ ಚುನಾವಣಾ ಪ್ರಕ್ರಿಯೆಯ ಗೊಂದಲಗಳು ಮತ್ತು ಮುಂದಿನ ಹೋರಾಟದ ಮಾರ್ಗೋಪಾಯಗಳು', ಉದ್ಘಾಟನೆ: ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ: ಪಿ. ಪಿಳ್ಳರಾಜು ಬೋಸಪ್ಪ, ಭಾಷಣ: ಜಿ.ಸಿ. ವೆಂಕಟರಮಣಪ್ಪ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಕಾನಿಷ್ಕಾ ಗ್ರ್ಯಾಂಡ್ ಹೋಟೆಲ್ ಸಭಾಂಗಣ, ಗಾಂಧಿನಗರ, ಬೆಳಿಗ್ಗೆ 11

75ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ರ್‍ಯಾಲಿ: ಮುಖ್ಯ ಅತಿಥಿ: ಪಿ.ಜಿ. ಆರ್. ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬಿಬಿಎಂಪಿ ಜಿಲ್ಲಾ ಸಂಸ್ಥೆ, ಸ್ಥಳ: ಬಿಬಿಎಂಪಿ ಪ್ರೌಢಶಾಲೆ, ಚಾಮರಾಜಪೇಟೆ, ಬೆಳಿಗ್ಗೆ 11

> **'ಸ್ವಾತಂತ್ರ್ಯ ಆಂದೋಲನಕ್ಕೆ ಕನ್ನಡ ಸಾಹಿತ್ಯದ ಕೊಡುಗೆ' ವಿಚಾರ ಸಂಕಿರಣ:** ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಮುಖ್ಯ ಭಾಷಣ: ಎಚ್.ಎಸ್. ಶಿವಪ್ರಕಾಶ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಜೆ.ಸಿ. ರಸ್ತೆ, ಬೆಳಿಗ್ಗೆ 10
>
>
>
> ಚಂದ್ರಶೇಖರ ಕಂಬಾರ

ಗ್ರಂಥಪಾಲಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪುಸ್ತಕ ಪ್ರದರ್ಶನ ಉದ್ಘಾಟನೆ: ನಿರ್ಮಲಾ ಸೀತಾರಾಮನ್, ಬಹುಮಾನ ವಿತರಣೆ: ಎಂ.ರಾಜೀವ್ ಚಂದ್ರಶೇಖರ್, ಪ್ರಶಸ್ತಿ ಪ್ರದಾನ: ಬಿ.ಸಿ. ನಾಗೇಶ್, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಆಯೋಜನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ಬೆಳಿಗ್ಗೆ 11

ಫಲಪುಷ್ಪ ಪ್ರದರ್ಶನದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ: ಡಾ.ಎಂ.ಎನ್. ವಿದ್ಯಾಶಂಕರ್, ಡಾ.ಸಿ. ರಾಮಚಂದ್ರ, ಅಧ್ಯಕ್ಷತೆ: ಉದಯ ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಮೈಸೂರು ಉದ್ಯಾನ ಕಲಾ ಸಂಘ, ಸ್ಥಳ: ಡಾ.ಎಂ.ಎಚ್. ಮರಿಗೌಡ ಸ್ಮಾರಕ ಭವನ, ಲಾಲ್‌ಬಾಗ್, ಮಧ್ಯಾಹ್ನ 2

'ನಮ್ಮ ಭವಿಷ್ಯದ ಮೇಲೆ ಭಾರತ ಸಂವಿಧಾನದ ಪರಿಣಾಮ' ವಿಷಯದ ಬಗ್ಗೆ ಚರ್ಚೆ: ಅರ್ಚನಾ ಮುತ್ತಪ್ಪ, ಡಾ.ಎ. ರವೀಂದ್ರ, ಉಪಸ್ಥಿತಿ: ಡಾ. ಮೀನಾ ನಾಯರ್, ಭಾಷಣಕಾರರು: ಎಂ.ಆರ್. ಶ್ರೀನಿವಾಸಮೂರ್ತಿ, ಅನಿತಾ ಗುರುಮೂರ್ತಿ, ಪ್ರಣಯ್ ಕೆ., ಆಯೋಜನೆ: ಪಬ್ಲಿಕ್ ಅಫೇರ್ಸ್ ಸೆಂಟರ್, ಸ್ಥಳ: ಐಎಎಸ್ ಆಫೀಸರ್ಸ್ ಅಸೋಸಿಯೇಷನ್, ಶಿವಾಜಿನಗರ, ಸಂಜೆ 4.30

ಸಂವಾದ: 'ಭಾರತೀಯ ಬೌದ್ಧರು ಎದುರಿಸುತ್ತಿರುವ ಸವಾಲುಗಳು', ಉದ್ಘಾಟನೆ: ರಮಾಬಾಯಿ ಆನಂದ್ ತೇಲ್ತುಂಬ್ಡೆ, ಉಪಸ್ಥಿತಿ: ಬುದ್ಧಮ್ಮ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ ಹಾಗೂ ಸ್ಥಳ: ನಾಗಸೇನಾ ವಿದ್ಯಾಲಯ, ಸದಾಶಿವನಗರ, ಮಧ್ಯಾಹ್ನ 3

ವಿದ್ಯಾರ್ಥಿಗಳೊಂದಿಗೆ ಸಂವಾದ: ಎಸ್. ಜೈಶಂಕರ್, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ ಹಾಗೂ ಸ್ಥಳ: ಎಂ.ಆರ್. ಡಿ. ಸಭಾಂಗಣ, ಪಿ.ಇ.ಎಸ್. ವಿಶ್ವವಿದ್ಯಾಲಯ, ಹೊಸಕೆರೆಹಳ್ಳಿ, ಮಧ್ಯಾಹ್ನ 3

ಎಂ.ಆರ್. ದೊರೆಸ್ವಾಮಿ

ಕುಳುವ ನುಲಿಯ ಚಂದಯ್ಯ ಜಯಂತಿ: ಸಾನ್ನಿಧ್ಯ: ಶಿವಮೂರ್ತಿ ಮುರುಘಾ ಶರಣರು, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಸುನೀಲ್ ಕುಮಾರ್, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5



ಮುರುಘಾ ಶರಣರು

ಜಯಚಾಮರಾಜ ಒಡೆಯರ್ ಅವರ ಜೀವನಚರಿತ್ರೆ 'ದಿ ಮಾವೆರಿಕ್ ಮಹಾರಾಜ' ಪುಸ್ತಕ ಬಿಡುಗಡೆ: ಕೆ. ರಾಧಾಕೃಷ್ಣನ್, ಗೌರವ ಅತಿಥಿ: ಎಚ್.ಎನ್. ಸುರೇಶ್, ಉಪಸ್ಥಿತಿ: ಕಾಮಾಕ್ಷಿ ದೇವಿ ಒಡೆಯರ್, ಇಂದ್ರಾಕ್ಷಿ ದೇವಿ ಒಡೆಯರ್, ದೀಪ್ತಿ ನವರತ್ನ, ಆಯೋಜನೆ: ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಷ್ಠಾನ, ಸ್ಥಳ: ವೈಟ್ ಪೆಟಲ್ಸ್, ಅರಮನೆ ಮೈದಾನ, ಸಂಜೆ 5.30

> **ಡಾ. ಮಹದೇವ ಬಣಕಾರ ಸ್ಮರಣೆ ಹಾಗೂ ಪುಷ್ಪ ಬಸವರಾಜ್ ಬಣಕಾರ ಅವರ 'ವಚನ ಧೀವರಿ' ಪುಸ್ತಕ ಬಿಡುಗಡೆ:** ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಲೀಲಾದೇವಿ ಆರ್. ಪ್ರಸಾದ್, ಕೃತಿ ಬಗ್ಗೆ: ಕೆ.ಆರ್. ಸಂಧ್ಯಾರೆಡ್ಡಿ, ಉಪಸ್ಥಿತಿ: ಉಷಾ ಕಿರಣ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಗಾಂಧಿನಗರ ವಿಧಾನಸಭಾ ಕ್ಷೇತ್ರ ಘಟಕ, ಮಹಿಳಾ ಸಹಕಾರಿ ಪ್ರಕಾಶನ, ಸ್ಥಳ: ಮಹಿಳಾ ವಿಶ್ರಾಂತ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಸಂಜೆ 5.30
>
>
>
> ಗೊ.ರು. ಚನ್ನಬಸಪ್ಪ

12ನೇ ರಾಷ್ಟ್ರೀಯ ಬ್ರಾಕಿಥೆರಪಿ ವಾರ್ಷಿಕ ಸಮ್ಮೇಳನ: ಉದ್ಘಾಟನೆ: ಡಾ.ಕೆ. ಸುಧಾಕರ್, ಗೌರವ ಅತಿಥಿ: ನವೀನ್ ರಾಜ್ ಸಿಂಗ್, ಉಪಸ್ಥಿತಿ: ಡಾ.ಸಿ. ರಾಮಚಂದ್ರ, ಆಯೋಜನೆ ಹಾಗೂ ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಡಾ.ಎಂ. ಎಚ್. ಮರಿಗೌಡ ರಸ್ತೆ, ಸಂಜೆ 6

'ಸುದರ್ಶನ ಗರ್ವಭಂಗ' ಯಕ್ಷಗಾನ: ಚಿತ್ಪಾವನ ಮಹಿಳಾ ಯಕ್ಷಗಾನ ಮಂಡಳಿ ಕಲಾವಿದರು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6.15

ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 20ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಮನೆ–ಮನೆಗಳಲ್ಲಿ ಶಿವಪೂಜೆ, ವಚನ ಪ್ರವಚನ: ಸ್ಥಳ: ಶಶಿಕಲಾ ಮತ್ತು ಎಂ.ಎನ್. ಶೇಖರಪ್ಪ ನಿವಾಸ, ನಂ.43, ಸಾಯಿಬಾಬಾ ದೇವಸ್ಥಾನ ರಸ್ತೆ, ಸಂಜೀವಿನಿ ನಗರ, ನಾಗರಬಾವಿ, ಬೆಳಿಗ್ಗೆ, ಕವಿತಾ ಮತ್ತು ಮಲ್ಲಿಕಾರ್ಜುನ ಉಣ್ಣಿ, ನಂ.1058, ಬಿಇಎಲ್ ಲೇಔಟ್, 2ನೇ ಹಂತ, ಭರತ್ ನಗರ, ಮಾಗಡಿ ಮುಖ್ಯ ರಸ್ತೆ, ಸಂಜೆ

ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಪಂಚರಾತ್ರೋತ್ಸವ: ಸುಬುಧೇಂದ್ರತೀರ್ಥ ಸ್ವಾಮೀಜಿ, ದಾಸವಾಣಿ: ರಮ್ಯಾ ಸುಧೀರ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 7

ಸುಬುಧೇಂದ್ರತೀರ್ಥ ಸ್ವಾಮೀಜಿ

ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆ ಸಮಾರಂಭ: ಸಾಧಕರಿಗೆ 'ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ' ಹಾಗೂ 'ಸಾರಿಗೆ ರತ್ನ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಬಿ. ಶ್ರೀರಾಮುಲು, ಅಧ್ಯಕ್ಷತೆ: ಕೋಟ ಶ್ರೀನಿವಾಸ ಪೂಜಾರಿ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ.ಜಾತಿ, ಪ.ಪಂಗಡ ನೌಕರರ ಸಂಘ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4

ಹರಿದಾಸ ವಾಣಿ: ರಮ್ಯಾ ಸುಧೀರ್, ಪಿಟೀಲು: ವಾಸುಕಿ ಪರಿಮಳ, ಮೃದಂಗ: ಗಣೇಶ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 6.30



ಸುಭಾಷಿತ

ಆತ್ಮವಿಶ್ವಾಸ ಒಂದಿದ್ದರೆ ಎಂತಹ ಪರಿಸ್ಥಿತಿಯಲ್ಲೂ ತಲೆ ಎತ್ತಿ ನಿಲ್ಲಬಹುದು.

-ಚಾಣಕ್ಯ

ಕೈದಿಗಳ ಬಿಡುಗಡೆಗೆ 'ಸುಪ್ರೀಂ' ಸಲಹೆ ಸ್ವಾತಂತ್ರ್ಯ ದಿನಕ್ಕೆ ಸೂಕ್ತವಾದ ನಡೆ

ವಿಚಾರಣಾಧೀನ ಕೈದಿಗಳನ್ನು ಹಾಗೂ ಸಣ್ಣ ಅಪರಾಧಗಳಲ್ಲಿ ಭಾಗಿಯಾಗಿದ್ದಕ್ಕೆ ಶಿಕ್ಷೆಗೆ ಗುರಿಯಾದವರನ್ನು ಜೈಲಿನಿಂದ ಬಿಡುಗಡೆ ಮಾಡಲು ಯೋಜನೆಯೊಂದನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ ಈ ರೀತಿ ಮಾಡುವಂತೆ ಸುಪ್ರೀಂ ಕೋರ್ಟ್ ಹೇಳಿದೆ. ಇದು ಸ್ವಾಗತಾರ್ಹ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ ಹಲವು ಕಾರ್ಯಕ್ರಮಗಳನ್ನು ದೇಶದಲ್ಲಿ ಹಮ್ಮಿಕೊಳ್ಳಲಾಗಿದೆ, ಆಚರಿಸಲಾಗುತ್ತಿದೆ. ಹತ್ತು ವರ್ಷಗಳಿಂದ ಜೈಲಿನಲ್ಲಿ ಇರುವವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು, 14 ವರ್ಷಗಳಿಂದ ಜೈಲಿನಲ್ಲಿ ಇರುವವರಿಗೆ ಕ್ಷಮಾಪಣೆ ನೀಡುವ ಬಗ್ಗೆ ಪರಿಶೀಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಎಂ.ಎಂ. ಸುಂದರೇಶ್ ಅವರು ಇರುವ ನ್ಯಾಯಪೀಠವು ಹೇಳಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಆರ್ಥಿಕವಾಗಿ ದುರ್ಬಲರಾಗಿರುವ ಕೈದಿಗಳನ್ನು ಬಿಡುಗಡೆಗೆ ಪರಿಗಣಿಸಬೇಕು ಎಂದು ತಿಳಿಸಿದೆ. ಕೈದಿಗಳಿಗೆ ಕ್ಷಮಾದಾನ ನೀಡಲು ಏಕರೂಪದ ನೀತಿಯೊಂದನ್ನು ರೂಪಿಸಲು ಕೋರ್ಟ್ ಸಲಹೆ ಮಾಡಿದೆ. ಪ್ರಕರಣಗಳಲ್ಲಿ ಅಂತಿಮ ನಿರ್ಣಯ ನೀಡಲು ನ್ಯಾಯಾಂಗಕ್ಕೆ 10 ವರ್ಷಗಳವರೆಗೆ ಸಾಧ್ಯವಾಗದೇ ಇದ್ದರೆ, ಪ್ರಕರಣಗಳಿಗೆ ಸಂಬಂಧಿಸಿದಂತೆ ಜೈಲಿನಲ್ಲಿ ಇರುವವರು ಜಾಮೀನು ಪಡೆದು ಹೊರಬರಬೇಕು ಎಂಬುದು ಹೊಸ ನಿಲುವು ಅಲ್ಲ. ಆದರೆ ಈ ವಿಚಾರವಾಗಿ ನೀತಿಯೊಂದನ್ನು ರೂಪಿಸಲು ಗಂಭೀರ ಪ್ರಯತ್ನಗಳು ಆಗಿಲ್ಲ.



ತೀರಾ ಸಣ್ಣ ಪ್ರಮಾಣದ ಅಪರಾಧ ಎಸಗಿದವರನ್ನು, ವಿಚಾರಣಾಧೀನ ಕೈದಿಗಳನ್ನು ಬಿಡುಗಡೆ ಮಾಡುವುದು ಸ್ವಾತಂತ್ರ್ಯದ ದಿನಕ್ಕೆ ಸೂಕ್ತವಾದ ಮಾನವೀಯ ತೀರ್ಮಾನ ಆಗುತ್ತದೆ

ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುದರ ಸಂಭ್ರಮವನ್ನು ದೇಶವು ಸೋಮವಾರ ಆಚರಿಸಲಿದೆ. ಸ್ವಾತಂತ್ರ್ಯವನ್ನು ಕಳೆದುಕೊಂಡ ವ್ಯಕ್ತಿಗಳು ಅಂದು ಜೈಲಿನಿಂದ ಬಿಡುಗಡೆ ಆದರೆ ಅದು ಸೂಕ್ತ ಕ್ರಮ ಆಗುತ್ತದೆ. ವಿಚಾರಣಾಧೀನ ಕೈದಿಗಳ ಪೈಕಿ ಹಲವರು ತಮ್ಮ ಬದುಕಿನ ಬಹುಮುಖ್ಯ ಅವಧಿಯನ್ನು ಜೈಲಿನಲ್ಲಿ ವ್ಯರ್ಥವಾಗಿ ಕಳೆಯುತ್ತಾರೆ. ನ್ಯಾಯಾಲಯವೇ ಹೇಳಿರುವಂತೆ, ವಿಚಾರಣಾಧೀನ ಕೈದಿಯನ್ನು ಕೊನೆಯಲ್ಲಿ ನಿರಪರಾಧಿ ಎಂದು ಘೋಷಿಸಿದರೂ ಆತನಿಗೆ ಕಳೆದುಹೋದ ಜೀವನ ಮತ್ತೆ ಸಿಗುವುದಿಲ್ಲ. ವಿಚಾರಣಾಧೀನ ಕೈದಿಗಳ ಪೈಕಿ ಹಲವರಿಗೆ ಒಳ್ಳೆಯ ವಕೀಲರನ್ನು ನೇಮಕ ಮಾಡಿಕೊಳ್ಳುವ ಆರ್ಥಿಕ ಶಕ್ತಿ ಇರುವುದಿಲ್ಲ. ಇನ್ನು ಹಲವರಿಗೆ ಕಾನೂನು ಪ್ರಕ್ರಿಯೆ ಅರಿವು ಇರುವುದಿಲ್ಲ. ತೀರಾ ಸಣ್ಣ ಅಪರಾಧ ಎಸಗಿದ ಅಥವಾ ಯಾವುದೇ ಅಪರಾಧ ಎಸಗದ ಕೈದಿಗಳು ವಿಚಾರಣೆಯ ಹೆಸರಿನಲ್ಲಿ ಜೈಲಿನಲ್ಲಿ ಇದ್ದಿರಬಹುದು. ಜೈಲು ವಾಸದ ಅವಧಿಯಲ್ಲಿ ಅವರಲ್ಲಿ ಕೆಲವರು ಪಕ್ಕಾ ಕ್ರಿಮಿನಲ್‌ಗಳಾಗಿ ಬದಲಾಗಿಬಿಡಬಹುದು. ನ್ಯಾಯದಾನ ವ್ಯವಸ್ಥೆಗೆ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಆಗದೇ ಇದ್ದರೆ ಅದು ವಿಚಾರಣಾಧೀನ ಕೈದಿಯ ತಪ್ಪು ಆಗುವುದಿಲ್ಲ. ಹೀಗಾಗಿ, ವ್ಯವಸ್ಥೆಯಲ್ಲಿ ಇರುವ ಲೋಪಕ್ಕೆ ಇಂತಹ ಕೈದಿಗಳು ಬೆಲೆ ತೆರುವಂತಹ ಸ್ಥಿತಿ ನಿರ್ಮಾಣ ಆಗಬಾರದು. ನ್ಯಾಯದಾನ ತ್ವರಿತವಾಗಿ ಆಗಬೇಕಾದುದು ಅಗತ್ಯ.

ಕೈದಿಗಳನ್ನು ಸಮಾಜದ ಜೊತೆ ಬೆಸೆಯುವ ಉದ್ದೇಶವನ್ನು ಹೊಂದಿರುವ ಸುಧಾರಣಾವಾದಿ ನ್ಯಾಯವ್ಯವಸ್ಥೆಗೆ ಬದ್ಧತೆ ತೋರಬೇಕಾದ ಅಗತ್ಯವನ್ನು ಕೂಡ ಕೋರ್ಟ್ ಒತ್ತಿಹೇಳಿದೆ. ಜೈಲುಗಳು ವಿಚಾರಣಾಧೀನ ಕೈದಿಗಳಿಂದ ತುಂಬಿರುವ ಸ್ಥಿತಿಯನ್ನು ಹಾಗೂ ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಿದರೆ ಕೋರ್ಟ್ ನೀಡಿರುವ ಸಲಹೆ ಎಷ್ಟು ಮಹತ್ವದ್ದು ಎಂಬುದು ಗೊತ್ತಾಗುತ್ತದೆ. ವಿಚಾರಣಾಧೀನ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಈ ಹಿಂದೆಯೂ ಹಲವು ಬಾರಿ ಹೇಳಿದೆ. ಜಾಮೀನಿಗೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ಕೂಡ ಅದು ರೂಪಿಸಿದೆ. ವಿಚಾರಣೆ ಎದುರಿಸುತ್ತಿರುವ ಕೈದಿಗಳ ಬಿಡುಗಡೆಯನ್ನು ತ್ವರಿತಗೊಳಿಸಬೇಕಾದ ಅಗತ್ಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಮಾತನಾಡಿದ್ದಾರೆ. ದೇಶದ ಪಾಲಿಗೆ ಮಹತ್ವದ್ದಾಗಿರುವ ಕೆಲವು ಆಚರಣೆಗಳ ಸಂದರ್ಭದಲ್ಲಿ ಕೈದಿಗಳನ್ನು ಬಿಡುಗಡೆ ಮಾಡುವ ಪ್ರವೃತ್ತಿಯು ಹಲವು ದೇಶಗಳಲ್ಲಿ ಇದೆ. ಭಾರತ ಕೂಡ ಸೀಮಿತ ನೆಲೆಯಲ್ಲಿ ಈ ಕೆಲಸವನ್ನು ಮಾಡಿದೆ. ಈಗ ಸರ್ಕಾರಗಳು ಸುಪ್ರೀಂ ಕೋರ್ಟ್‌ನ ಸಲಹೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕು, ತೀರಾ ಸಣ್ಣ ಪ್ರಮಾಣದ ಅಪರಾಧ ಎಸಗಿದವರನ್ನು, ವಿಚಾರಣಾಧೀನ ಕೈದಿಗಳನ್ನು ಬಿಡುಗಡೆ ಮಾಡಬೇಕು. ಸ್ವಾತಂತ್ರ್ಯ ದಿನಕ್ಕೆ ಸೂಕ್ತವಾದ ಮಾನವೀಯ ತೀರ್ಮಾನ ಅದಾಗುತ್ತದೆ.

ದಿನದ ಟ್ವೀಟ್

ಭಯ ಹುಟ್ಟುಹಾಕಲಿದೆ

ಭ್ರಷ್ಟಾಚಾರ ನಿಗ್ರಹ ದಳವು ಸರ್ಕಾರಕ್ಕೆ ವರದಿ ಮಾಡಿಕೊಳ್ಳುತ್ತಿತ್ತು. ಇದೀಗ ಈ ದಳವನ್ನು ರದ್ದುಪಡಿಸಲು ಹೈಕೋರ್ಟ್ ಆದೇಶಿಸಿರುವುದರಿಂದ, ಇನ್ನು ಮುಂದೆ ಸ್ವತಂತ್ರ ಲೋಕಾಯುಕ್ತವು ಭ್ರಷ್ಟಾಚಾರ ಪ್ರಕರಣಗಳ ತನಿಖೆ ಮತ್ತು ವಿಚಾರಣೆ ನಡೆಸಲಿದೆ. ಅಧಿಕಾರವನ್ನು ಪ್ರತ್ಯೇಕಿಸುವುದು ಮತ್ತು ಲೋಕಾಯುಕ್ತ ಸಂಸ್ಥೆಗೆ ನೀಡುವ ಸ್ವಾತಂತ್ರ್ಯವು ಭ್ರಷ್ಟರಲ್ಲಿ ಭಯವನ್ನು ಹುಟ್ಟುಹಾಕುವುದು ಖಚಿತ.

ಡಿ.ರೂಪಾ, ಐಪಿಎಸ್ ಅಧಿಕಾರಿ

ಕಿಡಿನುಡಿ

ಬೆಂಗಳೂರಿನ ಜಯನಗರದಂತಹ ಮೇಲ್‌ಮಧ್ಯಮ ವರ್ಗದ, 'ಬುದ್ಧಿವಂತ' ಜನರೇ ಬದುಕುವ ಏರಿಯಾದಲ್ಲೂ ಒಂದೇ ಒಂದು ಕಡೆ ಗುಂಡಿಗಳಿಲ್ಲದ ರಸ್ತೆಯಿಲ್ಲ. ಓದಿರುವವರು, ಅಭಿಪ್ರಾಯ ರೂಪಿಸುವ ಶಕ್ತಿಯಿರುವವರು ವ್ಯವಸ್ಥೆಯಿಂದ ಪೂರ್ತಿ ಮುಖ ತಿರುಗಿಸಿಬಿಟ್ಟಿದ್ದಾರೆ. ಆಡಳಿತ ಈಗ ಯಾರಿಗೂ ಬೇಡ. ಎಲ್ಲ ವಾಟ್ಸ್‌ಆ್ಯಪ್ ಜಗತ್ತಿನ ಪ್ರಭಾವ ಅಂತ ಅನ್ನಿಸುತ್ತೆ.

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 12-8-1997

● ಪುತ್ತೂರಿನಲ್ಲಿ ಗಾಳಿಯಲ್ಲಿ ಗುಂಡು, ಕರ್ಫ್ಯೂ; ಸುಳ್ಯದಲ್ಲಿ ನಿಷೇಧಾಜ್ಞೆ

ಮಂಗಳೂರು, ಆಗಸ್ಟ್ 11– ಪುತ್ತೂರಿನ ವಿದ್ಯಾರ್ಥಿನಿಯ ಕೊಲೆ ಪ್ರಕರಣವು ಸುಳ್ಯ ಹಾಗೂ ಜಾಲಸೂರಿನಲ್ಲಿ ಪ್ರತಿಧ್ವನಿಸಿ ಹಿಂಸಾಚಾರ ಘಟನೆಗಳು ನಡೆದಿವೆ. ಪುತ್ತೂರಿನಲ್ಲೂ ಉದ್ರಿಕ್ತ ಜನರನ್ನು ನಿಯಂತ್ರಿಸಲು ಗಾಳಿಯಲ್ಲಿ ಗುಂಡು ಹಾರಿಸಲಾಗಿದೆ. ಪರಿಸ್ಥಿತಿ ಉದ್ವಿಗ್ನವಾಗಿದ್ದು ಇಂದು ಸಂಜೆ 6 ಗಂಟೆಯಿಂದ ಅನಿರ್ದಿಷ್ಟ ಕರ್ಫ್ಯೂ ವಿಧಿಸಲಾಗಿದೆ.

ಆರು ಮಂದಿ ಪೊಲೀಸರು, ಇಬ್ಬರು ನಾಗರಿಕರೂ ಸೇರಿದಂತೆ ಒಟ್ಟು ಎಂಟು ಮಂದಿಗೆ ಕಲ್ಲು ತೂರಾಟದಲ್ಲಿ ಗಾಯಗಳಾಗಿವೆ. ಪೊಲೀಸ್ ಜೀಪ್‌ವೊಂದು ಜಖಂ ಆಗಿದೆ. ಸ್ಥಳೀಯ ಹೋಟೆಲೊಂದು ಪ್ರತಿಭಟನಕಾರರ ಕೋಪಕ್ಕೆ ಗುರಿಯಾಗಿದೆ.

● ರಾಜ್ಯದಲ್ಲಿ ಹೆಲ್ಮೆಟ್ ಕಡ್ಡಾಯ

ಬೆಂಗಳೂರು, ಆಗಸ್ಟ್ 11– ದ್ವಿಚಕ್ರ ವಾಹನಗಳ ಚಾಲಕ ಮತ್ತು ಹಿಂಬದಿ ಸವಾರರು ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಿದ ಹೈಕೋರ್ಟ್, ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 2ರಿಂದ ಈ ನಿಯಮ ಕಟ್ಟುನಿಟ್ಟಾಗಿ ಪಾಲನೆ ಯಾಗುವಂತೆ ನೋಡಿಕೊಳ್ಳಬೇಕೆಂದು ಆದೇಶಿಸಿತು.

ಹೆಲ್ಮೆಟ್ ಧರಿಸುವುದನ್ನು ಸಡಿಲಗೊಳಿಸಿದ ಮೇಲೆ ಸಂಭವಿಸಿದ ಅಪಘಾತಗಳಲ್ಲಿ ಶೇ 90ರಷ್ಟು ತಲೆಗೆ ಏಟು ಬೀಳುತ್ತಿದ್ದು, ಅವರಲ್ಲಿ ಸಾಯುವವರ ಸಂಖ್ಯೆ ಅಷ್ಟೇ ಹೆಚ್ಚಿದೆ. ಹೀಗೆ ಸಾಯುವವರಲ್ಲಿ ಯುವಜನರೇ ಹೆಚ್ಚಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿತು.

50 ವರ್ಷಗಳ ಹಿಂದೆ

ಶನಿವಾರ, 12-8-1972

● ಅಕ್ರಮವಾಗಿ ಧಾನ್ಯ ಬಚ್ಚಿಟ್ಟಿರುವ ಜಮೀನ್ದಾರರು, ವರ್ತಕರ ಬಗ್ಗೆ ಕ್ರಮ

ಕಲ್ಬುರ್ಗಿ, ಆಗಸ್ಟ್ 11– ರಾಜ್ಯದ ಅಭಾವಪೀಡಿತ ಪ್ರದೇಶಗಳಲ್ಲಿ ಅಕ್ರಮವಾಗಿ ನೂರಾರು ಕ್ವಿಂಟಲ್‌ಗಳಷ್ಟು ಧಾನ್ಯವನ್ನು ಸಂಗ್ರಹಿಸಿಟ್ಟಿರುವ ಜಮೀನ್ದಾರರು ಹಾಗೂ ವರ್ತಕರ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳು ರಹಸ್ಯವಾಗಿ ಸಿದ್ಧ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಅಭಾವಪೀಡಿತ ಪ್ರದೇಶಗಳಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಲ್ಲಿ, ಆ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ರೂಪಿಸುತ್ತಿರುವ ಸಮಗ್ರ ಕಾರ್ಯಕ್ರಮದ ಅಂಗವಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

● ಪ್ರಧಾನಿ ಜತೆ ಅರಸು ಚರ್ಚೆ

ನವದೆಹಲಿ, ಆಗಸ್ಟ್ 11– ಮೈಸೂರು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಭೇಟಿ ಮಾಡಿ, ರಾಜ್ಯದ ವಿವಿಧ ಸಮಸ್ಯೆಗ ಕುರಿತು ವಿಚಾರ ವಿನಿಮಯ ನಡೆಸಿದರು.

ಕೈಗಾರಿಕಾಭಿವೃದ್ಧಿ ಸಚಿವ ಸುಬ್ರಹ್ಮಣ್ಯಂ, ಸಚಿವ ಟಿ.ಎ. ಪೈ ಮತ್ತು ಸಚಿವ ಕೆ.ಸಿ. ಪಂತ್ ಅವರುಗಳನ್ನು ಅರಸು ಭೇಟಿ ಮಾಡಿದರು.

ಪ್ರಧಾನಿ ಜತೆ ಚರ್ಚಿಸಲಾದ ಇನ್ನೊಂದು ಅಂಶವೆಂದರೆ, ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಬೇಕೆಂಬ ರಾಜ್ಯ ಸರ್ಕಾರದ ನಿರ್ಧಾರ. ಈ ಬಗೆಗೆ, ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕೃತವಾಗಿದ್ದು, ಅದಕ್ಕೆ ಸಂಸತ್ತಿನ ಮುದ್ರೆ ಬೀಳಬೇಕಾಗಿದೆ.

ಅಹಂಕಾರಕ್ಕೆ ಎದುರೇಟು ಕೊಡುವ ಪಟ್ಟುಗಳನ್ನು ಇಲ್ಲಿನ ಲೇಟೆಸ್ಟ್ ಮಾಡೆಲ್ ತೋರಿಸಿದೆ

ಬಿಹಾರದಲ್ಲಿ ಕ್ಷಿಪ್ರ ರಾಜಕೀಯ ಕ್ರಾಂತಿ!

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಬಿಹಾರದಲ್ಲಿ ಬರೀ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಮಿಂಚಿನ ವೇಗದ ರಾಜಕೀಯ ಕ್ರಾಂತಿಯೊಂದು ನಡೆದೇ ಹೋಯಿತು. ಮಹಾರಾಷ್ಟ್ರದ 'ಪಾರ್ಟಿ ಹೈಜಾಕ್' ಪಟಾಕಿ ಬಿಹಾರದಲ್ಲಿ ಕಿಡಿ ತಾಕುವ ಮೊದಲೇ ಠುಸ್ಸೆಂದಿತು!

ಎರಡು ತಿಂಗಳ ಕೆಳಗೆ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಗೃಹ ಸಚಿವರಿಗಾಗಲೀ ಗುಪ್ತಚರ ದಳಕ್ಕಾಗಲೀ ಸುಳಿವು ಕೊಡದೆ, ಏಕಾಏಕಿ ಏಕನಾಥ ಶಿಂದೆ ಬಣವನ್ನು ಹೈಜಾಕ್ ಮಾಡಿದ ದಿನವೇ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಹೊಸ ಸ್ಕ್ರಿಪ್ಟ್ ತಯಾರಾಗತೊಡಗಿದಂತಿದೆ!

ಹೆಚ್ಚು ಮಾತಾಡದೆ ಒಳಗೊಳಗೇ ಲೆಕ್ಕಾಚಾರ ಹಾಕಿ, ಒಂದೇ ದಿಕ್ಕಿನತ್ತ ಕಣ್ಣಿಟ್ಟು ಗುರಿ ಸಾಧಿಸುವ ಎಂಜಿನಿಯರ್ ನಿತೀಶ್‌ಗೆ ತಮ್ಮ ಪಕ್ಷಕ್ಕೂ ಒದಗಲಿರುವ ಗತಿ ಪರದೆಯ ಮೇಲೆ ಮೂಡಿತ್ತೇನೋ. ಕೊಂಚ ಮುಗ್ಧರಾದ ಉದ್ಧವ್ ಅವರಿಗೆ ಇರದಿದ್ದ ರಾಜಕೀಯ ಸಂಚುಗಳ ಜ್ಞಾನ ಐವತ್ತು ವರ್ಷ ರಾಜಕೀಯ ಮಾಡಿರುವ ನಿತೀಶ್ ಅವರಿಗಿತ್ತು. ತಕ್ಷಣ ಹುಷಾರಾದ ನಿತೀಶ್, ಒಂದು ಕಾಲಕ್ಕೆ ತಮ್ಮ ಬಲಗೈಯಾಗಿದ್ದ ಆರ್.ಸಿ.ಪಿ. ಸಿಂಗ್ ದೆಹಲಿ- ಪಟ್ನಾ ನಡುವೆ ಅನುಮಾನಾಸ್ಪದವಾಗಿ ಅಡ್ಡಾಡತೊಡಗಿದ ಮೇಲಂತೂ 'ಪಾರ್ಟಿ ಹೈಜಾಕ್'ನ ಕಮಟು ವಾಸನೆ ಹಿಡಿದೇಬಿಟ್ಟರು. ಬಿಹಾರದ ಶಾಸಕರಿಗೆ ಆಮಿಷಗಳನ್ನೊಡ್ಡಿದ ದೃಶ್ಯಗಳೂ ಹರಿದಾಡತೊಡಗಿದವು. 2020ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಕೃಪಾಪೋಷಿತ ಚಿರಾಗ್ ಪಾಸ್ವಾನ್ ಅವರ 'ವೋಟ್ ಕತ್ತರಿ' ಆಟದಿಂದಾಗಿ ಹತ್ತಾರು ಸೀಟುಗಳನ್ನು ಕಳೆದುಕೊಂಡಿದ್ದ ನಿತೀಶ್ ಕುದಿಯುತ್ತಲೇ ಇದ್ದರು. ಇವೆಲ್ಲ ಸೇರಿಕೊಂಡು ನಿತೀಶರ ಕ್ಷಿಪ್ರ 'ರಿವರ್ಸ್ ಆಪರೇಷನ್' ನಡೆಯಿತು; ಶಾಸಕರ ಹರಾಜು, ಮಾರಾಟ, ರೆಸಾರ್ಟ್ ಬಂಧನಗಳ ಪ್ರಹಸನ ತಪ್ಪಿತು! ನಿತೀಶ್ ಮತ್ತೆ ಮುಖ್ಯಮಂತ್ರಿಯಾದರು.

ನಿತೀಶ್ ಬಾಂಬ್ ಹಠಾತ್ತನೆ ಸ್ಫೋಟಗೊಂಡಂತಿದ್ದರೂ, ಕೆಲವು ತಿಂಗಳುಗಳಿಂದ ಬಿಹಾರದಲ್ಲಿ ಒಳಗೊಳಗೇ ರಾಜಕೀಯ ಬದಲಾವಣೆಗಳ ಸೂಚನೆಗಳು ಕಾಣುತ್ತಲೇ ಇದ್ದವು. ಕಳೆದ ರಂಜಾನ್ ಉಪವಾಸ ಕಾಲದ ಇಫ್ತಾರ್ ಕೂಟಕ್ಕೆ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಮುಖಂಡ ತೇಜಸ್ವಿ ಯಾದವ್ ಅವರ ಮನೆಗೆ ನಿತೀಶ್ ಹೋದಾಗಲೇ ಇಂಥದೊಂದು ಒಕ್ಕೂಟದ ಸಾಧ್ಯತೆಯನ್ನು ನಿತೀಶ್–ತೇಜಸ್ವಿ ಇಬ್ಬರೂ ಮನಗಂಡಂತಿದ್ದರು. ಅವತ್ತು 'ಯಾವುದಕ್ಕೂ ಇರಲಿ' ಎಂಬಂತೆ ತೇಜಸ್ವಿ ಅವರ ತಾಯಿ, ಮಾಜಿ ಮುಖ್ಯಮಂತ್ರಿ ರಾಬ್ಡಿದೇವಿಯವರ ಬಳಿ ನಿತೀಶ್, 'ಮಾಫ್ ಕೀಜಿಯೇಗಾ' ಎಂದು ಹೇಳಿದ್ದೂ ಆಯಿತು!

ಬೆಲೆಯೇರಿಕೆ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಆರ್‌ಜೆಡಿ ಈಚೆಗೆ ನಡೆಸಿದ ಪ್ರತಿಭಟನೆ ಯಶಸ್ವಿಯಾಗಲು ಬಿಹಾರದ ಪೊಲೀಸರೂ ನೆರವಾಗಿದ್ದರು. ಪ್ರಧಾನಮಂತ್ರಿ ಕರೆದ ಸಭೆಗಳಿಗೆ ನಿತೀಶ್ ಪದೇ ಪದೇ ಗೈರುಹಾಜರಾದರು. ಪಾಲುದಾರ ಪಕ್ಷ ಬಿಜೆಪಿ ವಿರೋಧಿಸುತ್ತಿದ್ದ ಜಾತಿ ಜನಗಣತಿ ಮಾಡಲು ತೇಜಸ್ವಿ ಹಾಗೂ ಇತರ ವಿರೋಧ ಪಕ್ಷಗಳ ಜೊತೆ ಚರ್ಚಿಸಿ ನಿತೀಶ್ ಮುಂದಿನ ಹೆಜ್ಜೆಯಿಟ್ಟರು. ರಂಜಾನ್‌ನ ಇಫ್ತಾರ್ ಕೂಟದಲ್ಲಿ ಶುರುವಾದ ಹೊಸ ಮೈತ್ರಿಯ ಫಲವಾಗಿ, ಮೊಹರಂನ ಹುತಾತ್ಮ ದಿನದಂದು ಹಳೇ ಮೈತ್ರಿಗೆ 'ಅಲ್ವಿದಾ' ಹೇಳುವ ಚಣ ಬಂದೇಬಿಟ್ಟಿತು!

ಕೆಲವು ತಿಂಗಳಿಂದ ಸಂಖ್ಯಾಬಲದ ಆಟದತ್ತಲೂ ನಿತೀಶ್-ತೇಜಸ್ವಿ ಕಣ್ಣಿಟ್ಟಿದ್ದರು. ಜೂನ್ ಕೊನೆಯ ವಾರದಲ್ಲಿ ಎಐಎಂಐಎಂ ಪಕ್ಷದ ನಾಲ್ವರು ಶಾಸಕರು ಆರ್‌ಜೆಡಿ ಸೇರಿದ್ದು ಕೂಡ ನಿತೀಶ್-ತೇಜಸ್ವಿಯವರ ಮುಂದಿನ ಯೋಜನೆಗಳ ಭಾಗವಾಗಿತ್ತು. ನಾಲ್ವರು ಶಾಸಕರ ಸೇರ್ಪಡೆಯಿಂದ ಬಿಹಾರ ವಿಧಾನಸಭೆಯಲ್ಲಿ ಆರ್‌ಜೆಡಿ ಅತಿ ಹೆಚ್ಚು ಸಂಖ್ಯಾಬಲದ ಪಕ್ಷವಾಯಿತು. ನಿತೀಶ್ ಎನ್‌ಡಿಎ ಬಿಟ್ಟು ಬಂದರೆ, ರಾಜ್ಯಪಾಲರು ಸರ್ಕಾರ ರಚನೆ ಮಾಡಲು ಆರ್‌ಜೆಡಿಯನ್ನು ಆಹ್ವಾನಿಸುವುದು ಅನಿವಾರ್ಯವಾಗಲೇಬೇಕೆಂಬ ಲೆಕ್ಕಾಚಾರವೂ ಈ ನಡೆಯಲ್ಲಿತ್ತು.

ಕಳೆದ ಆರು ತಿಂಗಳುಗಳಿಂದ ನಿತೀಶ್ ಬಿಜೆಪಿಯನ್ನೂ, ಬಿಜೆಪಿ ರಾಜ್ಯ ಘಟಕವು ನಿತೀಶರನ್ನೂ ಮೂಲೆಗೆ ಒತ್ತರಿಸುವ ಆಟ ನಡೆಯುತ್ತಲೇ ಇತ್ತು. ಬಿಜೆಪಿಯಿಂದ ಬಂದಿದ್ದ ಸ್ಪೀಕರ್ ನೀಡಿದ್ದ ರೂಲಿಂಗ್‌ಗಳ ವಿರುದ್ಧವೇ ನಿತೀಶ್ ಗುಡುಗುತ್ತಿದ್ದರು. ವಿಧಾನಸಭಾಧ್ಯಕ್ಷರನ್ನೇ 'ಸಂವಿಧಾನ ವಿರೋಧಿ' ಎಂದು ಕರೆದು, ವಾಕೌಟ್ ಮಾಡಿ ಬಂಡಾಯದ ಸ್ಪಷ್ಟ ಸಂದೇಶ ಕೊಟ್ಟಿದ್ದರು. ಇದಕ್ಕೆ ಉತ್ತರವೆಂಬಂತೆ, ಬಿಹಾರ ವಿಧಾನಸಭೆಯ ಶತಮಾನೋತ್ಸವದ ಸಭೆಗೆ ನಿತೀಶ್ ಅವರಿಗೆ ಆಹ್ವಾನವನ್ನೇ ಕೊಡದ ಸ್ಪೀಕರ್, ಯುದ್ಧ ಮುಂದುವರಿಸಿದರು. ಇವೆಲ್ಲ ದಿಲ್ಲಿ ಚಿತಾವಣೆಯೆಂಬುದು ನಿತೀಶ್ ಅವರಿಗೂ ಗೊತ್ತಿತ್ತು. ಇದೇ 8ರಂದು ಕೋವಿಡ್ ಪಾಸಿಟಿವ್ ಆಗಿದ್ದ ಸ್ಪೀಕರ್, ಮುಂದಿನ ಇಪ್ಪತ್ನಾಲ್ಕು ಗಂಟೆಯಲ್ಲಾಗಲೇ ನೆಗೆಟಿವ್ ರಿಪೋರ್ಟ್ ಝಳಪಿಸುತ್ತಾ ವಿಧಾನಸಭಾ ಕಚೇರಿಗೆ ಧಾವಿಸಿದಾಗ, ಒಳಕಸರತ್ತೇನಾದರೂ ನಡೆಯಬಹುದೆಂಬ ಅನುಮಾನವೂ ಹಬ್ಬಿತ್ತು.

ಈ ನಡುವೆ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ 'ಇನ್ನು ಪ್ರಾದೇಶಿಕ ಪಕ್ಷಗಳು ದೂಳೀಪಟವಾಗುತ್ತವೆ' ಎಂದಿದ್ದು ಕೂಡ ನಿತೀಶ್ ಬಂಡಾಯಕ್ಕೆ ಮತ್ತೊಂದು ನೆವವಾಯಿತು! ಇವೆಲ್ಲ ಸೇರಿಕೊಂಡು ನಿತೀಶ್-ತೇಜಸ್ವಿ ಹೊಸಮೈತ್ರಿಯ ಚಿತ್ರಕತೆ ಫೈನಲ್ಲಾಯಿತು. ದೆಹಲಿಯ ಮಗಳ ಮನೆಯಲ್ಲಿ ಹಾಸಿಗೆಯ ಮೇಲೆ ಮಲಗಿಯೇ ಈ ಚಿತ್ರಕತೆಗೆ ಐಡಿಯಾಗಳನ್ನು ರವಾನಿಸುತ್ತಿದ್ದ ಲಾಲೂ ಪ್ರಸಾದ್ ಹಾಗೂ ಸದ್ದಿಲ್ಲದೆ ಸಮ್ಮತಿಸಿದ ಸೋನಿಯಾ ಗಾಂಧಿ ಅವರ ಅಭಯಹಸ್ತ ಸಿಕ್ಕ ತಕ್ಷಣ ನಿತೀಶ್ ಮುನ್ನುಗ್ಗಿಯೇ ಬಿಟ್ಟರು. ಶತ್ರು ಯುದ್ಧಕ್ಕೆ ಸಿದ್ಧವಾಗುವ ಮೊದಲೇ ಧಡ್ಡನೆ ಕಾರ್ಪೆಟ್ ಬಾಂಬಿಂಗ್ ಮಾಡುವ ತಮ್ಮ ಹಳೆಯ ತಂತ್ರ ಪ್ರಯೋಗಿಸಿ ನಿತೀಶ್ ಈ ಸಲವೂ ಗೆದ್ದರು. ಇದು ಬಿಹಾರದ ಮುಖ್ಯಮಂತ್ರಿಯಾಗಿ ಅವರ ಎಂಟನೇ ಪ್ರಮಾಣವಚನ! ಮೂವತ್ತೆರಡರ ಹರೆಯದ ತೇಜಸ್ವಿಗೆ ಉಪಮುಖ್ಯಮಂತ್ರಿಯಾಗಿ ಎರಡನೇ ಪ್ರಮಾಣವಚನ!

ಯಾರ ಜೊತೆಯೂ ಹೆಚ್ಚು ಕಾಲ ಬಾಳದ ನಿತೀಶ್ ಅವರ ಹೊಸ ಸಂಸಾರ ಇನ್ನೆಷ್ಟು ದಿನ ನಡೆದೀತು ಎಂದು ಗೊಣಗುವವರಿದ್ದಾರೆ. ಅದೇನೇ ಇದ್ದರೂ, 'ಚಾಚಾ-ಭತೀಜಾ' ಸಮಾಜವಾದಿಗಳಾದ ನಿತೀಶ್- ತೇಜಸ್ವಿ ತಮ್ಮ ಹಳೆಯ ಅನುಮಾನ, ಠೇಂಕಾರ ಬಿಟ್ಟು ಕೆಲಸ ಮಾಡುತ್ತಾರೆಂದು ನಿರೀಕ್ಷಿಸೋಣ. ರಾಜ್ಯಪಾಲರನ್ನು ಭೇಟಿ ಮಾಡಿ ಬಂದ ಸಂಜೆ ತೇಜಸ್ವಿ ಆಡಿದ ಮಾತುಗಳಲ್ಲಿದ್ದ ಸಿದ್ಧತೆ, ಪ್ರಬುದ್ಧತೆ ಅವರು ಮಾಗಿದ ನಾಯಕನಾಗಿ ಬೆಳೆಯುವ ಸೂಚನೆಗಳನ್ನಂತೂ ನೀಡುತ್ತವೆ. ಏಳು ಪಕ್ಷಗಳ ಈ ಮೈತ್ರಿಯಲ್ಲಿ ತಳಮಟ್ಟದಿಂದ ಜನರೊಡನೆ ಕೆಲಸ ಮಾಡಿ, ನಾಗರಿಕ ಸಮಾಜದ ಹೋರಾಟಗಳನ್ನು ಮುನ್ನಡೆಸಿರುವ ಸಿಪಿಐಎಂಎಲ್(ಎಲ್)ನ 12, ಸಿಪಿಐನ 2, ಸಿಪಿಎಂನ 2 ಶಾಸಕರಿದ್ದಾರೆ. ಆದರೆ ಸಿಪಿಐಎಂಎಲ್(ಎಲ್) 'ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಸೂಚಿಸಿ, ಸಾಮಾನ್ಯ ಕಾರ್ಯಸೂಚಿಯ ಜಾರಿಗೆ ಪ್ರಯತ್ನಿಸುತ್ತೇನೆ' ಎನ್ನುತ್ತಿದೆ.

ಈ ಮಹಾಮೈತ್ರಿಯು ಮರ್ಯಾದೆಯಿಂದ ಆಡಳಿತ ನಡೆಸಿ 2024ರ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕಾದ ಸವಾಲೂ ಇದೆ. 71ರ ಹರೆಯದ ನಿತೀಶ್ ನಿಜಕ್ಕೂ ಮಾಗಿದ್ದರೆ, ಮುಂದಿನ ವರ್ಷ ತೇಜಸ್ವಿ ಅವರಿಗೆ ಮುಖ್ಯಮಂತ್ರಿಗಿರಿ ಬಿಟ್ಟು ರಾಷ್ಟ್ರ ರಾಜಕಾರಣಕ್ಕಿಳಿಯುವ ಸಾಧ್ಯತೆಯೂ ಇದೆ. ಭಾರತದ ಹಲವು ವಿರೋಧ ಪಕ್ಷಗಳಿಗೆ ಒಪ್ಪಿಗೆಯಾಗಬಲ್ಲ ನಿತೀಶ್, ವಿರೋಧ ಪಕ್ಷಗಳ ಒಕ್ಕೂಟವನ್ನು ಗಟ್ಟಿಯಾಗಿ ಕಟ್ಟಲು ಪ್ರಾಮಾಣಿಕವಾಗಿ ನಿಂತರೆ ರಾಷ್ಟ್ರ ರಾಜಕಾರಣದ ದಿಕ್ಕು ಬದಲಾದೀತು.

ಯಾವ ಪಕ್ಷವನ್ನಾದರೂ ಕೊಳ್ಳಬಹುದು ಇಲ್ಲಾ ಕೊಲ್ಲಬಹುದು ಎಂಬ ಅಹಂಕಾರಕ್ಕೆ ಎದುರೇಟು ಕೊಡುವ ಪಟ್ಟುಗಳನ್ನಂತೂ ಬಿಹಾರದ ಲೇಟೆಸ್ಟ್ ಮಾಡೆಲ್ ತೋರಿಸಿದೆ! ಮೊನ್ನೆ ಆಗಸ್ಟ್ 9ರಂದು, '1942ರ ಆಗಸ್ಟ್ 8-9ರ ನಡುವೆ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಗಾಂಧಿ ಘೋಷಣೆ ದೇಶದುದ್ದಕ್ಕೂ ಮೊಳಗಿ ಹೊಸ ದಿಕ್ಕು ಮೂಡಿತ್ತು' ಎಂದ ತೇಜಸ್ವಿ, 'ಬಿಹಾರದ ಮಹಾಮೈತ್ರಿ ದೇಶದ ವಿರೋಧ ಪಕ್ಷಗಳಿಗೆ ಹೊಸ ದಿಕ್ಕು ಕೊಡಲಿದೆ' ಎಂದು ಖಡಕ್ಕಾಗೇ ಹೇಳಿದರು. ಭಾರತದ ಪ್ರಜಾಪ್ರಭುತ್ವದಲ್ಲಿ ಮೆಜಾರಿಟಿಯ ಬಲ, ಹಣಬಲದ ಅಬ್ಬರ ಎದ್ದಾಗಲೆಲ್ಲ ಅವನ್ನು ಮಟ್ಟ ಹಾಕುವ ಮಾದರಿಗಳೂ ಹುಟ್ಟುತ್ತಿರುತ್ತವೆ ಎಂಬುದನ್ನೂ ಇದು ತೋರಿಸುತ್ತದೆ.

ಅದೇ ವೇಳೆಗೆ, ಕರ್ನಾಟಕದಲ್ಲಿ ಮತ್ತೆ ಗುಲ್ಲೆದ್ದಿರುವ 'ಮುಖ್ಯಮಂತ್ರಿ ಸ್ಥಾನಪಲ್ಲಟ'ದ 'ಸಾಂಕ್ರಾಮಿಕ ರೋಗ'ಕ್ಕೂ ಬ್ರೇಕ್ ಬೀಳಬಹುದು! ಬಿಹಾರದಲ್ಲಿ ಕುರ್ಚಿ ಕಳೆದುಹೋದ ಪ್ರಯುಕ್ತ ಕರ್ನಾಟಕದಲ್ಲಿ 'ಮುಖ್ಯಮಂತ್ರಿ ಮ್ಯೂಸಿಕಲ್ ಚೇರ್ ಟೂರ್ನಮೆಂಟ್' ಕೆಲ ಕಾಲ ಮುಂದೂಡಲ್ಪಡಬಹುದು!

ಚುರುಮುರಿ

ಶಂಕರಾಂತರ!

● ಚಂದ್ರಕಾಂತ ವಡ್ಡು

'ಐ ರಿಮೆಂಬರ್ ಗೋಯಿಂಗ್ ವಿತ್ ಕಾಂಗ್ರೆಸ್ ಲೀಡರಶಿಪ್... ವಿತ್ ಸಿದ್ದರಾಮಯ್ಯಾಜೀ, ಡಿ.ಕೆ.ಶಿವಕುಮಾರಜೀ ಟು ದ ಇಂದಿರಾ ಕ್ಯಾಂಟೀನ್...' ಎಂದು 'ಸಿದ್ದರಾಮೋತ್ಸವ'ದಲ್ಲಿ ಐದನೇ ಪೀಳಿಗೆಯ ಗಾಂಧಿ ಹೇಳಿದ್ದನ್ನು ಕೇಳಿಸಿಕೊಂಡ ಮೊದಲ ಪೀಳಿಗೆಯ ಇಂಗ್ಲಿಷ್ ಮೀಡಿಯಮ್ ಮಗ, 'ಅಲ್ಲಿಗೆ ಹೋಗಿ ರುಚಿ ನೋಡೋಣ' ಅಂತ ಗಂಟುಬಿದ್ದ.

'ಅಲ್ಲೇನೋ ಅಂಥ ರುಚಿ? ರೇಟು ಸಸ್ತಾ ಇರುತ್ತದಷ್ಟೇ...' ತಿಂಗಳೇಶನ ನಿರಾಸಕ್ತಿ.

ಎಂದಿನಂತೆ 'ಅಯ್ಯೋ ನಿನಗೆ ಗೊತ್ತಾಗಲ್ಲ...' ಎಂಬ ಡಿಫಾಲ್ಟ್ ಸಂಬೋಧನೆ ಮೂಲಕ ಮಗನ ಮಾತು. 'ವಿ ಹ್ಯಾಡ್ ಡಿಲೀಷಿಯಸ್ ಫುಡ್ ಧೇರ್' ಅಂತ ಅವರೇ ಹೇಳಿದ್ದಾರೆ. ಅಷ್ಟೊಂದು ರುಚಿಕಟ್ಟು...' ಮಗನ ಬಾಯಲ್ಲಿ ಜೊಲ್ಲು.

ಇಂಗ್ಲಿಷ್ ತಲೆಗೆ ಹತ್ತಲಿಲ್ಲ ಅಂತ ವಿಪರೀತ ಕನ್ನಡಾಭಿಮಾನ ಬೆಳೆಸಿಕೊಂಡಿದ್ದ ತಿಂಗಳೇಶ, 'ಅವರ ಭಾಷಣದ ಕನ್ನಡ ಅನುವಾದ ಕಿವಿಯಾರೆ ಕೇಳೇನಿ, 'ನಾವು ಅಧಿಕಾರದಲ್ಲಿ ಇದ್ದಾಗ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಮುಖಾಂತರ ಪೌಷ್ಟಿಕ ಆಹಾರ ಕೊಡ್ತಾ ಇದ್ವಿ, ಕರ್ನಾಟಕದಲ್ಲಿ ಇಂಥ ಕಾರ್ಯಕ್ರಮಗಳನ್ನ ಜನ್ರಿಗೆ ತಲುಪಿಸೋದಕ್ಕೆ ಪ್ರಯತ್ನಶೀಲರಾಗಿದ್ದೇವೆ' ಅಂತ ಸಮಾಜವಾದಿ ಶಂಕರ್ ಕಾಕಾ ತಮ್ಮ ಬಾಯಾರೆ ಹೇಳ್ಯಾರ. ನೀನು ನೋಡಿದರೆ ಇಂದಿರಾ ಕ್ಯಾಂಟೀನ್ ಎಳೆದು ತರುತ್ತೀಯ...'

ಅಪ್ಪ, ಮಗನ ಸಮ್-ಭಾಷಣಾ ಶೈಲಿ ಮುಂದಿನ ಮುಖ್ಯಮಂತ್ರಿ ಕುರಿತ ಹೇಳಿಕೆಯಂತೆ ಗೊಂದಲ ಮೂಡಿಸಿದ್ದನ್ನು ತಕ್ಷಣ ಗ್ರಹಿಸಿದ ತಾಯಿ ಬಾಯಿ ಹಾಕಿದಳು, 'ಇದು ಭಾಷಾ-ಅಂತರ ಅಲ್ಲ; ಬೇಕಿದ್ದರೆ ಶಂಕರಾಂತರ ಅನ್ನಿ. ಹೈಕಮಾಂಡ್ ಭಾಷೆಯ ಅನುವಾದ ಕೊಂಚ ಕಷ್ಟ. ಹೈಕಮಾಂಡ್ ಸಾಮೂಹಿಕ ನಾಯಕತ್ವ ಅಂದ್ರೆ ಸ್ಥಳೀಯ ನಾಯಕರಿಗೆ ತನ್ನದೇ ನಾಯಕತ್ವ ಎಂದು ಕೇಳಿಸುತ್ತೆ'.

'ಅದೇ ರೀತಿ ನೆರೆ ಪರಿಹಾರ, ಜಿಎಸ್‌ಟಿ ಪಾಲು ಇತ್ಯಾದಿ ರಾಜ್ಯದ ಇಂಜಿನ್ ಮಂಡಿಸುವ ಸಾವಿರಾರು ಕೋಟಿ ಬೇಡಿಕೆಯನ್ನು ಒಕ್ಕೂಟದ ಇಂಜಿನ್ ಕೇವಲ ನೂರಾರು ಕೋಟಿಯೆಂದು ಭಾಷಾಂತರಿಸಿಕೊಳ್ಳುತ್ತದೆ...' ತಿಂಗಳೇಶ ಸೇರಿಸಿದ!

ಸಂಗತ

ಯುವ ಮನಸ್ಸಿಗೆ ಜೊತೆಯಾಗೋಣ

ಯುವಜನ ಸೂಕ್ತ ಜೀವನಶೈಲಿ ರೂಢಿಸಿಕೊಂಡು, ಆರೋಗ್ಯ ಕಾಪಾಡಿಕೊಂಡು ಮುನ್ನಡೆಯಲು ಸಮಾಜದ ಬೆಂಬಲ ಅವಶ್ಯ

● ಡಾ. ಕೆ.ಆರ್.ಶ್ರೀಧರ್

ಆರ್ಥಿಕವಾಗಿ ಮತ್ತು ಮನೋಸಾಮಾಜಿಕವಾಗಿ ಅಭಿವೃದ್ಧಿಯಾಗುತ್ತಿರುವ ನಮ್ಮ ದೇಶದಲ್ಲಿ ಯುವಜನರ ಪಾತ್ರ ಬಹು ದೊಡ್ಡದು. ಯುವಜನಾಂಗ ಎಂದರೆ 15ರಿಂದ 24 ವರ್ಷದವರೆಗಿನವರು. ಇವರಲ್ಲಿ ಆರೋಗ್ಯ, ಮನೋಸಾಮಾಜಿಕ, ಶೈಕ್ಷಣಿಕ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳು ಕಂಡುಬರುತ್ತವೆ.

ಕೆಲವು ಯುವಕರು ಆರೋಗ್ಯದ ಸಮಸ್ಯೆಯಿಂದ ಬಳಲುತ್ತಾರೆ. ಒತ್ತಡ, ಮಾನಸಿಕ ಕಾಯಿಲೆಗಳು, ಮದ್ಯ, ಮಾದಕ ವಸ್ತುಗಳ ಸೇವನೆ, ಧೂಮಪಾನ, ಅಸಹಜ ಲೈಂಗಿಕ ವರ್ತನೆ, ಅಪಘಾತ, ಆತ್ಮಹತ್ಯೆ ಹೀಗೆ ಹಲವು ಅಂಶಗಳು ಯುವಕರನ್ನು ಕಾಡುತ್ತವೆ. ಇಂತಹ ಸಮಸ್ಯೆಗಳಿಂದ ಯುವಕರಲ್ಲಿ ಅಂಗವೈಕಲ್ಯ ಉಂಟಾಗಬಹುದು ಅಥವಾ ಜೀವಹಾನಿಯೂ ಆಗಬಹುದು. ಇದು ಪರೋಕ್ಷವಾಗಿ ಸಮಾಜದ ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದರಿಂದ ಸಮಾಜದ ಆರ್ಥಿಕತೆಗೆ ಹಿನ್ನಡೆ ಆಗಬಹುದು.

ಯುವಜನ ಸರಿಯಾದ ಜೀವನಶೈಲಿಯನ್ನು ರೂಢಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಂಡು ಯಶಸ್ವಿಯಾಗಿ ಮುನ್ನಡೆಯಲು ಸಮಾಜದ ಬೆಂಬಲ ಅವಶ್ಯ. ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಯುವ ದಿನಾಚರಣೆಯ (ಆ. 12) ಮುಖ್ಯ ಉದ್ದೇಶ. ಈ ವರ್ಷ ವಿಶ್ವ ಆರೋಗ್ಯ ಸಂಸ್ಥೆಯು 'ಅಂತರ್‌ಜನಾಂಗೀಯ ಒಗ್ಗಟ್ಟನ್ನು ಕಾಪಾಡೋಣ, ಎಲ್ಲ ವಯಸ್ಸಿನವರನ್ನೂ ಒಳಗೊಂಡ ವಿಶ್ವವನ್ನು ನಿರ್ಮಿಸೋಣ' ಎಂಬ ಘೋಷಣೆಯನ್ನು ಹೊರಡಿಸಿದೆ.

ಯುವಕರಿಗೆ ಈ ಅವಧಿಯು ಸಂಕ್ರಮಣದ ಕಾಲ ಎನ್ನಬಹುದು. ಈ ಅವಧಿಯಲ್ಲಿ ದೈಹಿಕ, ಮಾನಸಿಕ, ಲೈಂಗಿಕ, ಭಾವನಾತ್ಮಕ ಮತ್ತು ಸಾಮಾಜಿಕ ಬದಲಾವಣೆಗಳಾಗುತ್ತವೆ. ಇತರರೊಂದಿಗಿನ ಒಡನಾಟ ಮತ್ತು ಸಂಬಂಧಗಳಲ್ಲಿ ಸಹ ಬದಲಾವಣೆಗಳನ್ನು ಕಾಣಬಹುದು. ಇಂತಹ ಬೆಳವಣಿಗೆಗಳು ಯುವಕರು ಅಥವಾ ಹರೆಯದವರ ಮನಸ್ಸನ್ನು ಇನ್ನಿಲ್ಲದಂತೆ ಒತ್ತಡಕ್ಕೀಡು ಮಾಡುತ್ತವೆ. ಅದರಿಂದ ಹರೆಯದವರು-ಯುವಕರ ಮನಸ್ಸು ಅಲ್ಲೋಲಕಲ್ಲೋಲಗೊಂಡು ಅವರ ಮುನ್ನಡೆಗೆ ತಡೆಯಾಗಬಹುದು.

ಮಾನಸಿಕವಾಗಿ ವಿಕಾಸಗೊಳ್ಳುವ ಯುವ ಮನಸ್ಸಿನಲ್ಲಿ, ತಾನು ಯಾರಂತಾಗಬೇಕು, ಹೇಗೆ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು, ತನ್ನ ಭವಿಷ್ಯವೇನು, ತನ್ನನ್ನು ಗುರುತಿಸುತ್ತಾರೋ ಇಲ್ಲವೋ ಎಂಬಂಥ ಹಲವಾರು ಪ್ರಶ್ನೆಗಳು ಪುಟಿದೇಳುತ್ತವೆ. ಪೋಷಕರ ಸಂಬಂಧದ ಜೊತೆಗೆ ಸಾಮಾಜಿಕವಾಗಿಯೂ ಹೊರಗಿನವರ ಜೊತೆ ಬೆರೆತು ಅವರ ಸಂಬಂಧಗಳನ್ನು ಕಾಪಾಡಿಕೊಳ್ಳುವುದು ಕಷ್ಟದ ಕೆಲಸ. ಗೆಳೆಯರು ಮತ್ತು ಉಪಾಧ್ಯಾಯರ ಜೊತೆಗಿನ ಸಂಬಂಧಗಳನ್ನು ಕಾಪಾಡಿಕೊಳ್ಳಬೇಕು. ಇವೆಲ್ಲದರ ನಡುವೆ 'ತನ್ನತನ'ವನ್ನು ಕಂಡುಕೊಳ್ಳಬೇಕು. ಭಾವನಾತ್ಮಕ ಸಂಬಂಧದಲ್ಲಿ ಇತರರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುನ್ನಡೆಯಬೇಕು. ಅನ್ಯರ ನಿರೀಕ್ಷೆ, ಗೆಳೆಯರ ಟೀಕೆ ಟಿಪ್ಪಣಿಗಳು ಮತ್ತು ಶಿಕ್ಷಣದಲ್ಲಿ ಸ್ಪರ್ಧೆ ಎದುರಿಸಬೇಕು. ಇವೆಲ್ಲವೂ ಯುವಜನರ ಮನಸ್ಸನ್ನು ಅಲ್ಲೋಲ-ಕಲ್ಲೋಲಗೊಳಿಸುವುದು ಸಹಜ. ಇದರೊಂದಿಗೆ ಮಾಧ್ಯಮದಲ್ಲಿ ಬಿಂಬಿತವಾಗುವ ವೈಭವೀಕೃತ ದೃಶ್ಯಗಳು, ಸಾಮಾಜಿಕ ಜಾಲತಾಣಗಳಲ್ಲಿ ಕಾಣಸಿಗುವ ಆಕರ್ಷಕ ಮತ್ತು ಅವಾಸ್ತವಿಕ ಸಂದೇಶಗಳು ಹಾಗೂ ದೃಶ್ಯಗಳು ಹರೆಯದ ಮನಸ್ಸಿನಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬ ಘರ್ಷಣೆಗೆ ಕಾರಣವಾಗುತ್ತವೆ.

ಯುವಕರ ಮನಸ್ಸನ್ನು ಒತ್ತಡಕ್ಕೆ ಈಡುಮಾಡುವ ಮತ್ತೊಂದು ಅಂಶ 'ತಲೆಮಾರಿನ ಅಂತರ'. ಹಿರಿಯರು ತಾವು ಹೇಳಿದ್ದನ್ನು ಮಾಡಲೇಬೇಕು ಎಂದು ಕಿರಿಯರನ್ನು ಒತ್ತಾಯಿಸಬಹುದು, ಯುವಜನರ ಮೇಲೆ ತಮ್ಮ ಅನಿಸಿಕೆಗಳನ್ನು ಹೇರಬಹುದು. ಅದರಿಂದ ಯುವಜನರ ಮನಸ್ಸು ಗಾಸಿಗೊಂಡು ಹತಾಶೆಗೊಳ್ಳಬಹುದು. ಇದಕ್ಕೆ 'ತಲೆಮಾರಿನ ಅಂತರ' (ಜನರೇಷನ್ ಗ್ಯಾಪ್) ಎಂದು ಕರೆಯುತ್ತಾರೆ.



ಇಂತಹ ಅಂಶಗಳಿಂದ, ಇನ್ನೂ ಪ್ರಬುದ್ಧತೆ ಸಾಧಿಸದ ಯುವ ಮನಸ್ಸು ನಿರಾಶೆ, ಹತಾಶೆಗಳಿಂದ ಬಳಲಿ ಭಯ, ಆತಂಕ ಮತ್ತು ಖಿನ್ನತೆಗೆ ಒಳಗಾಗಬಹುದು. ಅಂತಹ ಸಂದರ್ಭದಲ್ಲಿ ಅವರಲ್ಲಿ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುತ್ತವೆ. ಅವುಗಳಲ್ಲಿ ಮುಖ್ಯವಾದದ್ದು ಖಿನ್ನತೆ, ಉಳಿದಂತೆ ಒತ್ತಡದಿಂದ ಬಳಲಿ ಶಿಕ್ಷಣದಲ್ಲಿ ಹಿನ್ನಡೆಯಾಗಬಹುದು. ಇತ್ತೀಚಿನ ವರ್ಷಗಳಲ್ಲಿ ಯುವಕರಲ್ಲಿ ಆತ್ಮಹತ್ಯಾ ಪ್ರವೃತ್ತಿ ಹೆಚ್ಚಿ, ಆತ್ಮಹತ್ಯೆ ಎಂಬುದು 'ಸಾಮಾಜಿಕ ಪಿಡುಗಾಗಿ' ಪರಿಣಮಿಸಿದೆ. ಪ್ರಬುದ್ಧತೆ ಇಲ್ಲದ ಯುವ ಮನಸ್ಸಿನಲ್ಲಿ ಆತಂಕ ಹೆಚ್ಚಾಗಿ, ಏನು ಮಾಡಬೇಕೆಂದು ದಾರಿ ಕಾಣದೆ, ಕ್ಷಣಿಕ ಮುದ ನೀಡುವ ವಸ್ತುಗಳಿಗೆ, ಅಂದರೆ ಮದ್ಯ-ಮಾದಕ ವಸ್ತುಗಳಿಗೆ ಮೊರೆ ಹೋಗಬಹುದು.

ಯುವಕರು ಔದ್ಯೋಗಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು, ಸಮಸ್ಯೆಗಳಿಂದ ಯಶಸ್ವಿಯಾಗಿ ಹೊರಬಂದು ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಲು ಸಮಾಜದ ಸಕಾರಾತ್ಮಕ ಮಾರ್ಗದರ್ಶನ ಅನಿವಾರ್ಯ. ಅದೇ ರೀತಿ 'ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು' ಎನ್ನುವ ಕವಿವಾಣಿಯಂತೆ ಹಿರಿಯರು ಕಿರಿಯರನ್ನು ಅರ್ಥ ಮಾಡಿಕೊಂಡು ಅವರ ಅನಿಸಿಕೆಗಳಿಗೆ ಸಹನೆಯಿಂದ ಸ್ಪಂದಿಸಬೇಕು. ಕಿರಿಯರು ಹಿರಿಯರ ಸಲಹೆಯನ್ನು ಅವರ ಅನುಭವದ ಹಿನ್ನೆಲೆಯಲ್ಲಿ ತುಲನೆ ಮಾಡಿ ಸ್ವೀಕರಿಸಬೇಕು. ಆಗಮಾತ್ರ ಯುವಜನರ ಜೀವನ ಒಂದೇ ಅಲ್ಲ ಸರ್ವರ ಜೀವನವೂ ಹಸನಾಗುತ್ತದೆ ಎಂಬುದು ಈ ವರ್ಷದ ವಿಶ್ವ ಯುವ ದಿನಾಚರಣೆಯ ಸಂದೇಶ. ಇದರಲ್ಲಿ ಎಲ್ಲರೂ ಭಾಗಿಯಾಗೋಣ.

ವಾಚಕರ ವಾಣಿ

ಸ್ವಯಂಪ್ರೇರಣೆಯಿಂದ ಆಗಬೇಕಾದ ಕಾರ್ಯ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಪ್ರತೀ ಮನೆಯಲ್ಲಿ ತಿರಂಗಾ ಧ್ವಜ ಹಾರಿಸಬೇಕು ಎನ್ನುವ ಸರ್ಕಾರದ ಸೂಚನೆ ಸ್ವಾಗತಾರ್ಹ. ಇದನ್ನು ಯಶಸ್ವಿಗೊಳಿಸಲು ಪ್ರತೀ ಮನೆಗೆ ಉಚಿತವಾಗಿ ರಾಷ್ಟ್ರಧ್ವಜವನ್ನು ಹಂಚಬೇಕಾಗಿತ್ತು. ಆದರೆ ಇದನ್ನು ಸಾಕಾರಗೊಳಿಸಲು ಅಂಚೆ ಕಚೇರಿಗಳಿಗೆ ಗುರಿ ನೀಡಲಾಗಿದೆಯಂತೆ.

ಹರಿಯಾಣದಲ್ಲಿ ಅತಿ ಉತ್ಸಾಹಿ ರೇಷನ್ ಅಂಗಡಿಯವರೊಬ್ಬರು, ಧ್ವಜ ಖರೀದಿಸದಿದ್ದರೆ ರೇಷನ್ ಇಲ್ಲ ಎಂದು ಹೇಳಿದ್ದು ಸುದ್ದಿಮಾಧ್ಯಮದಲ್ಲಿ ವೈರಲ್ ಆಗಿದೆ. ಇಂತಹ ಒತ್ತಾಯವು ಅಮೃತ ಮಹೋತ್ಸವದ ಉತ್ಸಾಹಕ್ಕೆ ತಣ್ಣೀರು ಎರಚುತ್ತದೆ. ಈ ಬಗೆಯ ಕಾರ್ಯಗಳು ಸ್ವಯಂಪ್ರೇರಣೆಯಿಂದ ಆಗಬೇಕೆ ವಿನಾ ಒತ್ತಾಯದಿಂದ ಅಲ್ಲ.

ರಮಾನಂದ ಶರ್ಮಾ, ಬೆಂಗಳೂರು

ಡಿಜಿಟಲ್ ಅಪ್ಲಿಕೇಶನ್: ಬೇಕು ನಿಯಂತ್ರಣ

ಮೊಬೈಲ್ ಫೋನ್‌ಗಳಲ್ಲಿ ಡಿಜಿಟಲ್ ಅಪ್ಲಿಕೇಶನ್‌ಗಳ ಮೂಲಕ ವೈಯಕ್ತಿಕ ಸಾಲಗಳನ್ನು ಪಡೆದ ಸಾರ್ವಜನಿಕರು ಪದೇ ಪದೇ ಕಿರುಕುಳಕ್ಕೆ ಒಳಗಾದ ಹಲವಾರು ಪ್ರಕರಣಗಳು ವರದಿಯಾಗಿವೆ. ಈ ಕಾರಣದಿಂದಲೇ ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದಾರೆ ಎಂಬ ಮಾತುಗಳಿವೆ. ಮೊಬೈಲ್ ಫೋನ್‌ಗಳಲ್ಲಿ ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸುವಾಗ ಬಳಕೆದಾರರ ಫೋಟೊಗಳು ಮತ್ತು ಫೋನ್ ಸಂಪರ್ಕಗಳನ್ನು ಪ್ರವೇಶಿಸಲು ಅವು ಅನುಮತಿಯನ್ನು ಬಯಸುತ್ತವೆ. ಅನುಮತಿಯನ್ನು ಒದಗಿಸದಿದ್ದರೆ, ಅಪ್ಲಿಕೇಶನ್‌ಗಳು ಕಾರ್ಯನಿರ್ವಹಿಸುವುದಿಲ್ಲ. ಅಂತಹ ಕೆಲವು ಅಪ್ಲಿಕೇಶನ್‌ಗಳು ಬಳಕೆದಾರರ ಫೋಟೊವನ್ನು ದುರ್ಬಳಕೆ ಮಾಡಿಕೊಂಡ ವರದಿಗಳು ಕೂಡ ಇವೆ. ಇಂತಹ ಡಿಜಿಟಲ್ ಅಪ್ಲಿಕೇಶನ್‌ಗಳು ಬಳಕೆದಾರರ ಮಾಹಿತಿಯನ್ನು ದುರ್ಬಳಕೆ ಮಾಡುವುದನ್ನು ತಡೆಯಲು ಸರ್ಕಾರ ಈಗಿಂದೀಗಲೇ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯ.

ಬಿ.ಎನ್.ಭರತ್, ಬೆಂಗಳೂರು

ಮಾಜಿ ಸೈನಿಕರ ಸಮಸ್ಯೆ ನಿವಾರಣೆಗೆ ಸಿಗಲಿ ಆದ್ಯತೆ

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಗ್ರಾಮವೊಂದರ ಶಿವಾನಂದ ರೆಡ್ಡಿ ಎಂಬುವರು ಕಾಶ್ಮೀರದ ಪೂಂಚ್‌ನಲ್ಲಿ ಸೈನ್ಯದಲ್ಲಿ ಸೇವೆ ಸಲ್ಲಿಸುವಾಗ ಕಾಲಿಗೆ ಪೆಟ್ಟಾಗಿ, ಸೇನೆಯಿಂದ ನಿವೃತ್ತರಾದ ಮೇಲೆ, ನಿವೃತ್ತ ಯೋಧರಿಗೆ ಆದ್ಯತೆಯ ಮೇಲೆ ಸಿಗಬೇಕಾದ ಜಮೀನಿಗೆ ಅರ್ಜಿ ಸಲ್ಲಿಸಿ, ಕಳೆದ 22 ವರ್ಷಗಳಿಂದ ಸರ್ಕಾರಿ ಕಚೇರಿಗಳಿಗೆ ಅಲೆದಾಡುತ್ತಿದ್ದರೂ ಪ್ರಯೋಜನವಾಗಿಲ್ಲವಂತೆ. ಇದೀಗ ಈ ಅಂಗವಿಕಲ ಮಾಜಿ ಸೈನಿಕ ತನಗೆ ಸಿಗಬೇಕಾದ 5 ಎಕರೆ ಜಮೀನಿನ ಸಲುವಾಗಿ ಮುಖ್ಯಮಂತ್ರಿಯವರ ಬಳಿಗೆ ಪಾದಯಾತ್ರೆ ಹೊರಟಿದ್ದಾರೆ ಎಂದು ವರದಿಯಾಗಿದೆ.

ದೇಶ ರಕ್ಷಣೆಯ ಸಂದರ್ಭದಲ್ಲಿ ಹುತಾತ್ಮರಾದ ಸೈನಿಕರ ಕುಟುಂಬದವರು ಹಾಗೂ ಅಂಗವಿಕಲರಾದವರು ಈ ರೀತಿ ತಮಗೆ ನ್ಯಾಯಯುತವಾಗಿ ಸಿಗಬೇಕಾದ ಸವಲತ್ತಿಗಾಗಿ ಅನೇಕ ವರ್ಷಗಳಿಂದ ಕಾಯುತ್ತಿರುವುದು ನಿಜಕ್ಕೂ ದುರಂತ. ದೇಶರಕ್ಷಣೆಯ ಸಲುವಾಗಿ ದಣಿವರಿಯದೆ ದುಡಿಯುತ್ತಿರುವವರನ್ನು ಸ್ಮರಿಸುವ ಸಲುವಾಗಿ 'ಹರ್ ಘರ್ ತಿರಂಗಾ' ಅಭಿಯಾನ ಆಚರಣೆಗೆ ಸಂಕಲ್ಪ ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ, ದೇಶದಾದ್ಯಂತ ಈ ರೀತಿ ತಮಗೆ ಸಿಗಬೇಕಾದ ಸವಲತ್ತಿಗಾಗಿ ಅಲೆದಾಡುತ್ತಿರುವ ಮಾಜಿ ಸೈನಿಕರನ್ನು ಗುರುತಿಸಿ, ಅವರ ಸಮಸ್ಯೆಯನ್ನು ಆದ್ಯತೆಯ ಮೇಲೆ ಪರಿಹರಿಸಲು ಕ್ರಮ ಕೈಗೊಂಡರೆ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ಡಾ. ಟಿ.ಜಯರಾಂ, ಕೋಲಾರ

ಘನತೆಗೆ ತಕ್ಕುದಲ್ಲದ ನಡೆ

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿಯ ಸಖ್ಯದಲ್ಲಿದ್ದಾಗ ಅವರನ್ನು 'ಅಪ್ರತಿಮ ರಾಜಕಾರಣಿ' ಎಂದಿದ್ದ ಬಿಜೆಪಿ ಮುಖಂಡ ಸುಶೀಲ್ ಮೋದಿ ಅವರು, ನಿತೀಶ್ 'ಉಲ್ಟಾ' ಹೊಡೆದು, ಬಿಜೆಪಿಯ ಸಹವಾಸ ತೊರೆದಾಗ 'ನಿತೀಶ್, ಉಪರಾಷ್ಟ್ರಪತಿಯಾಗಲು ಇಚ್ಛಿಸಿದ್ದರು' ಎಂದು ವ್ಯಂಗ್ಯವಾಡಿದ್ದಾರೆ. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ. ಒಂದು ಪಕ್ಷವಾಗಿ ಬಿಜೆಪಿ ಈಗ ತುಂಬಾ ಬೆಳೆದಿದೆ. ಅದರ ಜವಾಬ್ದಾರಿ ಕೂಡ ಹೆಚ್ಚಿದೆ. ಆದರೆ ಅದರ ನಾಯಕರು ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಪ್ರಬುದ್ಧರಾಗುತ್ತಿಲ್ಲ ಎನ್ನುವುದಕ್ಕೆ ತಮ್ಮ ರಾಜಕೀಯ ವಿರೋಧಿಗಳನ್ನು ವ್ಯಂಗ್ಯ ಮಾಡುವ, ಕಾಲೆಳೆಯುವ ಪ್ರವೃತ್ತಿ ಹೆಚ್ಚುತ್ತಿರುವುದು ಕನ್ನಡಿ ಹಿಡಿಯುತ್ತದೆ. ಸುಶೀಲ್ ಮೋದಿ ಹೇಳಿರುವುದು ನಿಜವೆಂದು ಭಾವಿಸಿದರೂ 'ನಿತೀಶ್ ಉಪರಾಷ್ಟ್ರಪತಿ' ಆಗಲು ಇಚ್ಛಿಸಿದ್ದರೆ ಅದು ಘೋರ ತಪ್ಪೇ?

ಕೆ.ಎನ್.ಭಗವಾನ್, ಬೆಂಗಳೂರು

ರಾಷ್ಟ್ರಧ್ವಜ: ವಿಲೇವಾರಿ ಸೂಕ್ತ ರೀತಿಯಲ್ಲಿ ಆಗಲಿ

ಕರ್ನಾಟಕದಲ್ಲಿ ಒಂದು ಕೋಟಿ ರಾಷ್ಟ್ರಧ್ವಜಗಳನ್ನು ಮನೆ ಮನೆಗಳಲ್ಲಿ ಹಾರಾಟ ಮಾಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಇತರ ಮಂತ್ರಿಗಳು, ಶಾಸಕರು, ಪ್ರಮುಖ ಕಾರ್ಯಕರ್ತರು ಇದೇ ಉತ್ಸಾಹ ತೋರುತ್ತಿದ್ದಾರೆ. ಈ ಉತ್ಸಾಹ ಇಡೀ ದೇಶದಲ್ಲಿ ಕಾಣುತ್ತಿದೆ. ಆಗಸ್ಟ್ 15ರಂದು ಈ ರಾಷ್ಟ್ರಧ್ವಜಗಳು ದೇಶದ ತುಂಬಾ ಹಾರಾಟ ಕಂಡ ಮೇಲೆ, ಅವುಗಳ ವಿಲೇವಾರಿ ಹೇಗೆ? ಚುನಾವಣಾ ಸಾಮಗ್ರಿಗಳು ಪ್ರಚಾರ ಸಭೆ ಮುಗಿದ ಮೇಲೆ, ಹಾದಿ ಬೀದಿ ಕಸ ಆಗುವುದನ್ನು ನಾವು ಕಂಡಿದ್ದೇವೆ.

ಉತ್ಸವ ಮುಗಿದ ಮೇಲೆ ಚುನಾವಣಾ ಸಾಮಗ್ರಿಯಂತೆ, ರಾಷ್ಟ್ರಧ್ವಜಗಳನ್ನೂ ಎಲ್ಲೆಂದರಲ್ಲಿ ಬಿಸಾಡಿದರೆ ಹೇಗೆ? ರಾಜ್ಯ ಮತ್ತು ರಾಷ್ಟ್ರದಲ್ಲಿ ಇದರ ಜವಾಬ್ದಾರಿಯನ್ನು ಯಾರು ಹೊತ್ತಿದ್ದಾರೆ? ಬಳಸಿದ ಮೇಲೆ ರಾಷ್ಟ್ರಧ್ವಜಗಳ ಗೌರವ ಹಾಳಾಗದಂತೆ ಅವುಗಳನ್ನು ವಿಲೇವಾರಿ ಮಾಡುವ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರೈತರ ಆತ್ಮಹತ್ಯೆಗಿಲ್ಲ ಕಡಿವಾಣ

ಪ್ರಜಾವಾಣಿ ವಾರ್ತೆ

'ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಎಂಟು ವರ್ಷಗಳಲ್ಲಿ ದೇಶದಲ್ಲಿ ಒಬ್ಬ ರೈತನೂ ಆತ್ಮಹತ್ಯೆ ಮಾಡಿಕೊಂಡಿಲ್ಲ' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಈಚೆಗೆ ಲೋಕಸಭೆಯಲ್ಲಿ ಹೇಳಿದ್ದಾರೆ. ಆದರೆ, ಸರ್ಕಾರದ್ದೇ ದಾಖಲೆಗಳ ಪ್ರಕಾರ 2014ರಿಂದ 2020 ಅಂತ್ಯದವರೆಗೆ 78 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರ ಆತ್ಮಹತ್ಯೆಗಳಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳು ಸರ್ಕಾರಿ ಸಂಸ್ಥೆಗಳ ಜಾಲತಾಣಗಳಲ್ಲಿ ಸಾರ್ವಜನಿಕರಿಗೆ ಲಭ್ಯವಿವೆ.

ಕೇಂದ್ರ ಗೃಹ ಸಚಿವಾಲಯದ ಅಧೀನ ಸಂಸ್ಥೆಯಾದ 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ–ಎನ್‌ಸಿಆರ್‌ಬಿ'ಯು, ದೇಶದಲ್ಲಿನ ಎಲ್ಲಾ ಸ್ವರೂಪದ ಅಪರಾಧಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸುತ್ತದೆ. ಪ್ರತಿ ವರ್ಷ ದೇಶದಲ್ಲಿ ನಡೆದ ಅಪರಾಧಗಳು ಮತ್ತು ಅಸಹಜ ಸಾವುಗಳ ದಾಖಲೆಗಳನ್ನೂ ನಿರ್ವಹಿಸುತ್ತದೆ ಹಾಗೂ ಅವುಗಳಿಗೆ ಸಂಬಂಧಿಸಿದ ವರದಿಯನ್ನು ಬಿಡುಗಡೆ ಮಾಡುತ್ತದೆ.

ಅಪಘಾತಗಳು ಮತ್ತು ಆತ್ಮಹತ್ಯೆಗಳಿಗೆ ಸಂಬಂಧಿಸಿದಂತೆ ಎನ್‌ಸಿಆರ್‌ಬಿಯು ಪ್ರತಿವರ್ಷ 'ಭಾರತದಲ್ಲಿ ಅಪಘಾತದ ಸಾವುಗಳು ಮತ್ತು ಆತ್ಮಹತ್ಯೆ' ಎಂಬ ವರದಿಯನ್ನು ಬಿಡುಗಡೆ ಮಾಡುತ್ತದೆ. ಎನ್‌ಸಿಆರ್‌ಬಿಯು 1967ರಿಂದ ಈ ವರದಿಯ ಪ್ರಕಟಣೆ ಆರಂಭಿಸಿತ್ತು. ಈಗ 2020ರವರೆಗಿನ ವರದಿಯನ್ನು ಬಿಡುಗಡೆ ಮಾಡಿದೆ. 2021ರ ವರದಿಯನ್ನು ಇನ್ನಷ್ಟೇ ಬಿಡುಗಡೆ ಮಾಡಬೇಕಿದೆ. 1967ರಿಂದ 2020ರವರೆಗಿನ ಒಟ್ಟು 54 ವಾರ್ಷಿಕ ವರದಿಗಳು ಎನ್‌ಸಿಆರ್‌ಬಿಯ ಅಧಿಕೃತ ಜಾಲತಾಣದಲ್ಲಿ ಲಭ್ಯವಿವೆ.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದ ನಂತರವೂ ಎನ್‌ಸಿಆರ್‌ಬಿ ಈ ವರದಿಯನ್ನು ಪ್ರಕಟಿಸುತ್ತಿದೆ. 2014ರಿಂದ 2020ರವರೆಗೆ ಪ್ರಕಟವಾದ ವರದಿಗಳ ಪ್ರಕಾರ, ಆ ಅವಧಿಯಲ್ಲಿ ಪ್ರತಿ ವರ್ಷ 10,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಏಳು ವರ್ಷಗಳಲ್ಲಿ ಆತ್ಮಹತ್ಯೆಗೆ ಬಲಿಯಾದ ರೈತರ ಒಟ್ಟು ಸಂಖ್ಯೆ 78,303 ಆಗುತ್ತದೆ. 2021ರ ವರದಿ ಬಿಡುಗಡೆಯಾದರೆ, ಎಂಟು ವರ್ಷಗಳ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಇನ್ನೂ ಹೆಚ್ಚುತ್ತದೆ. ಆದರೂ, ಎಂಟು ವರ್ಷಗಳಲ್ಲಿ ಒಬ್ಬ ರೈತನೂ ಆತ್ಮಹತ್ಯೆಯಿಂದ ಸತ್ತಿಲ್ಲ ಎಂದು ಬಿಜೆಪಿ ಸಂಸದ ದುಬೆ ಅವರು ಲೋಕಸಭೆಯಲ್ಲಿ ಹೇಳಿದ್ದಾರೆ.





ನಿಶಿಕಾಂತ್ ದುಬೆ ಅವರು ನೀಡಿದ ಈ ತಪ್ಪು ಮಾಹಿತಿಯನ್ನು ಆಧರಿಸಿ, ಹಲವು ಸುದ್ದಿತಾಣಗಳು 'ಎಂಟು ವರ್ಷಗಳಲ್ಲಿ ಒಬ್ಬ ರೈತನೂ ಆತ್ಮಹತ್ಯೆ ಮಾಡಿಕೊಂಡಿಲ್ಲ' ಎಂದು ಸುದ್ದಿ ಪ್ರಕಟಿಸಿವೆ.

ದುಬೆ ಹೇಳಿದ್ದೇನು...

'ವಿರೋಧ ಪಕ್ಷಗಳು ರೈತರ ಆತ್ಮಹತ್ಯೆಯ ಬಗ್ಗೆ ಎಂಟು ವರ್ಷಗಳಲ್ಲಿ ಒಂದು ಚರ್ಚೆಯನ್ನಾದರೂ ನಡೆಸಿವೆಯೇ? ಅವರು ನಡೆಸಿಲ್ಲ ಅಂದರೆ, ಆ ಅವಧಿಯಲ್ಲಿ ದೇಶದಲ್ಲಿ ಒಬ್ಬ ರೈತನೂ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ಅರ್ಥ. ನಾವು ರೈತರನ್ನು ಎಷ್ಟು ಬಲಪಡಿಸಿದ್ದೇವೆ ಅಂದರೆ, ಅವರು ಪ್ರತಿಭಟಿಸುವಷ್ಟು ಪ್ರಬಲರಾಗಿದ್ದಾರೆ. ರೈತರು ವರ್ಷಪೂರ್ತಿ ಪ್ರತಿಭಟನೆಯಲ್ಲೇ ಇದ್ದರೂ, ಅಷ್ಟೂ ಅವಧಿಯ ಹಣ ಅವರಿಗೆ ದೊರೆಯುವಷ್ಟು ಅವರನ್ನು ಮೋದಿ ಬಲಪಡಿಸಿದ್ದಾರೆ. ಆದರೆ, ಈ ಅವಧಿಯಲ್ಲಿ ಒಬ್ಬ ರೈತನೂ ಆತ್ಮಹತ್ಯೆಯಿಂದ ಸತ್ತಿಲ್ಲ' ಎಂದು ನಿಶಿಕಾಂತ್ ದುಬೆ ಅವರು ಲೋಕಸಭೆಯಲ್ಲಿ ಹೇಳಿದ್ದರು.



ಭೂಮಿ ಹೊಂದಿದ್ದ ರೈತರಲ್ಲೇ ಆತ್ಮಹತ್ಯೆ ಹೆಚ್ಚು

43,181 ಇದೇ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ, ಕೃಷಿಭೂಮಿ ಹೊಂದಿದ್ದ ರೈತರ ಸಂಖ್ಯೆ



ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಕೃಷಿ ಭೂಮಿ ಹೊಂದಿದ್ದ ರೈತರ ಸಂಖ್ಯೆ ಎಷ್ಟು ಎಂಬುದನ್ನು ಎನ್‌ಸಿಆರ್‌ಬಿಯು ಪ್ರತ್ಯೇಕ ದತ್ತಾಂಶಗಳ ಮೂಲಕ ವಿವರಿಸಿದೆ. ಇದರಲ್ಲಿ ಸ್ವಂತ ಭೂಮಿ ಹೊಂದಿದ್ದ, ಜಮೀನು ಭೋಗ್ಯಕ್ಕೆ ಪಡೆದು ಬೇಸಾಯ ಮಾಡುತ್ತಿದ್ದ, ಗೇಣಿ ಆಧಾರದಲ್ಲಿ ಬೇಸಾಯ ಮಾಡುತ್ತಿದ್ದ ರೈತರನ್ನು ಸೇರಿಸಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ಒಟ್ಟು ರೈತರಲ್ಲಿ ಈ ವರ್ಗಕ್ಕೆ ಸೇರಿದ್ದ ರೈತರ ಸಂಖ್ಯೆಯೇ ಹೆಚ್ಚು. ಆತ್ಮಹತ್ಯೆ ಮಾಡಿಕೊಂಡ ಪ್ರತಿ ನೂರು ರೈತರಲ್ಲಿ, ಈ ವರ್ಗಕ್ಕೆ ಸೇರಿದ್ದ ರೈತರ ಸಂಖ್ಯೆ 55ರಷ್ಟು.

ಕೃಷಿ ಕಾರ್ಮಿಕರ ಸಂಖ್ಯೆಯೂ ಕಡಿಮೆಯಲ್ಲ

35,122 ಇದೇ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಕೃಷಿ ಕಾರ್ಮಿಕರ ಸಂಖ್ಯೆ

ಆತ್ಮಹತ್ಯೆ ಮಾಡಿಕೊಂಡ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದ ದತ್ತಾಂಶವನ್ನೂ ಎನ್‌ಸಿಆರ್‌ಬಿಯು ಪ್ರತ್ಯೇಕವಾಗಿ ನೀಡುತ್ತದೆ. ದಿನಗೂಲಿ ಆಧಾರದಲ್ಲಿ, ಗುತ್ತಿಗೆಗೆ ಪಡೆದ ಕೃಷಿ ಭೂಮಿಯಲ್ಲಿ ದುಡಿಯುವವರನ್ನು ಈ ವರ್ಗದಲ್ಲಿ ಸೇರಿಸಲಾಗಿದೆ. 2014ರಿಂದ 2020ರವರೆಗೆ ಆತ್ಮಹತ್ಯೆಗೆ ಶರಣಾದ ಕೃಷಿ ಕಾರ್ಮಿಕರ ಸಂಖ್ಯೆ 35 ಸಾವಿರವನ್ನು ದಾಟುತ್ತದೆ. ಈ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಈ ವರ್ಗದವರ ಪ್ರಮಾಣ ಶೇ 45ರಷ್ಟು.



ರೈತರ ಆತ್ಮಹತ್ಯೆ: ಕರ್ನಾಟಕದಲ್ಲೂ ಏರಿಕೆ

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಪ್ರತೀ ವರ್ಷ ವರದಿಯಾಗುತ್ತಿವೆ. ಎನ್‌ಸಿಆರ್‌ಬಿ ದತ್ತಾಂಶಗಳ ಪ್ರಕಾರ, 2014ರಿಂದ 2020ರ ಅವಧಿಯಲ್ಲಿ ಅಂದರೆ, ಏಳು ವರ್ಷಗಳಲ್ಲಿ ರಾಜ್ಯದ 12,989 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2014ರಲ್ಲಿ 768 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಮಾಣ 2020ರ ವೇಳೆಗೆ 2016ಕ್ಕೆ ಏರಿಕೆಯಾಗಿದೆ. ಅಂದರೆ ಪ್ರತೀ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಸಂಖ್ಯೆಯಲ್ಲಿ ಕ್ರಮೇಣ ಏರಿಕೆ ಕಂಡುಬಂದಿದೆ. 2018ರಲ್ಲಿ ಅತಿಹೆಚ್ಚಿನ ಅಂದರೆ, 2,405 ರೈತರು ಆತ್ಮಹತ್ಯೆಗೆ ಶರಣಾಗಿದ್ದರು. 2015ರಿಂದೀಚೆಗೆ ರೈತರ ಆತ್ಮಹತ್ಯೆ ಸಂಖ್ಯೆ ಎರಡು ಸಾವಿರದ ಆಸುಪಾಸಿನಲ್ಲಿದೆ. ಎನ್‌ಸಿಆರ್‌ಬಿಯ 2021ನೇ ವರದಿ ಇನ್ನಷ್ಟೇ ಪ್ರಕಟವಾಗಬೇಕಿದೆ. ಕಳೆದ ಏಳು ವರ್ಷಗಳ ದತ್ತಾಂಶಗಳನ್ನು ಆಧಾರವಾಗಿ ಪರಿಗಣಿಸಿದರೆ, 2021ರಲ್ಲೂ ರೈತರ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿರುವ ಸಾಧ್ಯತೆಯಿದೆ.

ಆದರೆ, ಕರ್ನಾಟಕದ ಕೃಷಿ ಇಲಾಖೆಯು ಪ್ರತಿ ಆರ್ಥಿಕ ವರ್ಷದಲ್ಲಿ ಆತ್ಮಹತ್ಯೆಗೆ ಬಲಿಯಾದ ರೈತರ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಒದಗಿಸಿದ್ದು, ಎನ್‌ಸಿಆರ್‌ಬಿ ದತ್ತಾಂಶಗಳಿಗೂ, ಇಲಾಖೆಯ ದತ್ತಾಂಶಗಳಿಗೂ ವ್ಯತ್ಯಾಸವಿದೆ. 12 ವರ್ಷಗಳಲ್ಲಿ 8,207 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಇಲಾಖೆ ಹೇಳುತ್ತದೆ. 2015–16ರಲ್ಲಿ ಅತಿ ಹೆಚ್ಚು ಅಂದರೆ 1,525 ಪ್ರಕರಣಗಳು ವರದಿಯಾಗಿವೆ.

ಆದರೆ, ಆತ್ಮಹತ್ಯೆ ಎಂಬುದಾಗಿ ವರದಿಯಾದ ಎಲ್ಲ ಪ್ರಕರಣಗಳನ್ನೂ ಸರ್ಕಾರವು ಪರಿಹಾರಕ್ಕೆ ಪರಿಗಣಿಸಿಲ್ಲ. ಕೃಷಿ ಇಲಾಖೆಯಲ್ಲಿ ದಾಖಲಾದ ಪ್ರಕಾರ ವರದಿಯಾದ ಒಟ್ಟು 8,207 ಪ್ರಕರಣಗಳಲ್ಲಿ 6,160 ಪ್ರಕರಣಗಳಷ್ಟೇ ಪರಿಹಾರಕ್ಕೆ ಅರ್ಹ ಎಂದು ಪರಿಗಣಿಸಲಾಗಿದೆ. ವಿವಿಧ ಕಾರಣಗಳನ್ನು ನೀಡಿ 1,809 ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿಲ್ಲ.

12,989 2014ರಿಂದ 2020ರ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರಾಜ್ಯದ ರೈತರ ಒಟ್ಟು ಸಂಖ್ಯೆ



ವಿಶ್ಲೇಷಣೆ ಕೈಬಿಟ್ಟ ಎನ್‌ಸಿಆರ್‌ಬಿ

ಪ್ರತಿ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕುರಿತು ಎನ್‌ಸಿಆರ್‌ಬಿಯು ವರದಿಗಳಲ್ಲಿ ವಿಶ್ಲೇಷಣಾ ವರದಿಯನ್ನು ಪ್ರತ್ಯೇಕವಾಗಿ ನೀಡುತ್ತಿತ್ತು. ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗಳೇನು ಎಂಬುದನ್ನು ಈ ವಿಶ್ಲೇಷಣೆಯಲ್ಲಿ ವಿವರಿಸಲಾಗುತ್ತಿತ್ತು.

2014 ಮತ್ತು 2015ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಒಟ್ಟು ರೈತರಲ್ಲಿ ಸಾಲ ಮತ್ತು ಆರ್ಥಿಕ ಸಮಸ್ಯೆಯಿಂದ, ಆತ್ಮಹತ್ಯೆ ಮೊರೆ ಹೋದ ರೈತರ ಪ್ರಮಾಣ ಶೇ 35ಕ್ಕಿಂತಲೂ ಹೆಚ್ಚು. ಅದೇ ರೀತಿ ಶೇ 25ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆಗೆ ಮೊರೆ ಹೋಗಲು ಕಾರಣಗಳೇನು ಎಂಬುದನ್ನು ಗುರುತಿಸಲು ಸಾಧ್ಯವಾಗಿಲ್ಲ ಎಂದು ಆ ಎರಡು ವರ್ಷಗಳ ವರದಿಗಳಲ್ಲಿ ವಿವರಿಸಲಾಗಿದೆ. 2014ಕ್ಕಿಂತಲೂ ಹಿಂದಿನ ವರ್ಷದ ವರದಿಗಳಲ್ಲೂ ಈ ಸ್ವರೂಪದ ವಿಶ್ಲೇಷಣೆಯನ್ನು ನೀಡಲಾಗಿದೆ. ಎನ್‌ಸಿಆರ್‌ಬಿ ವರದಿಯ '2ಎ' ಅಧ್ಯಾಯದಲ್ಲಿ 15 ಪುಟಗಳ ವಿಶ್ಲೇಷಣೆಯನ್ನು ನೀಡಲಾಗುತ್ತಿತ್ತು.

ಆದರೆ 2016ನೇ ಸಾಲಿನ ವರದಿಯಿಂದ ಈ ಸ್ವರೂಪದ ವಿಶ್ಲೇಷಣೆಯನ್ನು ಕೈಬಿಡಲಾಗಿದೆ. ಹಾಗಾಗಿ 2016ರಿಂದ 2020ರ ಮಧ್ಯೆ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಏನು ಕಾರಣ ಎಂಬ ಮಾಹಿತಿ ಸಾರ್ವಜನಿಕರಿಗೆ ಲಭ್ಯವಿಲ್ಲ.

ಆಧಾರ: ಎನ್‌ಸಿಆರ್‌ಬಿ, ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪಘಾತದ ಸಾವುಗಳು ಮತ್ತು ಆತ್ಮಹತ್ಯೆ' ವರದಿಗಳು, ಪಿಟಿಐ, ಕರ್ನಾಟಕ ರಾಜ್ಯ ವಿಧಾನಸಭಾ ಪ್ರಶ್ನೋತ್ತರಗಳು

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ರಾಷ್ಟ್ರಧ್ವಜವನ್ನು ಖರೀದಿಸುವಂತೆ ಒತ್ತಡ ಹೇರುವ ಅಧಿಕಾರಿಗಳ ಧೋರಣೆ ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 197

ದೇವತೆಗಳೆದುರು ಪ್ರತ್ಯಕ್ಷಳಾದ ದುರ್ಗ

ಜಗನ್ಮಾತೆಯನ್ನು ದೇವತೆಗಳೆಲ್ಲ ಸ್ತುತಿಸಿದಾಗ, ಪ್ರಸನ್ನಳಾದ ದುರ್ಗಾಮಾತೆಯು ರತ್ನಮಯವಾದ ಕಿರುಗೆಜ್ಜೆಗಳ ಮಾಲೆಯನ್ನು ಧರಿಸಿ, ಸುಂದರವಾದ ರತ್ನಗಂಬಳಿಯುಳ್ಳ ರತ್ನಪೀಠದಲ್ಲಿ ಅವಿರ್ಭವಿಸಿ ಪ್ರತ್ಯಕ್ಷಳಾದಳು. ದೇವಿಯ ಅವಯವಗಳೆಲ್ಲವೂ ಕೋಟಿಸೂರ್ಯನಷ್ಟು ಪ್ರಕಾಶಿಸುತ್ತಿದ್ದವು. ದೇವತೆಗಳು ದೇವಿಯನ್ನು ನಮಸ್ಕರಿಸಿ ಹೀಗೆ ಸ್ತುತಿಸಿದರು:

'ಓ ದೇವಿ, ನಿನ್ನ ಮಹಿಮೆಯನ್ನು ವೇದಗಳು, ಶಾಸ್ತ್ರಗಳು ಸಂಪೂರ್ಣವಾಗಿ ತಿಳಿಸಲಾರವು. ನಿನ್ನ ಮಹಿಮೆಯು ಧ್ಯಾನಕ್ಕೆ ನಿಲುಕುವಂತಹುದಲ್ಲ. ಶ್ರುತಿಯೂ ನೀನು ಅಸತ್ಯವಾದ ಜಡವಸ್ತುವಿಗಿಂತಲೂ ಭಿನ್ನಳು ಎಂದು ಭೇದರೂಪವಾಗಿ ಹೇಳುತ್ತದೆ. ನಿನ್ನ ಸ್ವರೂಪವು ಇಂತಹುದೇ ಎಂದು ಪ್ರತ್ಯಕ್ಷವಾಗಿ ಹೇಳಲು ಆ ಶ್ರುತಿಯು ಅಶಕ್ತವಾಗಿದೆ. ಹೀಗಿರಲು ಸಾಮಾನ್ಯರು ನಿನ್ನ ಸ್ವರೂಪವನ್ನು ಹೇಳುವುದೆಂತು? ತಿಳಿಯುವುದೆಂತು? ಆದರೆ ನಿನ್ನ ಭಕ್ತರು ನಿನ್ನ ಅನುಗ್ರಹದಿಂದಲೇ ನಿನ್ನ ಸ್ವರೂಪವನ್ನು ತಿಳಿಯಬಲ್ಲರು. ನಿನ್ನನ್ನು ಮೊರೆಹೊಕ್ಕ ಭಕ್ತರಿಗೆ ಯಾವ ಭಯವೂ ಇಲ್ಲ. ಈಗ ನಿನ್ನ ದಾಸರಾದ ನಾವು ಒಂದು ವಿಷಯವನ್ನು ವಿಜ್ಞಾಪಿಸಿಕೊಳ್ಳುವೆವು. ಹಿಂದೆ ನೀನು ದಕ್ಷಪುತ್ರಿ ಸತೀದೇವಿಯಾಗಿ ಜನಿಸಿ ಹರನ ಪ್ರಿಯಭಾರ್ಯೆಯಾಗಿ ನಮ್ಮೆಲ್ಲರ ದುಃಖವನ್ನು ಪರಿಹರಿಸಿದ್ದೆ. ಆದರೆ ದಕ್ಷನಿಂದಾದ ಅವಮಾನವನ್ನು ಸಹಿಸದೆ ಶರೀರವನ್ನು ತ್ಯಜಿಸಿರುವೆ. ನಿನ್ನ ಅವತಾರದಿಂದಾಗಬೇಕಾದ ದೇವಕಾರ್ಯವು ಪೂರ್ಣವಾಗಿ ಆಗಲೇ ಇಲ್ಲ. ಅದಕ್ಕಾಗಿ ದೇವತೆಗಳ ಮನೋರಥವನ್ನು ಪೂರ್ಣಗೊಳಿಸು. ಸನತ್ಕುಮಾರನ ವಾಕ್ಯವು ಸಫಲವಾಗುವಂತೆ ಮಾಡು. ಭೂಮಿಯಲ್ಲಿ ನೀನು ಮತ್ತೆ ಅವತರಿಸಿ ರುದ್ರನ ಪತ್ನಿಯಾಗು' ಎಂದು ಸ್ತೋತ್ರ ಮಾಡಿದರು.

ಆಗ ಮಹೇಶ್ವರಿಯು 'ಎಲೈ ದೇವತೆಗಳೇ! ಮುನಿಗಳೇ!! ವ್ಯಥೆಯನ್ನು ಬಿಡಿ. ನನ್ನ ಪ್ರತಿಯೊಂದು ಕಾರ್ಯವೂ ಜಗತ್ತಿಗೆ ಸುಖವನ್ನುಂಟು ಮಾಡುವುದೇ ಆಗಿರುವುದು. ನೀವೀಗ ಹೇಳಿದಂತೆ ಭೂಮಿಯಲ್ಲಿ ಮತ್ತೆ ಅವತರಿಸುವೆ. ಇದಕ್ಕೆ ಇನ್ನೂ ಅನೇಕ ಕಾರಣಗಳುಂಟು. ಹಿಂದೆ ಸತೀದೇವಿಯಾಗಿದ್ದಾಗ ನನ್ನನ್ನು ಹಿಮವಂತ ಮತ್ತು ಮೇನಾದೇವಿ ಇಬ್ಬರೂ ಮಗಳಂತೆ ಪ್ರೀತಿಯಿಂದ ನೋಡಿಕೊಂಡಿದ್ದರು. ಈಗಲೂ ಸಹ ಭಕ್ತಿಯಿಂದ ಮೇನಾದೇವಿಯು, ನಾನು ಮಗಳಾಗಬೇಕೆಂದು ಬಯಸಿ ವಿಶೇಷವಾಗಿ ಅರ್ಚಿಸುತ್ತಲಿರುವಳು. ರುದ್ರನು ಹಿಮಾಲಯದಲ್ಲಿ ವಾಸ ಮಾಡುವುದರಿಂದ ನಾನು ಹಿಮವಂತನ ಮನೆಯಲ್ಲಿ ಅವತರಿಸುವೆ. ಶಿವನ ಲೀಲೆಯು ಅದ್ಭುತವಾದುದು. ಜ್ಞಾನಿಗಳನ್ನೂ ಮೋಹ ಗೊಳಿಸುವಂತಹುದು. ತಂದೆಯ ಅವಮಾನದಿಂದ ನಾನು ಯಾವಾಗ ದೇಹವನ್ನು ತ್ಯಜಿಸಿದೆನೋ, ಆಗಿನಿಂದ ಕಾಲಾಗ್ನಿಯಾಗಿ ರುದ್ರನು ನನ್ನನ್ನೇ ಚಿಂತಿಸುತ್ತಾ ದಿಗಂಬರನಾದನು; ಯೋಗಿಯಾದನು. ಆದರೂ ಅವನು ಸತೀದೇವಿಯ ವಿರಹವನ್ನು ಸಹಿಸಲಾರದವನಾಗಿದ್ದಾನೆ. ನನಗಾಗಿ ಮಹಾದುಃಖವನ್ನನುಭವಿಸುತ್ತಿದ್ದಾನೆ. ಸತಿಯ ಎಲುಬಿನಿಂದ ಮಾಲೆಯನ್ನು ಮಾಡಿ, ಅದನ್ನು ಪ್ರೀತಿಯಿಂದ ಧರಿಸಿಕೊಂಡಿದ್ದಾನೆ. ಜ್ಞಾನಿಯಾದರೂ ಅವನು ಹುಚ್ಚನಂತೆ ಅಲ್ಲಿ ಇಲ್ಲಿ ತಿರುಗುತ್ತಾ ರೋದಿಸುತ್ತಿದ್ದಾನೆ. ಇದೆಲ್ಲವೂ ಮಾಯೆ. ವಸ್ತುತಃ ಆ ಶಿವ ಯಾವ ವಿಕಾರಗಳೂ ಇಲ್ಲದ ಜಿತೇಂದ್ರಿಯ. ಅವನ ವಿರಹದ ಹಿಂದೆ ಒಂದು ಲೋಕಕಲ್ಯಾಣದ ವಿಷಯವಿರುತ್ತದೆ. ಹೀಗಾಗಿ ರುದ್ರ ಮತ್ತೆ ನನ್ನನ್ನು ಮದುವೆಯಾಗಲಿಚ್ಛಿಸಿದ್ದಾನೆ. ರುದ್ರನ ಸಂತೋಷಕ್ಕಾಗಿ ಹಿಮವಂತನ ಮನೆಯಲ್ಲಿ ಮೇನಾದೇವಿಯ ಗರ್ಭದಲ್ಲಿ ಅವತರಿಸುವೆ. ರುದ್ರಪ್ರಿಯಳಾಗಿ ಘೋರವಾದ ತಪವನ್ನಾಚರಿಸಿ ರುದ್ರನನ್ನು ಮದುವೆಯಾಗುವೆ. ಈಗ ಎಲ್ಲರೂ ನಿಮ್ಮ ಮನೆಗಳಿಗೆ ಹೋಗಿ ನಿತ್ಯವೂ ಶಂಕರನನ್ನು ಭಜಿಸಿರಿ. ಶಿವನ ಅನುಗ್ರಹದಿಂದ ದುಃಖವೆಲ್ಲವೂ ನಾಶವಾಗುವುದು' ಎಂದು ಹೇಳಿದ ಪರಮೇಶ್ವರಿಯು ಅಂತರ್ಧಾನಳಾದಳು. ಶ್ರೀ ಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ನಾಲ್ಕನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಎನ್‌ಡಿಎಯಿಂದ ಹೊರಬಂದು ಆರ್‌ಜೆಡಿ ಬೆಂಬಲದೊಂದಿಗೆ ಹೊಸ ಸರ್ಕಾರ ರಚಿಸಿದ್ದಾರೆ. ಇದೇ ವೇಳೆ, ನಿತೀಶ್ ಕುಮಾರ್ ಅವರು ವಿಧಾನಸಭೆಯಲ್ಲಿ ಭಾಷಣ ಮಾಡಿದ ವಿಡಿಯೊವೊಂದು ವೈರಲ್ ಆಗಿದೆ. 'ಇನ್ನು ಮುಂದೆ ಬೆಂಬಲ ಪಡೆಯುವುದಿಲ್ಲ, ಇದೇ ಕೊನೆ. ಮುಂದೆ ಎಂದೂ ಇದು ಸಾಧ್ಯವಾಗುವುದಿಲ್ಲ' ಎಂದು ನಿತೀಶ್ ಅವರು ವಿಡಿಯೊದಲ್ಲಿ ಹೇಳಿದ್ದಾರೆ. ಈ ವಿಡಿಯೊವನ್ನು ಷೇರ್ ಮಾಡಿರುವ ಬಿಜೆಪಿಯ ಹಲವು ಮುಖಂಡರು ಹಾಗೂ ಪತ್ರಕರ್ತರು, ನಿತೀಶ್ ಅವರು ಆರ್‌ಜೆಡಿಯನ್ನು ಕುರಿತು ಈ ಮಾತುಗಳನ್ನು ಹೇಳಿದ್ದಾರೆ ಎಂದು ಉಲ್ಲೇಖಿಸಿದ್ದಾರೆ.

ವೈರಲ್ ಆಗಿರುವ ವಿಡಿಯೊ ಎಂಟು ವರ್ಷ ಹಳೆಯದು ಎಂದು ಆಲ್ಟ್ ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ವೆಬ್‌ಸೈಟ್‌ಗಳು ಫ್ಯಾಕ್ಟ್ ಚೆಕ್ ಪ್ರಕಟಿಸಿವೆ. 2014ರ ಫೆಬ್ರುವರಿ 18ರಂದು ಪ್ರಕಟವಾದ ದೈನಿಕ ಭಾಸ್ಕರ್, ದೈನಿಕ ಜಾಗರಣ್ ಮೊದಲಾದ ಪತ್ರಿಕೆಗಳಲ್ಲಿ ನಿತೀಶ್ ಭಾಷಣದ ವರದಿಗಳಿವೆ. ನಿತೀಶ್ ಅವರು ಬಿಜೆಪಿಯನ್ನು ಕುರಿತು ಈ ಮಾತುಗಳನ್ನು ಹೇಳಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ನಿತೀಶ್ ಅವರು ಆರ್‌ಜೆಡಿ ಜತೆ ಮತ್ತೆ ಕೈಜೋಡಿಸುವುದಿಲ್ಲ ಎಂಬುದಾಗಿ ಹೇಳಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ವೆಬ್‌ಸೈಟ್‌ಗಳು ತಿಳಿಸಿವೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬುದ್ಧಿಗೆ ನಿಲುಕದ ಪರತತ್ವ

ಬರಿಯೋದು ಬರಿವಾದ ಬರಿಬುದ್ಧಿ ದೊರಕಿಸದು |
ಪರತತ್ತ್ವವನು ಬೇಕು ಬೇರೆ ಕಣ್ಣದಕೆ ||
ಚಿರದ ಮಮತಾವೇಷ್ಟಿತದ ಪೊರೆಯ ಹರಿದಂದು |
ಅರಳ್ವುದರಿವಿನ ಕಣ್ಣು – ಮಂಕುತಿಮ್ಮ || 692 ||

ಪದ-ಅರ್ಥ: ಬರಿಯೋದು = ಬರೀ + ಓದು, ಕಣ್ಣದಕೆ = ಕಣ್ಣು + ಅದಕೆ, ಚಿರದ = ಶಾಶ್ವತತೆಯ, ಮಮತಾವೇಷ್ಟಿತದ = ನಾನು, ನನ್ನದು ಎಂಬ ಮೋಹದ ಹೊದ್ದಿಕೆಯ, ಹರಿದಂದು = ಹರಿದ + ಅಂದು, ಅರಳ್ವುದರಿವಿನ = ಅರಳ್ವುದು(ಅರಳುವುದು) + ಅರಿವಿನ(ತಿಳಿವಿನ).

ವಾಚ್ಯಾರ್ಥ: ಬರಿಯ ಓದಿನಿಂದ, ವಾದದಿಂದ, ಬುದ್ಧಿಯಿಂದ ಪರತತ್ವವನ್ನು ತಿಳಿಯುವುದು ಅಸಾಧ್ಯ. ಅದಕ್ಕೆ ಬೇರೆ ಕಣ್ಣು ಬೇಕು. ಯಾವಾಗ ಶಾಶ್ವತತೆಯ, ಮೋಹದಾವರಣದ ಪೊರೆ ಕತ್ತರಿಸುತ್ತದೆಯೋ, ಅಂದು ತಿಳಿವಿನ ಕಣ್ಣು ಅರಳುತ್ತದೆ.

ವಿವರಣೆ: ಅರ್ಜುನನಿಗೆ ಕೃಷ್ಣನ ಅನಂತರೂಪವನ್ನು ನೋಡುವ ಬಯಕೆ. ಆದರೆ ಕೃಷ್ಣನಿಗೆ ಗೊತ್ತು, ಅರ್ಜುನನಿಗೆ ನೋಡುವ ಶಕ್ತಿ ಇಲ್ಲ. ಆದ್ದರಿಂದ ಹೇಳುತ್ತಾನೆ,

"ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯಮೇ
ಯೋಗಮೈಶ್ವರಮ್ ||"

"ನಿನಗೆ ನಾನು ಅತಿಶಯವಾದ ಶಕ್ತಿಯುಳ್ಳ ಕಣ್ಣುಗಳನ್ನು ಕೊಡುತ್ತೇನೆ. ಅವುಗಳಿಂದ ನನ್ನ ಈಶ್ವರ ದಶೆಯ ಪ್ರಭಾವವನ್ನು ನೋಡು". ಹಾಗೆಂದರೆ ಭಗವಂತ ಅರ್ಜುನನಿಗೆ ಬೇರೆ ಭೌತಿಕ ಕಣ್ಣುಗಳನ್ನು ಕೊಟ್ಟನೆಂದಲ್ಲ. ಅವನಿಗೆ ಹೊಸ ತೇಜವನ್ನು, ಅಧ್ಯಾತ್ಮಿಕ ಶಕ್ತಿಯನ್ನು ಕೊಟ್ಟ. ಅದರಿಂದ ಅರ್ಜುನನಿಗೆ ಭಗವಂತನ ವಿಶ್ವರೂಪವನ್ನು ನೋಡಲು ಸಾಧ್ಯವಾಯಿತು. ಅವನಿಗೆ ತತ್ವದರ್ಶನವಾಯಿತು. ಅದು ಏಕೆ ತತ್ವದರ್ಶನ ಅಷ್ಟು ಕಷ್ಟ? ಬುದ್ಧಿಗೆ ಅದೇಕೆ ನಿಲುಕುವುದಿಲ್ಲ? ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಒಂದು ಮಾತಿದೆ.

ಯೊ ಬುದ್ಧೇಃ ಪರತಸ್ತು ಸ ||

"ಪರವಸ್ತು, ಪರತತ್ವ, ಬುದ್ಧಿಯನ್ನು ಮೀರಿದ್ದು". ಏಕೆಂದರೆ ನಮ್ಮ ಬುದ್ಧಿಯ ಕಾರ್ಯ ನಡೆಯುವುದು ಮನಸ್ಸಿನ ಪ್ರೇರಣೆಯಿಂದ. ಆದರೆ ಮನಸ್ಸು ತಿಳಿಯುವುದೇ ಇಂದ್ರಿಯಗಳ ಮೂಲಕ. ಆದ್ದರಿಂದ ಇಂದ್ರಿಯಗಳಿಂದ ಬಂದ ಸೂಚನೆಗಳಂತೆ ಮನಸ್ಸು, ಮನಸ್ಸಿನ ಪ್ರೇರಣೆಯಂತೆ ಬುದ್ಧಿ ಕೆಲಸ ಮಾಡುತ್ತದೆ. ಆದರೆ ಪರತತ್ವ ಬುದ್ಧಿಗಿಂತ ತುಂಬ ಮೇಲ್ಪಟ್ಟದ್ದು. ಆದ್ದರಿಂದ ಅದು ಇಂದ್ರಿಯಗಳ ಅಂಕೆಗೆ ಒಳಪಡಲಾರದು. ಇನ್ನೊಂದು ವಿಷಯವೆಂದರೆ ಬುದ್ಧಿಗೆ ತಿಳಿದದ್ದೆಲ್ಲ ಅನುಭವವಾಗುವುದಿಲ್ಲ. ಅದಕ್ಕೆ ಕಗ್ಗ ತಿಳಿಸುತ್ತದೆ, ಬರೀ ಓದಿನಿಂದ, ಬರೀ ತರ್ಕದಿಂದ, ಬರೀ ಬುದ್ಧಿಯ ವಿಚಕ್ಷಣೆಯಿಂದ ಪರತತ್ವವನ್ನು ತಿಳಿಯುವುದು ಸಾಧ್ಯವಿಲ್ಲ. ಅದನ್ನು ತಿಳಿಯಲು ಎರಡು ಸಾಧನೆಗಳು ಬೇಕು. ಮೊದಲನೆಯದು, ಶಾಶ್ವತತೆಯ ಹಂಬಲವನ್ನು ಬಿಡಬೇಕು. ತಾನು ಚಿರಂಜೀವಿ ಎನ್ನುವಂತೆ ಹಾರಾಡುವುದು ಬೇಡ. ಪ್ರಪಂಚದಲ್ಲಿ ಯಾರೂ ಶಾಶ್ವತರಲ್ಲ. ಎರಡನೆಯದು, ನಾನು, ನನ್ನದು ಎನ್ನುವ ಮೋಹದ ಪೊರೆ ನಮ್ಮನ್ನು ಬಿಗಿದು ಕಟ್ಟಿದೆ. ಅದರಿಂದಾಗಿ ನಮಗೆ ತತ್ವದರ್ಶನ ಸಾಧ್ಯವಾಗುತ್ತಿಲ್ಲ. ಎಂದು ನಮಗೆ ಈ ಮಮತೆಯ ಪೊರೆ ಹರಿಯುತ್ತದೋ ಅಂದೇ ನಮ್ಮ ತಿಳಿವಿನ ಕಣ್ಣು ಅರಳಿ ತತ್ವದರ್ಶನವಾದೀತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಆಗಸ್ಟ್ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ–ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ಪೂರ್ಣಿಮಾ ಗಂ. 7-06 ನಂತರ (ಶ್ರಾವಣ ಕೃಷ್ಣ) ಪ್ರತಿಪದ್ ಗಂ. 27-47 ನಕ್ಷತ್ರ: ಧನಿಷ್ಠಾ ಗಂ. 25-36 ಯೋಗ: ಸೌಭಾಗ್ಯ ಗಂ. 11-33, ಕರಣ: ಬವ ಗಂ. 7-06 ಕರ್ಕಾಟಕ ಮಾಸದ 26 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00, ಸೂರ್ಯೋದಯ : 06-21
ಸೂರ್ಯಾಸ್ತ : 06-50 ಮುಸ್ಲಿಂ ದಿನಾಂಕ : 13 ಮೊಹರಮ್
ದಿನ ವಿಶೇಷ : ಅಮರನಾಥ ಯಾತ್ರ, ಗಾಯತ್ರೀ ಪಾಡ್ಯ
ಅದೃಷ್ಟ ಸಂಖ್ಯೆ: 6, 8

ಮೇಷ: ದಿನಂಪ್ರತಿ ಶ್ರಮದಿಂದ ದುಡಿಯುವ ನಿಮ್ಮ ತಾಳ್ಮೆ ಮೆಚ್ಚತಕ್ಕದ್ದೇ. ಇಂದಿನಿಂದ ಆರ್ಥಿಕ ಸ್ಥಿತಿಯು ಸ್ವಲ್ಪ ಮಟ್ಟಿಗೆ ಏರುತ್ತದೆ. ನಿಮ್ಮ ಮೇಲಿದ್ದಂತಹ ಸಣ್ಣ-ಪುಟ್ಟ ಅಪವಾದಗಳು ಸ್ನೇಹಿತರ ಸಹಾಯದಿಂದ ದೂರಾಗುವುದು.

ವೃಷಭ: ಬುದ್ಧಿ ಸಾಮರ್ಥ್ಯದ ಅಥವಾ ಜ್ಞಾಪಕ ಶಕ್ತಿಯ ಪರೀಕ್ಷೆಯಲ್ಲಿ ಖಂಡಿತವಾಗಿ ನೀವೇ ಜಯಶಾಲಿಯಾಗುವಿರಿ. ನಿಮ್ಮ ಪರಿಸ್ಥಿತಿಗೆ ಪ್ರತಿಫಲ ಅಪೇಕ್ಷೆಯನ್ನು ಹೊಂದಿದ ಬಂಧು-ಮಿತ್ರರ ಸಹಕಾರ ದೊರೆಯುವುದು.

ಮಿಥುನ: ಆಫೀಸಿನ ಸಿಬ್ಬಂದಿಯೊಂದಿಗೆ ವಿನಾಕಾರಣ ಮಾತನಾಡುವುದನ್ನು ಕಡಿಮೆ ಮಾಡುವುದು ಒಳ್ಳೆಯದು. ನಿಮ್ಮ ಸ್ವಾರ್ಥಕ್ಕಾಗಿ ಈ ದಿನ ಮೇಲಧಿಕಾರಿಗಳಲ್ಲಿ ಏನನ್ನೂ ಕೇಳಬೇಡಿ. ಷೇರು ಮಾರಾಟದಿಂದ ಅಧಿಕ ಲಾಭ.

ಕರ್ಕಾಟಕ: ನೀವು ಈ ದಿನ ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ. ಕಾಲು ನೋವು ನಿವಾರಿಸಿಕೊಳ್ಳಲು ತೈಲ ಲೇಪನದಂತಹ ಮಾರ್ಗವನ್ನು ಆರಿಸಿಕೊಳ್ಳುವುದು ಉತ್ತಮ.

ಸಿಂಹ: ಮುಂದಿನ ಯೋಜನೆಗಳ ಬಗ್ಗೆ ಈ ದಿನದಿಂದಲೇ ಕಾರ್ಯಾಚರಣೆ ಪ್ರಾರಂಭಿಸುವಿರಿ. ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಸಾಕಷ್ಟು ಅವಕಾಶಗಳು ಸಿಗುವುದು. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಲಾಭ.

ಕನ್ಯಾ: ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆಯನ್ನು, ಬುದ್ಧಿವಂತಿಕೆಯನ್ನು, ಕೆಲಸಕ್ಕೆ ಹೆಗಲು ಕೊಡುವ ಜನರನ್ನು ನೀವು ಹೊಂದಿರುವಿರಿ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು.

ತುಲಾ: ಉದಾಸೀನತೆಯಿಂದ ಹಾಗೂ ಬೇಜವಾಬ್ದಾರಿತನದಿಂದ ನಿಮ್ಮ ಸರ್ವತೋಮುಖ ಅಭಿವೃದ್ಧಿ ಕುಂಠಿತವಾಗುವುದು. ಕೋರ್ಟು-ಕಚೇರಿ ಕಾರ್ಯಭಾಗದಲ್ಲಿ ಕಹಿಯ ಫಲ ಅನುಭವಿಸುವಂತಾಗಬಹುದು.

ವೃಶ್ಚಿಕ: ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು. ರಿಯಲ್ ಎಸ್ಟೇಟ್‌ದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿದೆ. ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು.

ಧನು: ಮಕ್ಕಳ ನಡುವಳಿಕೆ, ಅವರ ಉತ್ತರಗಳು ನಿಮ್ಮ ಮನಸ್ಸನ್ನು ನೋಯಿಸಲಿದೆ. ಉದ್ಯೋಗದಲ್ಲಿ ಉನ್ನತ ಸ್ಥಾನವನ್ನು ಪಡೆಯುವ ಸಾಧನೆ ಆಗಬಹುದು. ಸಂಪಾದಿಸಿದ ಹಣ ಅನಿವಾರ್ಯದ ಸಮಯದಲ್ಲಿ ಸಿಗದಂತಾಗಲಿದೆ.

ಮಕರ: ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆ ಗೊಂಡು ಸಂತಸ ವೃದ್ಧಿಯಾಗುವುದು. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಯತ್ನಿಸಿ. ಸಾಕು ಪ್ರಾಣಿಗಳ ಅಗಲಿಕೆಯ ನೋವುಗಳು ಕಾಡಲಿದೆ.

ಕುಂಭ: ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ. ನಿಮ್ಮ ದೈನಂದಿನ ಬದುಕಿನಲ್ಲಿ ಸದಾಚಾರದಿಂದ ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭವಿದೆ.

ಮೀನ: ಸಂಗೀತ ಮತ್ತು ನಾಟಕ ಕಲಾವಿದರಿಗೆ ಹೆಚ್ಚಿನ ಮನ್ನಣೆ ಸಿಗುವುದು. ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿದೆ. ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾಗಿ.

ಪದಬಂಧ 5047

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಯಜಮಾನನ ಹುಟ್ಟುಗುಣ (4)
3. ಅಕ್ಕಿ ತೊಳೆದ ನೀರಿದು (4)
5. ಒಳ್ಳೆಯ ಸ್ವಭಾವವಿದು (3)
6. ಹರಿಯುವಂಥ ವಸ್ತು (2)
8. ಸಂಕಲನ ಮಾಡುವಾಗ ಪ್ರಾರಂಭವಾದ ಜಗಳ (3)
10. ತೊಂದರೆ ಹೊಂದಿದ ವ್ಯಕ್ತಿ (3)
11. ಆಮೇಲೂ ಇಳಿಯದಿರುವ ಮತ್ತು! (3)
12. ಚಿಕ್ಕ ಮಕ್ಕಳನ್ನು ಹೀಗೆ ಸಂತೈಸು (3)
15. ರಸನದಲ್ಲಿರುವ ದ್ರವ (2)
17. ದೃಷ್ಟಿಗೆ ದೂರವಾಗಿರುವುದು (3)
18. ಯಾಗದ ಸಮಾಪ್ತಿ (4)
19. ನಿಸ್ಸಾರವಾದುದನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1. ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2. ಬೆಳಗಿನ ಜಾವವಿದು (3)
3. ಕಲೆಸಿದ ಗೋಧಿ ಹಿಟ್ಟು (3)
7. ಬೇರೆ ಬೇರೆ ಬಣ್ಣಗಳ ಬೆರಕೆ (5)
9. ಈತ ಮೋಸಗಾರ (5)
13. ಒಳ್ಳೆಯ ದಾರಿಯಿದು (3)
14. ನಾಶವಿಲ್ಲದ ವರ್ಣ (3)
16. ದನವಿರುವ ಮನೆ (3)



5046ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋಗ್ವೇದ 4.ಸಂಭವ
6.ಜವಾಬುದಾರಿ 7.ನಭ
9.ನವ 10.ಶಿಷ್ಟ
11.ಸುತ 13.ಮನೆವಾಳ್ತನ
16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ದನುಜ
3.ಸಬೂಬು 4.ಸಂಚಾರಿ
5.ವಜ್ರೋತ್ಸವ 8.ಭವಿಷ್ಯ
9.ನನಸು 10.ಶಿರೋನಾಮೆ
12.ತಲೆಗಾಪು 13.ಮರಳು
14.ವಾಯಿದೆ 15.ನಮೂನೆ

ಸುಡೊಕು 5433

4			9		1		3	
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5432 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

‘ಕೈ’ ಚುಕ್ಕಾಣಿ: ರಾಹುಲ್ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಯ ಚುನಾವಣೆ ಪ್ರಕ್ರಿಯೆಗೆ ಕೊನೆಗೂ ಚಾಲನೆ ಸಿಕ್ಕಿದೆ. ಆಗಸ್ಟ್ 20ರಂದು ಪ್ರಕ್ರಿಯೆ ಆರಂಭವಾಗಲಿದ್ದು, ಸೆಪ್ಟೆಂಬರ್ 20ರ ವೇಳೆಗೆ ಈ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಹೀನಾಯವಾಗಿ ಸೋತ ಬಳಿಕ ರಾಹುಲ್ ಗಾಂಧಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮತ್ತೆ ‘ಕೈ’ ಚುಕ್ಕಾಣಿ ಹಿಡಿಯಲು ರಾಹುಲ್ ಹೆಚ್ಚಿನ ಒಲವು ಹೊಂದಿಲ್ಲ. ಪಕ್ಷದ ಅಧ್ಯಕ್ಷರಾಗಿಲ್ಲದೆಯೇ ಬಿಜೆಪಿ ವಿರುದ್ಧ ಹೋರಾಟ ಮಾಡಬಹುದು ಎಂಬ ನಿಲುವನ್ನು ಹೊಂದಿದ್ದಾರೆ.

ಪಕ್ಷದ ಹಿರಿಯ ನಾಯಕರ ಮನವೊಲಿಕೆಗೆ ರಾಹುಲ್ ಮಣಿಯದೆ ಇದ್ದಲ್ಲಿ ಅಧ್ಯಕ್ಷ ಸ್ಥಾನ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಪೈಕಿ ಒಬ್ಬರಿಗೆ ಒಲಿಯುವ ಸಾಧ್ಯತೆ ಇದೆ.

ಪಕ್ಷದ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಂದ ಅಧ್ಯಕ್ಷ ಸ್ಥಾನ ರಾಹುಲ್ ಅವರಿಗೆ ಹಸ್ತಾಂತರ ಆಗಬೇಕು ಎಂಬುದು ಪಕ್ಷದ ಬಹುತೇಕ ನಾಯಕರ ನಿಲುವು. ಚುನಾವಣಾ ಪ್ರಕ್ರಿಯೆ ಆರಂಭವಾದ ಬಳಿಕ ರಾಹುಲ್ ಅವರು ನಿಲುವನ್ನು ಬದಲಿಸಬಹುದು ಎಂಬ ವಿಶ್ವಾಸದಲ್ಲಿ ಹಲವು ನಾಯಕರು ಇದ್ದಾರೆ.

ಪಕ್ಷದೊಳಗೆ ಬಹುದೊಡ್ಡ ನಿರೀಕ್ಷೆ ಹುಟ್ಟು ಹಾಕಿರುವ ‘ಭಾರತ್ ಜೋಡೋ’ ಯಾತ್ರೆಗೆ ಕನ್ಯಾಕುಮಾರಿಯಲ್ಲಿ ಸೆಪ್ಟೆಂಬರ್ 7ಕ್ಕೆ ಚಾಲನೆ ಸಿಗಲಿದೆ. ಇದರಲ್ಲಿ ರಾಹುಲ್ ಗಾಂಧಿ ಹಾಗೂ ಹಿರಿಯ ನಾಯಕರು ಪಾಲ್ಗೊಳ್ಳಲಿದ್ದಾರೆ.

ಷೇರುಪೇಟೆ ವಹಿವಾಟು

▲ 515



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,535
ಇಂದಿನ ಅಂತ್ಯ	17,659
▲	124
ದಿನದ ಗರಿಷ್ಠ	17,719

ವಿನಿಮಯ ದರ

$ ಡಾಲರ್	79.62
£ ಪೌಂಡ್	96.68
€ ಯುರೊ	81.56
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹420
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹420

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹207-600
ದ್ವಿತಳಿ (ಬಿ.ವಿ) ₹263-768

ಕೇಂದ್ರ ಹಣಕಾಸು ಸಚಿವಾಲಯದಿಂದ ಹೊಸ ಅಧಿಸೂಚನೆ • ಅಕ್ಟೋಬರ್ 1ರಿಂದ ಜಾರಿ

ತೆರಿಗೆದಾರರಿಗೆ ‘ಅಟಲ್ ಪಿಂಚಣಿ’ ಇಲ್ಲ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಪಾವತಿ ಮಾಡುವವರು ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆ ‘ಅಟಲ್ ಪಿಂಚಣಿ ಯೋಜನೆ’ಯ (ಎಪಿವೈ) ಅಡಿ ಹೆಸರು ನೋಂದಾಯಿಸಿಕೊಳ್ಳಲು ಅಕ್ಟೋಬರ್ 1ರಿಂದ ಅವಕಾಶ ಇಲ್ಲ.

ಕೇಂದ್ರ ಸರ್ಕಾರವು 2015ರ ಜೂನ್ 1ರಂದು ಅಟಲ್ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶವು ಈ ಯೋಜನೆಗೆ ಇದೆ. ಈ ಯೋಜನೆಯ ಅಡಿ

ಮುಖ್ಯಾಂಶಗಳು

- ಅಕ್ಟೋಬರ್ 1ಕ್ಕೂ ಮೊದಲು ನೋಂದಾಯಿಸಿಕೊಂಡವರಿಗೆ ವಿನಾಯಿತಿ
- ಸ್ಥಗಿತ ಆಗಲಿದೆ ತೆರಿಗೆ ಪಾವತಿದಾರರ ಎಪಿವೈ ಖಾತೆ

ನೋಂದಾಯಿತ ಆದವರು 60 ವರ್ಷ ವಯಸ್ಸಾದ ನಂತರದಲ್ಲಿ ತಿಂಗಳಿಗೆ ಕನಿಷ್ಠ ₹ 1 ಸಾವಿರದಿಂದ ಗರಿಷ್ಠ ₹ 5 ಸಾವಿರದವರೆಗೆ ಪಿಂಚಣಿ ಪಡೆಯುತ್ತಾರೆ.

ಹೆಸರು ನೋಂದಾಯಿಸಿಕೊಂಡವರು ಕಟ್ಟುವ ಮೊತ್ತಕ್ಕೆ ಅನುಗುಣವಾಗಿ ಪಿಂಚಣಿ ಸಿಗುತ್ತದೆ.

‘ಆದಾಯ ತೆರಿಗೆ ಪಾವತಿ ಮಾಡುತ್ತಿರುವವರು ಅಥವಾ ಹಿಂದೆ ಪಾವತಿ ಮಾಡಿದ್ದವರು ಈ ಯೋಜನೆಗೆ ಸೇರ್ಪಡೆಗೊಳ್ಳಲು ಅಕ್ಟೋಬರ್ 1ರಿಂದ ಅವಕಾಶ ಇಲ್ಲ’ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಧಿಸೂಚನೆ ತಿಳಿಸಿದೆ.

ಈಗಾಗಲೇ ಯೋಜನೆಯ ಅಡಿ ನೋಂದಾಯಿಸಿಕೊಂಡವರಿಗೆ ಅಥವಾ ಅಕ್ಟೋಬರ್ 1ಕ್ಕೆ ಮೊದಲು ನೋಂದಣಿ ಮಾಡಿಸಿಕೊಳ್ಳುವವರಿಗೆ ಈ ನಿರ್ಬಂಧ ಅನ್ವಯವಾಗುವುದಿಲ್ಲ.

ಅಕ್ಟೋಬರ್ 1 ಅಥವಾ ಅದರ ನಂತರ ಯೋಜನೆಯ ಅಡಿ ಹೆಸರು ನೋಂದಾಯಿಸಿಕೊಂಡ ವ್ಯಕ್ತಿಯು ಈ ಹಿಂದೆ ಆದಾಯ ತೆರಿಗೆ ಪಾವತಿ ಮಾಡಿದ್ದು ಕಂಡುಬಂದಲ್ಲಿ ಆ ವ್ಯಕ್ತಿಯ ಎಪಿವೈ ಖಾತೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಅದುವರೆಗೆ ಆ ವ್ಯಕ್ತಿ ಎಪಿವೈ ಅಡಿ ಜಮಾ ಮಾಡಿದ್ದ ಮೊತ್ತವನ್ನು ಹಿಂದಿರುಗಿಸಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಈಗಿರುವ ನಿಯಮಗಳ ಪ್ರಕಾರ 18 ವರ್ಷ ಮೇಲ್ಪಟ್ಟ ಹಾಗೂ 40 ವರ್ಷ ವಯಸ್ಸಿನ ಒಳಗಿನ ಭಾರತೀಯ ಪ್ರಜೆ ಬ್ಯಾಂಕ್ ಶಾಖೆ ಅಥವಾ ಅಂಚೆ ಕಚೇರಿ ಮೂಲಕ ಎಪಿವೈ ಅಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಅದಕ್ಕೂ ಮೊದಲು ಆ ವ್ಯಕ್ತಿ ಆ ಶಾಖೆಯಲ್ಲಿ ಉಳಿತಾಯ ಖಾತೆ ತೆರೆಯಬೇಕು.

ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ 99 ಲಕ್ಷಕ್ಕೂ ಹೆಚ್ಚು ಮಂದಿ ಎಪಿವೈ ಅಡಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಯೋಜನೆಯ ಅಡಿ ನೋಂದಾಯಿಸಿಕೊಂಡವರ ಒಟ್ಟು ಸಂಖ್ಯೆ 4.01 ಕೋಟಿ ಆಗಿದೆ.

ಮತ್ತೆ 59 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಗುರುವಾರ 515 ಅಂಶ ಏರಿಕೆ ಕಂಡು ಮತ್ತೆ 59 ಸಾವಿರದ ಮಟ್ಟವನ್ನು ದಾಟಿತು.

ವಿದೇಶಿ ಬಂಡವಾಳ ಒಳಹರಿವು ಮುಂದುವರಿದಿದೆ. ಇದರ ಜೊತೆಗೆ ಹೂಡಿಕೆದಾರರು ಐ.ಟಿ, ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿರುವುದು ಸೂಚ್ಯಂಕದ ಏರಿಕೆಗೆ ಕಾರಣವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 124 ಅಂಶ ಹೆಚ್ಚಾಗಿ 17,659 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಎಕ್ಸಿಸ್ ಬ್ಯಾಂಕ್ ಷೇರು ಶೇ 2.75ರಷ್ಟು ಗರಿಷ್ಠ ಏರಿಕೆ ಕಂಡಿತು. ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ, ಟೆಕ್ ಮಹೀಂದ್ರ, ವಿಪ್ರೊ, ಎಸ್‌ಬಿಐ, ಟಿಸಿಎಸ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಷೇರುಗಳ ಮೌಲ್ಯವೂ ಹೆಚ್ಚಾಯಿತು. ಇನ್ನೊಂದೆಡೆ, ಐಟಿಸಿ, ಎನ್‌ಟಿಪಿಸಿ, ಭಾರ್ತಿ ಏರ್‌ಟೆಲ್, ಎಚ್‌ಯುಎಲ್, ಮಾರುತಿ ಮತ್ತು ನೆಸ್ಲೆ ಇಂಡಿಯಾ ಷೇರುಗಳು ಶೇ 1.56ರವರೆಗೆ ಇಳಿಕೆ ಕಂಡವು.

ಏಷ್ಯಾದಲ್ಲಿ ಹಾಂಗ್‌ಕಾಂಗ್, ಶಾಂಘೈ ಮತ್ತು ಸೋಲ್ ಷೇರುಪೇಟೆಗಳು ಗಳಿಕೆ ಕಂಡವು. ಆದರೆ, ಟೋಕಿಯೊ ಷೇರುಪೇಟೆ ನಷ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು.

ಅಮೆರಿಕದ ಷೇರುಪೇಟೆ ಮತ್ತು ಏಷ್ಯಾದ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟಿನಿಂದಾಗಿ ದೇಶಿ ಷೇರುಪೇಟೆಗಳ ಸೂಚ್ಯಂಕಗಳು ಏರಿಕೆ ಕಂಡವು ಎಂದು ವರ್ತಕರು ಹೇಳಿದ್ದಾರೆ.

ಅಮೆರಿಕದ ಜುಲೈ ತಿಂಗಳ ಹಣದುಬ್ಬರವು ಅಂದಾಜಿಗಿಂತಲೂ ಕಡಿಮೆ ಇದೆ. ಹೀಗಾಗಿ ಫೆಡರಲ್ ರಿಸರ್ವ್ ಮುಂದಿನ ಸಭೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡಲಾರದು ಎನ್ನುವ ನಿರೀಕ್ಷೆ ವ್ಯಕ್ತವಾಗಿದೆ. ಇದು ಹೂಡಿಕೆದಾರರಲ್ಲಿ ಸಕಾರಾತ್ಮಕ ಭಾವನೆ ಮೂಡುವಂತೆ ಮಾಡಿತು. ಈ ಅಂಶವು ಭಾರತವನ್ನೂ ಒಳಗೊಂಡು ಏಷ್ಯಾದ ಮಾರುಕಟ್ಟೆಗಳ ಮೇಲೆಯೂ ಪ್ರಭಾವ ಬೀರಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಚಿನ್ನದ ದರ ₹ 347ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿತು.

ಚಿನ್ನದ ದರ 10 ಗ್ರಾಂಗೆ ₹347ರಷ್ಟು ಇಳಿಕೆ ಕಂಡು ₹52,709ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 455ರಷ್ಟು ಇಳಿಕೆ ಕಂಡು ₹ 59,103ರಂತೆ ಮಾರಾಟವಾಯಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	46000-56000
ಕುಮಟ	
ಚಿಪ್ಪು	26399-33869
ಕೋಕ	21099-32411
ಪುತ್ತೂರು	
ಹೊಸತು	33000-46000
ಸಾಗರ	
ಬಿಳಿಗೋಟು	24229-32369
ಚಾಲಿ	34215-38599
ಕೋಕ	24110-36599
ಕೆಂಪುಗೋಟು	33199-38599
ರಾಶಿ	38199-51519
ಸಿಪ್ಪೆಗೋಟು	12110-22159
ಶಿವಮೊಗ್ಗ	
ಬೆಟ್ಟೆ	52200-54609
ಗೊರಬಲು	21019-38889
ರಾಶಿ	47500-52096
ಸರಕು	60089-81010

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15800	15700	220.45 ಸೆಂಟ್ಸ್
ಎಸಿ	---	8400	8750	
ಆರ್‌ಪಿ	---	9500	9750	ಲಂಡನ್
ಆರ್‌ಸಿ	---	4500	4625	2145 ಡಾಲರ್ಸ್

ಸ್ವಯಂ ನಿಯಂತ್ರಣ: ಗೂಗಲ್ ಅಸಮ್ಮತಿ

ನವದೆಹಲಿ (ರಾಯಿಟರ್ಸ್): ದೇಶದ ಸಾಮಾಜಿಕ ಜಾಲತಾಣಗಳಿಗೆ ಅನ್ವಯವಾಗುವ ಸ್ವಯಂ ನಿಯಂತ್ರಣ ವ್ಯವಸ್ಥೆ ರಚಿಸುವುದಕ್ಕೆ ಗೂಗಲ್ ಅಸಮ್ಮತಿ ಸೂಚಿಸಿದೆ. ಆದರೆ ಈ ಪ್ರಸ್ತಾವಕ್ಕೆ ಫೇಸ್‌ಬುಕ್, ಟ್ವಿಟರ್ ಬೆಂಬಲ ವ್ಯಕ್ತಪಡಿಸಿವೆ.

ಸಾಮಾಜಿಕ ಜಾಲತಾಣಗಳಲ್ಲಿನ ವಸ್ತು–ವಿಷಯಗಳ ಬಗ್ಗೆ ಬಳಕೆದಾರರಿಂದ ಬರುವ ದೂರುಗಳನ್ನು ಆಲಿಸಲು ಸರ್ಕಾರಿ ವ್ಯವಸ್ಥೆಯೊಂದನ್ನು ರೂಪಿಸುವ ಬಗ್ಗೆ ಕೇಂದ್ರ ಸರ್ಕಾರವು ಜೂನ್ ತಿಂಗಳಲ್ಲಿ ಪ್ರಸ್ತಾವ ಸಿದ್ಧಪಡಿಸಿತ್ತು. ಸಾಮಾಜಿಕ ಜಾಲತಾಣ ಕಂಪನಿಗಳು ತಾವೇ ಮುಂದಾಗಿ ಸ್ವಯಂ ನಿಯಂತ್ರಣ ಜಾರಿಗೆ ತರುವುದಾದಲ್ಲಿ ಅದಕ್ಕೆ ತಾನು ಮುಕ್ತವಾಗಿರುವುದಾಗಿ ಹೇಳಿತ್ತು.

ಕಳೆದ ವಾರ ನಡೆದ ಸಭೆಯಲ್ಲಿ ಗೂಗಲ್ ಪ್ರತಿನಿಧಿಯು, ಸ್ವಯಂ ನಿಯಂತ್ರಣ ವ್ಯವಸ್ಥೆಯ ಬಗ್ಗೆ ತಮ್ಮ ಕಂಪನಿಗೆ ಸಮಾಧಾನ ಇಲ್ಲ ಎಂದು ಹೇಳಿರುವುದಾಗಿ ಗೊತ್ತಾಗಿದೆ. ಸ್ವಯಂ ನಿಯಂತ್ರಣ ವ್ಯವಸ್ಥೆಯಲ್ಲಿ ಬಾಹ್ಯ ವ್ಯಕ್ತಿಗಳು ಇರುತ್ತಾರೆ. ಆಗ ತಾನು ತನ್ನ ನಿಯಮಗಳಿಗೆ ವಿರುದ್ಧವಾದ ವಸ್ತು–ವಿಷಯಗಳನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದರೂ, ಅದನ್ನು ಮರುಪ್ರಕಟಿಸುವಂತೆ ಸ್ವಯಂ ನಿಯಂತ್ರಣ ವ್ಯವಸ್ಥೆಯು ಒತ್ತಡ ತರಬಹುದು ಎಂಬ ಆಕ್ಷೇಪವನ್ನು ಗೂಗಲ್ ವ್ಯಕ್ತಪಡಿಸಿದೆ.

ಸ್ವಯಂ ನಿಯಂತ್ರಣ ವ್ಯವಸ್ಥೆಯು ಈ ಬಗೆಯಲ್ಲಿ ಒತ್ತಡ ತರಲು ಶುರುಮಾಡಿದರೆ, ಅದು ಅಪಾಯಕಾರಿ ಪೂರ್ವನಿದರ್ಶನ ಆಗಬಹುದು ಎಂದು ಪ್ರತಿನಿಧಿ ಆತಂಕ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102. ದೂ. : (08472) – 256767, 239556, 255564 ಫ್ಯಾಕ್ಸ್ : (08472) 227527, E-mail : hkadbgulb@gmail.com, Website : hkrdb.kar.nic.in

No. KKRDB/Tech/211/2022-23 ದಿನಾಂಕ:10–08–2022.

ಅಲ್ಪಾವಧಿ ಟೆಂಡರ ಪ್ರಕಟಣೆ

1) ಕಾಮಗಾರಿಯ ಹೆಸರು: “Appointment of Consultant for strategic projects planning and development support and Transaction Advisory services to KKRDB”, 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ : **10/08/2022,** 5) ಕ್ಯಾರೀಸ್ ಸಲ್ಲಿಸುವ ದಿನಾಂಕ : **16/08/2022 ಮಧ್ಯಾಹ್ನ 17:00 ವರೆಗೆ,** 6) ಪ್ರಿ–ಬಿಡ್ ಸಭೆ ದಿನಾಂಕ : **17/08/2022 ಬೆಳಿಗ್ಗೆ 11:30 ವರೆಗೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **25/08/2022 ಮಧ್ಯಾಹ್ನ 16:00 ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26/08/2022 ಮಧ್ಯಾಹ್ನ 16:30 ಗೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **29/08/2022 ಬೆಳಿಗ್ಗೆ 11:30 ಗೆ,** 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ.ಮೊತ್ತ: ರೂ. 2,00,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ: https://eproc.karnataka.gov.in, 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/491/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/2022–23/2265 ದಿನಾಂಕ: 10–08–2022.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	KPWD/2022-23/RD/WORK_INDENT154118	117.42
2)	KPWD/2022-23/BR/WORK_INDENT155183	250.00
3)	KPWD/2022-23/RD/WORK_INDENT155324	114.28
4)	KPWD/2022-23/RD/WORK_INDENT154816	104.15

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಕ್ರಮ ಸಂ.(1)ರ ಕಾಮಗಾರಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ: **17–08–2022 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **20–07–2022 ರಂದು 12.00 ಗಂಟೆಯ ವರೆಗೆ.** ಇ) ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **25–08–2022 ರಂದು 16.00 ಗಂಟೆಯ ವರೆಗೆ.** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **26–08–2022 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/347/ಎಂಸಿಎ/2022–23

ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ಕಛೇರಿ

(ಐ.ಎಂ.ಎ ಹಾಗೂ ಇತರೆ ಕೆ.ಪಿ.ಐ.ಡಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001

ಸ್ಥಿರ ಮತ್ತು ಚರಾಸ್ತಿಗಳ ಇ–ಹರಾಜು ಪ್ರಕಟಣೆ

ಈ ಕೆಳಕಂಡ ಸ್ವತ್ತುಗಳನ್ನು ಕರ್ನಾಟಕ ಸರ್ಕಾರವು ಕರ್ನಾಟಕ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004ರ ಅಡಿಯಲ್ಲಿ ಜಪ್ತಿ ಮಾಡಿದ್ದು, ತದನಂತರ ಮಾನ್ಯ ವಿಶೇಷ ನ್ಯಾಯಾಲಯದ ಮುಂದೆ ವಿವಿಧ ಪ್ರಕರಣಗಳಲ್ಲಿ ನಿರುಪಾಧಿಕಗೊಳಿಸಲಾಗಿರುತ್ತದೆ.ಸ್ಥಿರ ಸ್ವತ್ತುಗಳನ್ನು ಆನ್ ಲೈನ್ ಮೂಲಕ **‘ಎಲ್ಲಿ ಹೇಗಿವೆಯೋ ಹಾಗೆ ಮತ್ತು ಅದೇ ಸ್ಥಿತಿ’ಯಲ್ಲಿ** ಹರಾಜು ಮಾಡುವ ಪ್ರಕ್ರಿಯೆಯಲ್ಲಿ ನೆರವಾಗಲು ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ (ಐ.ಎಂ.ಎ & ಇತರೆ ಕೆ.ಪಿ.ಐ.ಡಿ ಪ್ರಕರಣಗಳು) ರವರು ಮೆ: ಕ್ವಿಕರ್ ರಿಯಾಲ್ಟಿ ಲಿ.(ಹಿಂದೆ ಹೆಚ್.ಡಿ.ಎಫ್.ಸಿ ರಿಯಾಲ್ಟಿ) ರವರನ್ನು ನೇಮಕ ಮಾಡಿರುತ್ತಾರೆ. ಚರ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮೆ: ಎಂ.ಎಸ್.ಟಿ.ಸಿ. ರವರನ್ನು ನೇಮಕ ಮಾಡಿರುತ್ತಾರೆ. ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ (ಐ.ಎಂ.ಎ & ಇತರೆ ಕೆ.ಪಿ.ಐ.ಡಿ ಪ್ರಕರಣಗಳು) ಆಸಕ್ತ ಬಿಡ್ಡುದಾರರಿಂದ ಬಿಡ್ಡುಗಳನ್ನು ಆಹ್ವಾನಿಸಿದ್ದು, ಆಸಕ್ತ ಬಿಡ್ಡುದಾರರು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿಯೊಂದು ಸ್ವತ್ತಿಗೆ ಸಂಬಂಧಪಟ್ಟಂತೆ ಬಿಡ್ ಠೇವಣಿಯನ್ನು ಮುಂಗಡವಾಗಿ EFT/ NEFT/RTGS/DD ಮೂಲಕ ಪಾವತಿಸಬೇಕಾಗಿರುತ್ತದೆ.

ಸ್ಥಿರ ಆಸ್ತಿ	ಇಎಂಡಿ (ರೂ.)
ಸೈಟ್– ನಂ.38 ಮತ್ತು 39, PID ಸಂಖ್ಯೆ 76–35–38 ಮತ್ತು 76–35– 39, ಸರ್ಪೆಂಟೈನ್ ಸ್ಟ್ರೀಟ್, ರಿಚ್ಮಂಡ್ ಟೌನ್, ಬೆಂಗಳೂರು ಒಟ್ಟು 14924 ಚ.ಅಡಿಗಳು	2,41,76,880/–
ದೊಡ್ಡಬಾತಿ ಗ್ರಾಮದ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇಲ್ಲಿ ಸರ್ವೆ ನಂ 98/2, 05 ಎಕರೆ 20 ಗುಂಟೆ	19,65,700/–
ಸೈಟ್– ನಂ. 20 & 20/1, ಹಳೆ ನಂ 20/1, ಡೇವಿಸ್ ರಸ್ತೆ, ರಿಚರ್ಡ್ಸ್ ಟೌನ್, ಬೆಂಗಳೂರು–84. PID ನಂ.86–29–20 & 86–29– 20/1 ಒಟ್ಟು 14461 ಚ.ಅಡಿಗಳು	2,36,43,735/–
ಮಾದಿನಾಯಕಹಳ್ಳಿ ಗ್ರಾಮ, ಮಂಡಿಕಲ್ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು ನಲ್ಲಿ ಒಟ್ಟು 21–40 ಎಕರೆ ಜಮೀನು.	53,64,980/–
ಖಾಲಿ ನಿವೇಶನ ನಂ 23/3, ವಿಸ್ತೀರ್ಣ 0–22.08 ಗುಂಟೆ ಮಾದಿನಾಯಕಹಳ್ಳಿ ಗ್ರಾಮ, ಮಂಡಿಕಲ್ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು.	1,26,716/–
ಖಾಲಿ ಸೈಟ್ ನಂ.403, ಹಳೆಯ ಖಾತಾ ಸಂಖ್ಯೆ. 503/165C ಹೊಸ ಖಾತಾ ಸಂಖ್ಯೆ. 33–3–13–3638 ಹಾಸನ ನಗರ, ತಣ್ಣೀರಹಳ್ಳ ವೃತ್ತ, ತಣ್ಣೀರುಹಳ್ಳ ಕ್ರಾಸ್ ರಸ್ತೆ, ಹಾಸನ. ಒಟ್ಟು 928.6070 ಚ.ಮೀ (9996 ಚ.ಅಡಿ)	35,98,560/–
ಖಾಲಿ ನಿವೇಶನ ಸಂಖ್ಯೆ. 404, ಹಳೆಯ ಖಾತೆ ಸಂಖ್ಯೆ. 503/165B ವಾರ್ಡ್ ನಂ.33 ಹೊಸ ಖಾತಾ ಸಂಖ್ಯೆ. 33 03–13–363A ಹಾಸನ ನಗರ, ತಣ್ಣೀರುಹಳ್ಳ ವೃತ್ತ, ತಣ್ಣೀರುಹಳ್ಳ ಮುಖ್ಯ ರಸ್ತೆ, ಒಟ್ಟು 654.04 ಚ.ಮೀ	29,92,000/–
ಹಾಸನ ಖಾಲಿ ನಿವೇಶನ ಹೊಂದಿರುವ ಸಂಖ್ಯೆ 405, ಹಳೆಯ ಖಾತೆ ಸಂಖ್ಯೆ 503/165D ವಾರ್ಡ್ ಸಂಖ್ಯೆ 33 ಹೊಸ ಖಾತೆ ಸಂಖ್ಯೆ 33 03–13–365ಎ ಹಾಸನ ನಗರ, ತಣ್ಣೀರು ವೃತ್ತ, ತಣ್ಣೀರುಹಳ್ಳ ಮುಖ್ಯ ರಸ್ತೆ, ಹಾಸನ ಒಟ್ಟು 290.6018 ಚ.ಮೀ (3128 ಚ.ಅಡಿ)	10,00,960/–
ದಾವಣಗೆರೆ ಗ್ರಾಮದ ನಂ.146/7 ರಲ್ಲಿ ಒಟ್ಟು 0–20 ಗುಂಟೆ ಭೂಪರಿವರ್ತಿತ ಜಮೀನು, ಪ್ರಸ್ತುತ 1531/ಎ,ದೊಡ್ಡಬೂದಿಹಾಳ ವಿಭಾಗ, ದಾವಣಗೆರೆ ಒಟ್ಟು 10345.75 ಚ.ಅಡಿ.	16,55,320/–
ಅಪಾರ್ಟ್ಮೆಂಟ್ ನಂ. 1, PID No: 62–81–1, 3ನೇ ಕ್ರಾಸ್, ಜಯನಗರ,ಚಂಗಯ್ಯ ಕಾಂಪೋಂಡ್, ಕೃಷ್ಣನಗರ, ವಾರ್ಡ್ ನಂ 153(62) ಹೊಂಬೇಗೌಡ ನಗರ, ಬೆಂಗಳೂರು	14,92,400/–
ಚರಾಸ್ತಿ: ಪೀಠೋಪಕರಣಗಳು ಮತ್ತು ಫಿಕ್ಚರ್‌ಗಳು, ಎಲೆಕ್ಟ್ರಾನಿಕ್ಸ್ ಮತ್ತು ಇನ್ನಷ್ಟು	6,58,985/–

ವಾಹನಗಳು : ಜಾಗ್ವಾರ್ (EMD–58,540) ರೇಂಜ್ ರೋವರ್ (EMD–3,74,500) ಸ್ಕೂಲ್ ಬಸ್ (EMD–39,100) ಟೊಯೋಟಾ ಫಾರ್ಚೂನರ್ (EMD–59,050) ಹೊಂಡೈ ಕ್ರೆಟಾ (EMD–52,000)

(1) ಮೊಹರು ಮಾಡಿದ ಬಿಡ್‌ಗಳು ಮತ್ತು EMD ಸಲ್ಲಿಕೆಯ ವಿವರ: ಕೊನೆಯ ದಿನಾಂಕ ಆಗಸ್ಟ್ 18, 2022 ರ ಸಂಜೆ 5 ಗಂಟೆಯವರೆಗೆ.

(2) ಇ–ಹರಾಜಿನ ದಿನಾಂಕ : ಆಗಸ್ಟ್ 19, 2022 ಬೆಳಿಗ್ಗೆ 10:00 ಯಿಂದ ಸಂಜೆ 5:00 ಗಂಟೆಯವರೆಗೆ.

ಸ್ಥಿರಾಸ್ತಿಗಳನ್ನು ಹರಾಜು ಮಾಡಲು ಉದ್ದೇಶಿಸಿರುವ ಸ್ವತ್ತುಗಳ ಪೂರ್ಣ ವಿವರ, ಇ.ಎಂ.ಡಿ ಪಾವತಿ, ಪರಿವೀಕ್ಷಣಾ ದಿನಾಂಕ, ಹರಾಜಿನ ಸಮಯ, ಮಾನ್ಯ ನ್ಯಾಯಾಲಯದ ಆದೇಶದ ವಿವರಗಳು, ಮುಂತಾದವುಗಳೂ ಕ್ವಿಕರ ರಿಯಾಲ್ಟಿ ಸಂಸ್ಥೆಯ ವೆಬ್‌ಸೈಟ್: **http://www.quikrrealty.com/e-auction** ಲಿಂಕಿನಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಹರಾಜಿನಲ್ಲಿ ಭಾಗವಹಿಸಲು ಮತ್ತು ಇ.ಎಂ.ಡಿ ಹಣ ಪಾವತಿಸಲು **www.eproc.karnataka.gov.in** ಜಾಲ ತಾಣಕ್ಕೆ ಲಾಗಿನ್ ಮಾಡಬಹುದಾಗಿದೆ. ನೆರವಿನ ಅವಶ್ಯಕತೆ ಬಯಸುವ ಆಸಕ್ತ ಬಿಡ್ಡುದಾರು ಕ್ವಿಕರ್ ರಿಯಾಲ್ಟಿ ಲಿಮಿಟೆಡ್, ಗುಂಟಾ ನಂ. 106, ಡಾ॥ ಎಸ್.ಆರ್.ಕೆ. ನಗರ ಪೋಸ್ಟ್, ರಾಚೇನಹಳ್ಳಿ ಮೈನ್ ರೋಡ್, ಥಣಿಸಂದ್ರ ಬೆಂಗಳೂರು. ಇ–ಮೇಲ್ : **auction@quikrrealty.com** ಅಥವಾ 9321575329, 9513795034 ದೂರವಾಣಿಯನ್ನು ಸಂಪರ್ಕಿಸಬಹುದು.

ಚರಾಸ್ತಿಗಳು ಹಾಗೂ ವಾಹನಗಳನ್ನು ಹರಾಜು ಮಾಡಲು ಉದ್ದೇಶಿಸಿರುವ ಸ್ವತ್ತುಗಳ ಪೂರ್ಣ ವಿವರ, ಇ.ಎಂ.ಡಿ ಪಾವತಿ, ಪರಿವೀಕ್ಷಣಾ ದಿನಾಂಕ, ಹರಾಜಿನ ಸಮಯ, ಮಾನ್ಯ ನ್ಯಾಯಾಲಯದ ಆದೇಶದ ವಿವರಗಳು, ಮುಂತಾದವುಗಳನ್ನು **http://mstcindia.co.in** ಜಾಲ ತಾಣಕ್ಕೆ ಲಾಗಿನ್ ಮಾಡಬಹುದಾಗಿದೆ. ನೆರವಿನ ಅವಶ್ಯಕತೆ ಬಯಸುವ ಆಸಕ್ತ ಬಿಡ್ಡುದಾರು ಎಂ.ಎಸ್.ಟಿ.ಸಿ ಲಿಮಿಟೆಡ್, ನಂ.19/5, 19/6, 3ನೇ ಮಹಡಿ, ಕರೀಂ ಟವರ್, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು, ಇ–ಮೇಲ್ : **tejasv@mstcindiaa.co.in** ಅಥವಾ 080–22260054, 22266471, 9980147110 ದೂರವಾಣಿಯನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 11/08/2022
ವಾಸಾಸಂಇ/ವಾ.ಪ್ರ/1775/ಶ್ರೇಷ್ಠ/2022–23

ಸಹಿ/–
ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಹಾಗೂ ಕೆ.ಪಿ.ಐ.ಡಿ ಪ್ರಕರಣಗಳು ಬೆಂಗಳೂರು

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಡಾಲರ್ ಇಂಡಸ್ಟ್ರೀಸ್ ವರಮಾನ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲರ್ ಇಂಡಸ್ಟ್ರೀಸ್ ಲಿಮಿಟೆಡ್ ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 363.99 ಕೋಟಿ ವರಮಾನ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 205.49 ಕೋಟಿ ವರಮಾನ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವರಮಾನದಲ್ಲಿ ಶೇಕಡ 77.13ರಷ್ಟು ಬೆಳವಣಿಗೆ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ತೆರಿಗೆ ನಂತರದ ಲಾಭವು ಶೇ 7.66ರಷ್ಟು ಹೆಚ್ಚಾಗಿ ₹ 27.87 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ತೆರಿಗೆ ನಂತರದ ಲಾಭವು ₹ 23.11 ಕೋಟಿ ಇತ್ತು ಎಂದು ಮಾಹಿತಿ ನೀಡಿದೆ.

‘ವರಮಾನ ಮತ್ತು ಬೆಳವಣಿಗೆ ಪ್ರಮಾಣದ ದೃಷ್ಟಿಯಿಂದ ಕಂಪನಿಯು ಉತ್ತಮ ಸಾಧನೆ ಮಾಡಿದೆ ಎನ್ನುವುದನ್ನು ಮೊದಲ ತ್ರೈಮಾಸಿಕದ ಅಂಕಿ–ಅಂಶಗಳು ಸೂಚಿಸುತ್ತಿವೆ’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಕುಮಾರ್ ಗುಪ್ತಾ ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹165
ಆರ್‌ಎಸ್‌ಎಸ್-5	₹155
ಗುಡ್ ಲಾಟ್	₹147

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

11–8–2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1230 (1235)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,150 (52,200)
ಬೆಳ್ಳಿ ಕೆ.ಜಿ 58,600 (58,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೆರೆಯ ಮೇಲೆ ಯೋಗರಾಜ್ ಭಟ್ ಹಾಗೂ ಗಣೇಶ್ ಅವರ ಕಾಂಬಿನೇಷನ್ ಮತ್ತೆ ಒಂದಾಗುತ್ತಿದೆ. 'ಗಣಿ'ಯಾಗಿ ತೆರೆಯ ಮೇಲೆ ಮಿಂಚಿದ್ದ ಗಣೇಶ್ ಮೊದಲ ಗಾಳಿಪಟದ ನೆನಪನ್ನು ಮೆಲುಕು ಹಾಕುತ್ತಾ ಹೊಸ ಗಾಳಿಪಟವನ್ನು ಹಾರಿಸಲು ಸಜ್ಜಾಗಿದ್ದಾರೆ...

ಭಟ್ರ ಜೊತೆ ಗಣಪ ಗೆದ್ದಿದ್ದಾನೆ!

ಗಾಳಿಪಟ–2
ಗಣೇಶ್

ಸಂದರ್ಶನದ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಅಭಿಲಾಷ್ ಪಿ.ಎಸ್.

• 'ಗಾಳಿಪಟ' ಅಷ್ಟು ಎತ್ತರಕ್ಕೆ ಹಾರುತ್ತದೆ ಎನ್ನುವ ಸುಳಿವಿತ್ತೇ?

ನನ್ನ ಹಾಗೂ ಯೋಗರಾಜ್ ಭಟ್ ಅವರ ಎರಡನೇ ಪ್ರೊಜೆಕ್ಟ್ 'ಗಾಳಿಪಟ'. ನಮ್ಮ ಮೊದಲ ಪ್ರೊಜೆಕ್ಟ್ 'ಮುಂಗಾರು ಮಳೆ' ಬಿಡುಗಡೆಯಾದ ನಂತರ ಆ ಮಟ್ಟಿಗೆ ಮಳೆ (ಯಶಸ್ಸು) ಸುರಿಯುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಆ ಮಳೆ ನಿಂತ ನಂತರ 'ಗಾಳಿಪಟ' ಹಾರಿಸುವ ಮನಸ್ಸಾಯಿತು. ಪ್ರೀತಿಯ ಜೊತೆಗೆ ಗೆಳೆಯರ ಸ್ನೇಹ, ತುಂಟಾಟ, ಭಾವನೆಗಳು ತುಂಬಿದ ಪಯಣವನ್ನು ಹೊತ್ತ ಕಥೆ ಅದಾಗಿತ್ತು. ಕಥಾಹಂದರ ವಿಭಿನ್ನವಾಗಿದೆ ಎನ್ನುವುದು ನನ್ನನ್ನು ಮೊದಲು ಸೆಳೆದ ಅಂಶ. ಚಿತ್ರದ ಕಥೆಯನ್ನು ಮೊದಲು ಭಟ್ರು ಹೆಣೆದರು. ನಂತರ ನಾನು ಸೇರ್ಪಡೆಯಾಗಿದ್ದು. ಗಾಳಿಪಟ–2 ಸಿನಿಮಾವೂ ಇದೇ ರೀತಿಯ ಕಥಾಹಂದರ ಹೊಂದಿದೆ. ಮೊದಲ ಗಾಳಿಪಟದಷ್ಟೇ ಎತ್ತರಕ್ಕೆ ಅಥವಾ ಅದಕ್ಕಿಂತ ಎತ್ತರಕ್ಕೆ ಎರಡನೇ ಭಾಗವೂ ಹಾರುವ, ಯಶಸ್ಸು ಕಾಣುವ ನಿರೀಕ್ಷೆ ಇದೆ.

• ಗಣಪನ ಕೈಹಿಡಿದಾಗಲೆಲ್ಲ ಭಟ್ರು ಗೆದ್ದಿದ್ದಾರೆ ಅಲ್ಲವೇ?

ಅದೂ ಹೌದು. ಜೊತೆಗೆ ನಾನೂ ಭಟ್ರ ಕೈಹಿಡಿದಾಗ ಗೆದ್ದಿದ್ದೇನೆ. ನಾನು ಈ ಹಿಂದೆ ಒಮ್ಮೆ ಹೇಳಿದ್ದೆ, ಕಳೆದ ಜನ್ಮದಲ್ಲಿ ನಾನೂ ಭಟ್ರು ಗಂಡ–ಹೆಂಡ್ತಿ ಆಗಿದ್ದೆವು ಎನಿಸುತ್ತದೆ. ಗಣಗಳು ಆ ಜನ್ಮದಲ್ಲಿ ಕೂಡಿಬಂದಿಲ್ಲ. ಈ ಜನ್ಮದಲ್ಲಿ ರಾಶಿ–ನಕ್ಷತ್ರ ಕೂಡಿಬಂದಿದೆ. ಹೀಗಾಗಿ ಒಳ್ಳೊಳ್ಳೆಯ ಸಿನಿಮಾ ಮಾಡುತ್ತಿದ್ದೇವೆ. ಜನರು ಈ ಸಿನಿಮಾಗಳ ಕೈಹಿಡಿದಿದ್ದಾರೆ. ಪರಸ್ಪರ ಪ್ರೀತಿ, ಗೌರವ, ವಿಶ್ವಾಸವಿದೆ. ನಾವಿಬ್ಬರೂ ಆತ್ಮೀಯರು, ಜೊತೆಗೆ ಒಳ್ಳೆಯ ವಿಮರ್ಶಕರೂ ಹೌದು. ಒಬ್ಬರೊಬ್ಬರು ಕಾಲು ಎಳೆದುಕೊಂಡರೂ ಕೆಲಸದ ವಿಷಯದಲ್ಲಿ ಗಂಭೀರ. 'ಈ ರೀತಿ ನಟನೆ ಮಾಡು ಗಣಪ' ಎಂದು ಭಟ್ರು ಹೇಳಿದರೆ, ನಾನು ಕಣ್ಣುಮುಚ್ಚಿಕೊಂಡು ಅಭಿನಯಿಸುತ್ತೇನೆ. ಏಕೆಂದರೆ ಅವರ ಬರವಣಿಗೆಯ ಮೇಲೆ ನನಗೆ ಅಷ್ಟು ನಂಬಿಕೆ ಇದೆ.

• ಎರಡನೇ ಭಾಗದಲ್ಲಿ ಪಾತ್ರವಷ್ಟೇ ಮುಂದುವರಿದಿದೆಯೇ?

ಹೌದು. ಪಾತ್ರದ ವಿಚಾರ ಬಂದಾಗ ಗಾಳಿಪಟ–2 ಸಿನಿಮಾ ಸರಣಿ. ಅದೇ ಗಣಿ, ಅದೇ ತಿಂಡಿಪೋತ. ಆದರೆ ಇಲ್ಲಿ ಮೊದಲ ಭಾಗದಲ್ಲಿ ಇದ್ದ ಹಾಗೆ ತಿನ್ನುವುದಿಲ್ಲ. ಆದರೆ ಗುಂಡುಗುಂಡಾಗಿದ್ದೇನೆ. ಫ್ಲ್ಯಾಶ್‌ಬ್ಯಾಕ್ ಕಥೆಯಲ್ಲಿ ಕಾಲೇಜು ದಿನಗಳ ಮೆಲುಕಿದೆ. ಹಾಲಿವುಡ್‌ನ ಮಾರ್ವೆಲ್ ಸರಣಿಯಂತೆ ನಮ್ಮ ಈ ಸರಣಿಯಲ್ಲಿ ಅದೇ ಪಾತ್ರಗಳಿವೆ, ಆದರೆ ಕಥೆ ಬೇರೆ. ಕಥೆಯ ವಿಚಾರಕ್ಕೆ ಬಂದಾಗ ಮೊದಲ ಹಾಗೂ ಎರಡನೇ ಭಾಗಕ್ಕೆ ಯಾವುದೇ ಸಂಬಂಧ ಇಲ್ಲ.

ಚಿತ್ರದಲ್ಲಿ ನಾನು ಶಾಸಕ 'ಬೈರೇಗೌಡ' ಅವರ ಮಗ. ತಾಯಿ 'ಕುಮುದಾ' ಕಾದಂಬರಿಕಾರ್ತಿ. ಆಕೆಯ ಅಭಿಮಾನಿ ನಾಯಕಿ 'ಶ್ವೇತ'. ಆಕೆಗೆ ಸಾಹಿತ್ಯದ ಬಗ್ಗೆ ತಿಳಿದುಕೊಳ್ಳಬೇಕು ಎನ್ನುವ ಆಸಕ್ತಿ. (ನಗುತ್ತಾ) ನನ್ನೆಲ್ಲ ಸಿನಿಮಾಗಳಂತೆ ನಾಯಕಿಯನ್ನು ನೋಡಿದ ತಕ್ಷಣ ನಾಯಕನಿಗೆ ಪ್ರೀತಿ ಹುಟ್ಟುತ್ತದೆ. ಕಥೆ ಇಲ್ಲಿಂದ ಆರಂಭ.

• ದಶಕ ಕಳೆದ್ರೂ ನಿಮಗೆ ಕನ್ನಡ ಕಲಿಸಲು ಭಟ್ರಿಗೆ ಆಗಲಿಲ್ಲವೇ!?

ನಾನು ಕನ್ನಡವನ್ನು ಚೆನ್ನಾಗಿ ಮಾತನಾಡಬಲ್ಲೆ, ಬರಿಯಬಲ್ಲೆ. ಕನ್ನಡ ಸಾಹಿತ್ಯವನ್ನು ಓದುತ್ತೇನೆ. ಕನ್ನಡದ ಪ್ರಮುಖ ಕಾದಂಬರಿಗಳನ್ನು ಓದಿದ್ದೇನೆ. ಆದರೆ ಭಟ್ರಿಗೆ ನನ್ನ ಮೇಲೆ ಯಾಕೋ ದ್ವೇಷ. 'ಬಡ್ಡಿ ಮಗ ಮಾಡ್ತೀನಿ ಇರು ಇವನಿಗೆ' ಎನ್ನುವ ಹಾಗೆ ಕನ್ನಡ ಬರದೇ ಇರುವ ಪಾತ್ರದಲ್ಲೇ ನನ್ನನ್ನು ಬಿಂಬಿಸುತ್ತಾರೆ. ಮೊದಲನೇ ಭಾಗದಲ್ಲಿ 'ಟ'ಕ್ಕೂ 'ಣ'ಕ್ಕೂ ವ್ಯತ್ಯಾಸ ಗೊತ್ತಿಲ್ಲದ ಗಣಿ, ಎರಡನೇ ಭಾಗದಲ್ಲಿ ದ್ರವ ಪದಾರ್ಥ ಹಾಕಿಕೊಂಡಾಗ 'ರ'ಕ್ಕೂ 'ಲ'ಕ್ಕೂ ವ್ಯತ್ಯಾಸ ಮಾಡಿಕೊಳ್ಳುತ್ತಾನೆ. ಆದರೂ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಹೋಗುವ ಪಾತ್ರ ನನ್ನದು. ನನ್ನ ಮೇಲಿನ ಪ್ರೀತಿಗೆ ಭಟ್ರು ಈ ರೀತಿಯ ಪಾತ್ರವನ್ನು ನನಗೆ ಬರೆಯುತ್ತಾರೆ.

• ಭಟ್ರು–ಕಾಯ್ಕಿಣಿ–ಗಣಪ–ಸೋನು ನಿಗಮ್... ಈ ಕಾಂಬಿನೇಷನ್ ಬಗ್ಗೆ...

ಜಯಂತಣ್ಣ, ಭಟ್ರ ಸಾಹಿತ್ಯಕ್ಕೆ ಮಾರುಹೋಗದವರಾರು. ಅದಕ್ಕೆ ಸೋನು ನಿಗಮ್ ಅವರ ಕಂಠ. ಇದು ನಮಗೂ ಸವಾಲು. ಹಾಡನ್ನು ಮುಗಿಲೆತ್ತರಕ್ಕೆ, ಮನಮುಟ್ಟುವಂತೆ ಬರೆದಾಗ ಅದಕ್ಕೆ ತಕ್ಕ ಹಾಗೆ ನಟಿಸುವುದು ಇದೆಯಲ್ಲ ಅದರಷ್ಟು ಕಷ್ಟ ಬೇರೇನಿಲ್ಲ. ನಟನಾಗಿ ನಾನೇನನ್ನು ಈ ಹಾಡಿಗೆ ನೀಡಬಹುದು ಎನ್ನುವುದೇ ಸವಾಲು. ಸಾಹಿತ್ಯದಲ್ಲಿ ತರ್ಲೆ ಇರುತ್ತದೆ, ತುಂಟತನ ಇರುತ್ತದೆ. ಪ್ರೀತಿಯಲ್ಲಿ ಉನ್ಮಾದದ ಹಾಡುಗಳನ್ನು ನನ್ನ ಎಲ್ಲ ಸಿನಿಮಾಗಳಿಗೆ ಇವರು ನೀಡಿದ್ದಾರೆ. ಈ ವಿಷಯದಲ್ಲಿ ನಾನು ಪುಣ್ಯ ಮಾಡಿದ್ದೇನೆ. ❖

ಮಾಲಾಶ್ರೀ ಪುತ್ರಿ ರಾಧನಾ ಬೆಳ್ಳಿತೆರೆಗೆ

ಸಿನಿಮಾತು
ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಚಂದನವನದ 'ಕನಸಿನ ರಾಣಿ' ನಟಿ ಮಾಲಾಶ್ರೀ ಅವರ ಪುತ್ರಿ ರಾಧನಾ ರಾಮ್ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ನಟ ದರ್ಶನ್ ಅವರ 56ನೇ ಸಿನಿಮಾದಲ್ಲಿ ನಾಯಕಿಯಾಗಿ ರಾಧನಾ ಆಯ್ಕೆಯಾಗಿದ್ದು, ವರಮಹಾಲಕ್ಷ್ಮಿ ಹಬ್ಬದಂದು ಹೊಸ ಸಿನಿಮಾ ಸೆಟ್ಟೇರಿದೆ.

ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ನಿರ್ಮಿಸುತ್ತಿರುವ ಈ ಚಿತ್ರವನ್ನು ತರುಣ್ ಸುಧೀರ್ ನಿರ್ದೇಶಿಸುತ್ತಿದ್ದಾರೆ. ಚಿತ್ರಕ್ಕೆ ಕಥೆ-ಚಿತ್ರಕಥೆಯೂ ಅವರದ್ದೇ. ತರುಣ್ ಹಿಂದಿನ ಚಿತ್ರ 'ರಾಬರ್ಟ್'ನಲ್ಲಿ ಕೆಲಸ ಮಾಡಿದ್ದ ಬಹುತೇಕರು ಹೊಸ ಚಿತ್ರದಲ್ಲೂ ಇರಲಿದ್ದಾರೆ. ಚಿತ್ರದ ಶೀರ್ಷಿಕೆಯನ್ನು ತಂಡ ಶೀಘ್ರದಲ್ಲೇ ಘೋಷಿಸಲಿದ್ದು, ಆಗಸ್ಟ್ 16ರಿಂದ ಚಿತ್ರೀಕರಣ ಆರಂಭವಾಗಲಿದೆ ಎಂದಿದೆ ಚಿತ್ರತಂಡ.

ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿರುವುದರ ಕುರಿತು ಮಾತನಾಡಿದ ರಾಧನಾ, 'ನನಗೆ ಈ ಚಿತ್ರದಲ್ಲಿ ನಟಿಸುವುದಕ್ಕೆ ಬಹಳ ಅನಿರೀಕ್ಷಿತವಾಗಿ ಅವಕಾಶ ಸಿಕ್ಕಿತು. ಎರಡು ವರ್ಷ ತರಬೇತಿ ಪಡೆದು ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದೇನೆ. ಚಿತ್ರಕ್ಕೆ ಸಂಬಂಧಿಸಿದ ಕಾರ್ಯಾಗಾರದಲ್ಲೂ ಭಾಗವಹಿಸುತ್ತಿದ್ದೇನೆ' ಎಂದರು.

'ನನಗೆ ಬದುಕು ಕೊಟ್ಟ ಚಿತ್ರರಂಗಕ್ಕೆ ಈಗ ನನ್ನ ಮಗಳೂ ಕಾಲಿಡುತ್ತಿದ್ದಾಳೆ. ರಾಕ್‌ಲೈನ್ ವೆಂಕಟೇಶ್ ಅವರು ನನ್ನ ಸಿನಿಮಾ ಮೂಲಕ ಚಿತ್ರ ನಿರ್ಮಾಣ ಪ್ರಾರಂಭಿಸಿದರು. ನನ್ನ ಮಗಳೂ ಅವರ ನಿರ್ಮಾಣದ ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾಳೆ. ಅವಳು 14ನೇ ವಯಸ್ಸಿನಲ್ಲೇ ಚಿತ್ರರಂಗಕ್ಕೆ ಬರಬೇಕು, ಅಭಿನಯಿಸಬೇಕು ಎಂಬ ಆಸೆ ಹೊಂದಿದ್ದಳು. ಮುಂಬೈನಲ್ಲಿ ನಟನೆ, ಡ್ಯಾನ್ಸ್ ತರಬೇತಿ ಪಡೆದಿದ್ದಾಳೆ' ಎಂದರು ಮಾಲಾಶ್ರೀ. ಚಿತ್ರಕ್ಕೆ ಸುಧಾಕರ್ ರಾಜ್ ಛಾಯಾಗ್ರಹಣ, ಕೆ.ಎಂ. ಪ್ರಕಾಶ್ ಅವರ ಸಂಕಲನ ಮತ್ತು ಮಾಸ್ತಿ ಅವರ ಸಂಭಾಷಣೆ ಇದೆ. ❖



ಬಿಜೆಪಿ ಶಾಸಕರು, ಸಚಿವರ ವಿರುದ್ಧದ ಪ್ರಕರಣ ವಾಪಸ್?

ಪ್ರಜಾವಾಣಿ ವಾರ್ತೆ

ಲಖನೌ: ಸಚಿವರೊಬ್ಬರ ಮೇಲಿನ ಆರೋಪ ಸಾಬೀತಾಗಿದ್ದು, ಮತ್ತೊಬ್ಬ ಸಚಿವರ ವಿರುದ್ಧ ಜಾಮೀನುರಹಿತ ವಾರಂಟ್ ಜಾರಿಯಾಗುತ್ತಿದ್ದಂತೆಯೇ ಜಾಗೃತವಾಗಿರುವ ಉತ್ತರ ಪ್ರದೇಶ ಸರ್ಕಾರ, ಬಿಜೆಪಿ ಶಾಸಕರು ಹಾಗೂ ಸಚಿವರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಮುಂದಾಗಿದೆ.

ಕಾನೂನು ಇಲಾಖೆಯ ಜೊತೆ ಸಮಾಲೋಚನೆ ನಡೆಸಿದ ಬಳಿಕ ಪ್ರಕರಣಗಳನ್ನು ವಾಪಸ್ ಪಡೆಯುವ ಪ್ರಕ್ರಿಯೆ ಶುರುವಾಗಲಿದೆ ಎಂದು ಮೂಲಗಳು ತಿಳಿಸಿವೆ. 'ಬಿಜೆಪಿ ಶಾಸಕರು ಹಾಗೂ ಸಚಿವರ ವಿರುದ್ಧ ದಾಖಲಾಗಿರುವ ರಾಜಕೀಯ ಪ್ರೇರಿತ ಪ್ರಕರಣಗಳನ್ನು ಮಾತ್ರ ವಾಪಸ್ ಪಡೆಯಲಾಗುವುದು. ಗಂಭೀರ ಸ್ವರೂಪದ ಪ್ರಕರಣಗಳನ್ನು ಹಿಂಪಡೆಯುವುದಿಲ್ಲ. ಬಿಜೆಪಿ ಶಾಸಕರ ವಿರುದ್ಧದ ಬಹುತೇಕ ಪ್ರಕರಣಗಳು ಪ್ರತಿಪಕ್ಷಗಳು ಅಧಿಕಾರದಲ್ಲಿದ್ದಾಗ ದಾಖಲಾಗಿದ್ದವು' ಎಂದು ಬಿಜೆಪಿ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಬಹುತೇಕ ಪ್ರಕರಣಗಳು ರಾಜಕೀಯ ಪ್ರೇರಿತ ಆಗಿರುವ ಕಾರಣಕ್ಕೆ, ಅಂತಹವುಗಳನ್ನು ವಾಪಸ್ ಪಡೆಯುವುದರಲ್ಲಿ ತಪ್ಪೇನಿಲ್ಲ ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಎಸ್‌ಪಿ ಹಾಗೂ ಬಿಎಸ್‌ಪಿ ಸರ್ಕಾರಗಳು ಅಧಿಕಾರದಲ್ಲಿದ್ದಾಗ, ತಮ್ಮ ಪಕ್ಷದ ಶಾಸಕರು ಹಾಗೂ ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆದಿದ್ದವು ಎಂದು ಅವರು ಹೇಳಿದ್ದಾರೆ.

ಉತ್ತರ ಪ್ರದೇಶ ಸರ್ಕಾರದ ಎಂಎಸ್‌ಎಂಇ ಸಚಿವ ರಾಕೇಶ್ ಸಚಾನ್ ಅವರು ಶಸ್ತ್ರಾಸ್ತ್ರ ಕಾಯ್ದೆಯಡಿ ತಪ್ಪಿತಸ್ಥ ಎಂದು ಕಾನ್ಪುರ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. ಬಿಜೆಪಿ ಮಿತ್ರಪಕ್ಷವಾದ ನಿಷಾದ್ ಪಕ್ಷದ ಮುಖ್ಯಸ್ಥ ಸಂಜಯ್ ನಿಷಾದ್ ವಿರುದ್ಧ ಜಾಮೀನುರಹಿತ ವಾರಂಟ್ ಜಾರಿಯಲ್ಲಿದೆ. ಹೀಗಾಗಿ ಆದಿತ್ಯನಾಥ ಸರ್ಕಾರವನ್ನು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿದ್ದು, ಸಚಿವರ ವಜಾಕ್ಕೆ ಪಟ್ಟು ಹಿಡಿದಿವೆ.

ಅರ್ಧದಷ್ಟು ಶಾಸಕರ ಮೇಲೆ ಕ್ರಿಮಿನಲ್ ಪ್ರಕರಣ

ಉತ್ತರ ಪ್ರದೇಶ ಸಂಪುಟದ 52 ಸಚಿವರ ಪೈಕಿ 22 ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಬಾಕಿಯಿವೆ. ಈ ಪೈಕಿ ಬಹುತೇಕರ ವಿರುದ್ಧ ದಾಖಲಾಗಿರುವ ಪ್ರಕರಣಗಳು ಗಂಭೀರ ಸ್ವರೂಪದ್ದಾಗಿದ್ದು, ಆರೋಪ ಸಾಬೀತಾದರೆ ಅವರಿಗೆ ಐದು ವರ್ಷ ಶಿಕ್ಷೆ ವಿಧಿಸಬಹುದಾಗಿದೆ. ರಾಜ್ಯ ವಿಧಾನಸಭೆಯ ಒಟ್ಟು ಸದಸ್ಯಬಲದ (403) ಪೈಕಿ ಅರ್ಧಕ್ಕಿಂತಲೂ ಹೆಚ್ಚು ಶಾಸಕರು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಉಪಮುಖ್ಯಮಂತ್ರಿ ಕೇಶವಪ್ರಸಾದ್ ಮೌರ್ಯ, ಸಚಿವರಾದ ಯೋಗೇಂದ್ರ ಉಪಾಧ್ಯಾಯ, ಧರ್ಮಪಾಲ್ ಸಿಂಗ್ ಇತರರು ಪಟ್ಟಿಯಲ್ಲಿದ್ದಾರೆ.

ಪೈಲಟ್ ಲೈಸೆನ್ಸ್: ತೃತೀಯಲಿಂಗಿಗಳಿಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಕಮರ್ಷಿಯಲ್ ಪೈಲಟ್ ಲೈಸೆನ್ಸ್‌ಗಾಗಿ ಅರ್ಜಿ ಸಲ್ಲಿಸಿರುವ ತೃತೀಯ ಲಿಂಗಿ ಅಭ್ಯರ್ಥಿಗಳಿಗಾಗಿ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಬುಧವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

'ಹಾರ್ಮೋನ್ ಥೆರಪಿಗೆ ಒಳಪಟ್ಟವರು ಅದರ ಅವಧಿ, ಪಡೆದ ಔಷಧ, ಮಾಡಿಕೊಂಡಿರುವ ಬದಲಾವಣೆ ಹಾಗೂ ಹಾರ್ಮೋನ್ ವಿಶ್ಲೇಷಣೆಗೆ ಸಂಬಂಧಿಸಿದಂತೆ ಎಂಡೊಕ್ರಿನಾಲಜಿಸ್ಟ್‌ಗಳಿಂದ ಪಡೆದ ಸಮಗ್ರ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು' ಎಂದಿದೆ.

ಕೇರಳದ ಆ್ಯಡಂ ಹ್ಯಾರಿ ಎಂಬುವರಿಗೆ ಪೈಲಟ್ ಲೈಸೆನ್ಸ್ ನೀಡಲು ಡಿಜಿಸಿಎ ನಿರಾಕರಿಸಿದ್ದಾಗಿ ಮಾಧ್ಯಮಗಳು ವರದಿ ಮಾಡಿದ್ದವು.

ಹೆಚ್ಚಿನ ನೆರವು ನೀಡುವಂತೆ ಉಕ್ರೇನ್ ಅಧ್ಯಕ್ಷ ಮನವಿ

ಕೋಪನ್‌ಹೇಗನ್ (ಎಪಿ): 'ಕಳೆದ ಐದೂವರೆ ತಿಂಗಳಿಂದ ನಿರಂತರವಾಗಿ ಯುದ್ಧ ನಡೆಯುತ್ತಿದೆ. ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸಲು ನಮಗೆ ಹಣದ ಅವಶ್ಯಕತೆ ಇದೆ. ಆದ್ದರಿಂದ, ನಮ್ಮ ಸೇನೆಯ ಬಲ ಹೆಚ್ಚಿಸಿಕೊಳ್ಳಲು ಪಾಶ್ಚಿಮಾತ್ಯ ದೇಶಗಳು ಇನ್ನಷ್ಟು ನೆರವು ನೀಡಬೇಕು' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮನವಿ ಮಾಡಿದ್ದಾರೆ.

ಉಕ್ರೇನ್, ಡೆನ್ಮಾರ್ಕ್ ಮತ್ತು ಬ್ರಿಟನ್ ರಕ್ಷಣಾ ಸಚಿವರು ಗುರುವಾರ ಆಯೋಜಿಸಿದ್ದ 'ಉಕ್ರೇನ್‌ಗೆ ದೇಣಿಗೆ ಸಮಾವೇಶ'ದಲ್ಲಿ ಅವರು ವಿಡಿಯೊ ಸಂವಾದದ ಮೂಲಕ ಮಾತನಾಡಿದರು. ಆಯುಧಗಳ ಖರೀದಿಗೆ, ಸೇನೆಯ ತರಬೇತಿಗಾಗಿ ಉಕ್ರೇನ್‌ಗೆ ಹಣಕಾಸಿನ ನೆರವು ನೀಡುವ ದೃಷ್ಟಿಯಿಂದ ಸಮಾವೇಶವನ್ನು ಆಯೋಜಿಸಲಾಗಿತ್ತು.

ಯುದ್ಧದಿಂದಾಗಿ ಉಕ್ರೇನ್‌ಗೆ ಸುಮಾರು ₹9 ಲಕ್ಷ ಕೋಟಿಗೂ ಅಧಿಕ ನಷ್ಟವಾಗಿದೆ ಎಂದು ಕೀವ್‌ನ ಸ್ಕೂಲ್ ಆಫ್ ಎಕನಾಮಿಕ್ಸ್ ಬುಧವಾರ ವರದಿ ನೀಡಿದೆ. 304 ಸೇತುವೆಗಳು, 900 ಆರೋಗ್ಯ ಕೇಂದ್ರಗಳು ನಾಶವಾಗಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮಾಜಿ ಪತ್ರಕರ್ತೆ ಬಂಧನ

ಮಾಸ್ಕೊ (ಎಪಿ): ರಷ್ಯಾ ಸೈನ್ಯದ ಕುರಿತು ಸುಳ್ಳು ಮಾಹಿತಿ ಹರಡುತ್ತಿದ್ದಾರೆ ಎನ್ನುವ ಆರೋಪದ ಮೇಲೆ ಸರ್ಕಾರಿ ವಾಹಿನಿಯೊಂದರ ಮಾಜಿ ಪತ್ರಕರ್ತೆ, ನಿರೂಪಕಿ ಮಾರಿನಾ ಒಸಾನಿಕೊವಾ ಅವರನ್ನು ಬುಧವಾರ ಬಂಧಿಸಲಾಗಿದೆ. ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ್ದನ್ನು ಸುದ್ದಿ ವಾಚನದ ವೇಳೆಯೇ, ನೇರ ಪ್ರಸಾರದಲ್ಲಿ ಪ್ರತಿಭಟಿಸಿದ್ದರು.

ಬಿಹಾರ: 24ರಂದು ವಿಶ್ವಾಸಮತ ಸಾಬೀತಿಗೆ ವಿಶೇಷ ಅಧಿವೇಶನ

ಸ್ಪೀಕರ್ ವಿರುದ್ಧ ಅವಿಶ್ವಾಸ ನೋಟಿಸ್

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಇದೇ 24ರಂದು ನಡೆಸುವಂತೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಕಚೇರಿಯಿಂದ ಬಂದ ಕೋರಿಕೆಗೆ ಮಾನ್ಯತೆ ನೀಡಲಾಗಿದೆ ಎಂದು ಸ್ಪೀಕರ್ ವಿಜಯ ಕುಮಾರ್ ಸಿನ್ಹಾ ಹೇಳಿದ್ದಾರೆ. ಹೊಸದಾಗಿ ಅಸ್ತಿತ್ವಕ್ಕೆ ಬಂದ ಮಹಾಮೈತ್ರಿಕೂಟದ ಸರ್ಕಾರವು ಅಂದೇ ವಿಶ್ವಾಸಮತ ಕೋರಲಿದೆ.

ಇದೇ 15ರ ಬಳಿಕ ಸಂಪುಟ ವಿಸ್ತರಣೆಯೂ ನಡೆಯಲಿದೆ ಎಂದು ಮೂಲಗಳು ಹೇಳಿವೆ. ಒಟ್ಟು 35 ಶಾಸಕರಿಗೆ ಸಚಿವರಾಗುವ ಅವಕಾಶ ಸಿಗಬಹುದು. ಮೈತ್ರಿಕೂಟದ ಅತಿ ದೊಡ್ಡ ಪಕ್ಷವಾದ ಆರ್‌ಜೆಡಿಗೆ 16, ಜೆಡಿಯುಗೆ 13, ಕಾಂಗ್ರೆಸ್‌ಗೆ 4 ಸಚಿವ ಸ್ಥಾನ ದೊರೆಯಬಹುದು ಎನ್ನಲಾಗಿದೆ.

ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ಅವರ ವಿರುದ್ಧ, ರಾಜ್ಯದ ಮಹಾಮೈತ್ರಿಕೂಟ ಸರ್ಕಾರವು ಅವಿಶ್ವಾಸ ಗೊತ್ತುವಳಿ ನೋಟಿಸ್ ನೀಡಿದೆ. ಬಿಜೆಪಿ ಶಾಸಕರೂ ಆಗಿರುವ ವಿಜಯ್ ಕುಮಾರ್ ಅವರ ನಡೆ ಅನುಮಾನಾಸ್ಪದವಾಗಿದೆ ಎಂದು ಜೆಡಿಯು ನಾಯಕರು ಹೇಳಿದ್ದಾರೆ.

ಮಹಾಮೈತ್ರಿಕೂಟದ ನಾಯಕರು ಅವಿಶ್ವಾಸ ಗೊತ್ತುವಳಿ ನೋಟಿಸ್ ಅನ್ನು, ಬಿಹಾರ ವಿಧಾನಸಭಾ ಕಾರ್ಯಾಲಯಕ್ಕೆ ಬುಧವಾರ ತಡರಾತ್ರಿ ಸಲ್ಲಿಸಿದ್ದಾರೆ. ವಿಶ್ವಾಸಮತ ಸಾಬೀತಿಗಾಗಿ ಇದೇ 24ರಂದು ನಡೆಯುವ ವಿಶೇಷ ಅಧಿವೇಶನದಲ್ಲಿಯೇ ಸ್ಪೀಕರ್ ವಿರುದ್ಧದ ನೋಟಿಸ್ ಅನ್ನೂ ಚರ್ಚೆಗೆ ಎತ್ತಿಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

'ಹಿಂದಿನ ಸರ್ಕಾರದ ಅವಧಿಯಲ್ಲಿ ಆಯ್ಕೆಯಾಗಿದ್ದ ಸ್ಪೀಕರ್ ಅವರನ್ನು, ರಾಜೀನಾಮೆ ನೀಡುವಂತೆ ಕೇಳಲಾಗಿತ್ತು. ಸರ್ಕಾರ ಬದಲಾದಾಗ ಸ್ಪೀಕರ್ ರಾಜೀನಾಮೆ ನೀಡುವುದು ನಡೆದುಕೊಂಡು ಬಂದಿದೆ. ಆದರೆ, ವಿಜಯ್ ಕುಮಾರ್ ಅವರು ರಾಜೀನಾಮೆ ನೀಡಲು ನಿರಾಕರಿಸಿದರು' ಎಂದು ಜೆಡಿಯು ನಾಯಕರೊಬ್ಬರು ಮಾಹಿತಿ ನೀಡಿದ್ದಾರೆ.

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ಜೆಡಿಯು ಬೆಂಬಲಿಸಿತ್ತು. ಉಪರಾಷ್ಟ್ರಪತಿ ಹುದ್ದೆಗೆ ನಾನು ಆಕಾಂಕ್ಷಿಯಾಗಿದ್ದೆ ಎಂಬುದು ಸುಳ್ಳು

ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಸುಮ್ಮನೆ ಪ್ರಚಾರ ಗಿಟ್ಟಿಸುವುದು ನರೇಂದ್ರ ಮೋದಿಗೆ ಗೊತ್ತಿದೆ. ನಮಗೆ ಅದು ಬರುವುದಿಲ್ಲ. ನಾವು ನಮ್ಮ ಕೆಲಸದ ಮೂಲಕ ಮಾತನಾಡುತ್ತೇವೆ

ತೇಜಸ್ವಿ ಯಾದವ್
ಬಿಹಾರ ಉಪ ಮುಖ್ಯಮಂತ್ರಿ

ಪಟ್ನಾದಲ್ಲಿರುವ 'ಭಾರತ ಬಿಟ್ಟು ತೊಲಗಿ ಹುತಾತ್ಮರ ಸ್ಮಾರಕ'ಕ್ಕೆ ನಿತೀಶ್ ಕುಮಾರ್, ತೇಜಸ್ವಿ ಯಾದವ್ ಮತ್ತು ಇತರರು ಗುರುವಾರ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು —ಪಿಟಿಐ ಚಿತ್ರ

ದಿನದ ಬೆಳವಣಿಗೆ

- 'ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಅಧಿಕಾರಿಗಳು ನಮ್ಮ ಮನೆಗೆ ಬರಲಿ, ಇಲ್ಲಿಯೇ ಕಚೇರಿ ಆರಂಭಿಸಲಿ ಎಂದು ಅವರಿಗೆ ಆಹ್ವಾನ ನೀಡುತ್ತಿದ್ದೇನೆ. ಪದೇ–ಪದೇ ದೆಹಲಿಗೆ ಹೋಗಿ ವಾಪಸ್ ಇಲ್ಲಿಗೆ ಬರುವುದು ಅವರಿಗೆ ಕಷ್ಟವಾಗಬಹುದು' ಎಂದು ತೇಜಸ್ವಿ ಯಾದವ್ ಹೇಳಿದ್ದಾರೆ
- ಬಿಜೆಪಿ ಮುಖಂಡ ಮತ್ತು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಎರಡು ಸಿಂಹಗಳ ಜತೆಗೆ ನಾಯಿಯೊಂದು ಹೋರಾಡುತ್ತಿರುವ ವಿಡಿಯೊವನ್ನು ಗುರುವಾರ ಟ್ವೀಟ್ ಮಾಡಿದ್ದರು. ಆ ವಿಡಿಯೊಗೆ, '2024ರ ಸವಾಲು' ಎಂದು ವಿವರ ಬರೆದಿದ್ದರು. ಕೆಲವೇ ನಿಮಿಷಗಳಲ್ಲಿ ಅವರ ಟ್ವೀಟ್ ವೈರಲ್ ಆಯಿತು. ಆದರೆ, ಅವರು ಆ ಟ್ವೀಟ್ ಅನ್ನು ಅಳಿಸಿ ಹಾಕಿದರು

'10 ಲಕ್ಷ ಉದ್ಯೋಗ'

'2020ರ ಚುನಾವಣಾ ಪ್ರಚಾರದಲ್ಲಿ, 'ನಾವು ಅಧಿಕಾರಕ್ಕೆ ಬಂದರೆ 10 ಲಕ್ಷ ಉದ್ಯೋಗ ನೀಡುತ್ತೇವೆ' ಎಂದು ಹೇಳಿದ್ದೆವು. ಈಗ ಆ ಪ್ರಣಾಳಿಕೆಯ ಭರವಸೆಯನ್ನು ಅನುಷ್ಠಾನಕ್ಕೆ ತರುತ್ತೇವೆ' ಎಂದು ಬಿಹಾರ ಉಪಮುಖ್ಯಮಂತ್ರಿ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹೇಳಿದ್ದಾರೆ.

'ಭರವಸೆಯನ್ನು ಅನುಷ್ಠಾನಕ್ಕೆ ತರಲು ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ. ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಹಲವು ಹುದ್ದೆಗಳು ಖಾಲಿ ಇವೆ. ಆ ಬಗ್ಗೆ ಮಾಹಿತಿ ಕಲೆ ಹಾಕುವಂತೆ ಮತ್ತು ಉದ್ಯೋಗ ಸೃಷ್ಟಿಯ ಸಾಧ್ಯತೆಗಳನ್ನು ಪರಿಶೀಲಿಸುವಂತೆ ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ. ನಾವು ವಿಶ್ವಾಸಮತ ಸಾಬೀತು ಮಾಡಿದ ನಂತರ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತೇವೆ. ಅಲ್ಲಿಯವರೆಗೆ ಪೂರಕ ಕೆಲಸಗಳೆಲ್ಲವೂ ಆಗಲಿದೆ' ಎಂದು ಅವರು ಹೇಳಿದ್ದಾರೆ.

ದೇಶಭಕ್ತಿಗೀತೆ ಗಾಯನ: ವಿಶ್ವದಾಖಲೆಗೆ ಸಿದ್ಧತೆ

ಜೈಪುರ (ಪಿಟಿಐ): ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಶುಕ್ರವಾರ ರಾಜಸ್ಥಾನದಾದ್ಯಂತ ಒಂದು ಕೋಟಿ ವಿದ್ಯಾರ್ಥಿಗಳು ಏಕಕಾಲದಲ್ಲಿ ದೇಶಭಕ್ತಿಗೀತೆ ಹಾಡುವ ಮೂಲಕ ವಿಶ್ವ ದಾಖಲೆಗೆ ಯತ್ನಿಸಲಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಶಾಲೆಗಳಲ್ಲಿ ಬೆಳಿಗ್ಗೆ 10.15ಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಜೈಪುರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಆತ್ಮಾಹುತಿ ದಾಳಿ: ಯೋಧರು ಹುತಾತ್ಮ

ರಜೌರಿ: ನಾಲ್ಕು ತಾಸು ನಡೆದ ಗುಂಡಿನ ಚಕಮಕಿ • ಇಬ್ಬರು ಉಗ್ರರ ಹತ್ಯೆ

ಜಮ್ಮು (ಪಿಟಿಐ): ಜಮ್ಮುವಿನ ರಜೌರಿ ಜಿಲ್ಲೆಯ ಸೇನಾ ಶಿಬಿರದ ಮೇಲೆ ಗುರುವಾರ ನಸುಕಿನಲ್ಲಿ ಇಬ್ಬರು ಆತ್ಮಾಹುತಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಮೂವರು ಯೋಧರು ಹುತಾತ್ಮರಾಗಿದ್ದಾರೆ. ಸುಮಾರು ನಾಲ್ಕು ತಾಸುಗಳವರೆಗೆ ನಡೆದ ಗುಂಡಿನ ಚಕಮಕಿಯಲ್ಲಿ ದಾಳಿಕೋರರನ್ನು ಹತ್ಯೆ ಮಾಡಲಾಗಿದೆ.

ರಾಜಸ್ಥಾನ ಮೂಲದ ಸುಬೇದಾರ್ ರಾಜೇಂದ್ರ ಪ್ರಸಾದ್, ತಮಿಳುನಾಡಿನ ರೈಫಲ್‌ಮನ್ ಡಿ. ಲಕ್ಷ್ಮಣನ್, ಹರಿಯಾಣದ ರೈಫಲ್‌ಮನ್ ಮನೋಜ್ ಕುಮಾರ್ ಹುತಾತ್ಮರಾದ ಯೋಧರಾಗಿದ್ದಾರೆ.

'ಇಲ್ಲಿಂದ ಸುಮಾರು 185 ಕಿ.ಮೀ ದೂರದಲ್ಲಿರುವ ಪರಗಲ್‌ನ ಸೇನಾ ಶಿಬಿರದೊಳಗೆ ನಸುಕಿನ ಜಾವ ನುಸುಳಲು ಭಯೋತ್ಪಾದಕರು ಮುಂದಾಗಿದ್ದರು. ಅದನ್ನು ಗಮನಿಸಿದ ಕಾವಲುಗಾರರು ಅವರನ್ನು ತಡೆದರು. ಈ ವೇಳೆ ಭಯೋತ್ಪಾದಕರು ಗ್ರೆನೇಡ್‌ಗಳನ್ನು ಎಸೆದು, ಶಿಬಿರ ಪ್ರವೇಶಿಸಲು ಯತ್ನಿಸಿದರು. ಕೂಡಲೇ ಕಾವಲುಗಾರರು ಪ್ರತಿದಾಳಿ ನಡೆಸಿದರು. ಎಚ್ಚರಿಕೆ ಸಂದೇಶ ಬರುತ್ತಿದ್ದಂತೆ ಸ್ಥಳಕ್ಕೆ ಬಂದ ಸೇನಾ ಪಡೆ ಭಯೋತ್ಪಾದಕರ ಮೇಲೆ ಗುಂಡಿನ ದಾಳಿ ನಡೆಸಿ, ಅವರನ್ನು ಹೊಡೆದುರುಳಿಸಿತು' ಎಂದು ಜಮ್ಮುವಿನ ಸಾರ್ವಜನಿಕ ಸಂಪರ್ಕಾಧಿಕಾರಿ (ರಕ್ಷಣ) ಲೆಫ್ಟಿನೆಂಟ್ ಕರ್ನಲ್ ದೇವೇಂದರ್ ಆನಂದ್ ತಿಳಿಸಿದರು.

ನಸುಕಿನ 2 ಗಂಟೆಯಿಂದ ಬೆಳಿಗ್ಗೆ 6.10 ಗಂಟೆಯವರೆಗೆ ಗುಂಡಿನ ಚಕಮಕಿ ನಡೆಯಿತು ಎಂದು ಅಧಿಕಾರಿಗಳು ಮತ್ತು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಭಯೋತ್ಪಾದಕರು ನಿಷೇಧಿತ ಜೈಷ್–ಎ–ಮೊಹಮ್ಮದ್ ಉಗ್ರರ ಗುಂಪಿಗೆ ಸೇರಿದವರಾಗಿರಬಹುದು ಎನ್ನಲಾಗಿದೆ.

'ಈ ದಾಳಿಯಲ್ಲಿ ಭಾರತೀಯ ಸೇನೆಯ ಆರು ಯೋಧರು ಗಾಯಗೊಂಡಿದ್ದರು. ಈ ಪೈಕಿ ಮೂವರು ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದರು. ತಲೆಮರೆಸಿಕೊಂಡಿರುವ ಇತರೆ ಭಯೋತ್ಪಾದಕರಿಗಾಗಿ ಶೋಧ ಕಾರ್ಯ ಹಮ್ಮಿಕೊಳ್ಳಲಾಗಿದೆ' ಎಂದು ಜಮ್ಮು ವಲಯದ ಮುಖ್ಯಸ್ಥರೂ ಆಗಿರುವ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಮುಕೇಶ್ ಸಿಂಗ್ ಹೇಳಿದರು.

ಭಯೋತ್ಪಾದಕರ ಆತ್ಮಾಹುತಿ ದಾಳಿಯಲ್ಲಿ ಯೋಧರಾದ ರಾಜೇಂದ್ರ ಪ್ರಸಾದ್, ಮನೋಜ್ ಕುಮಾರ್, ಡಿ. ಲಕ್ಷ್ಮಣನ್ ಹುತಾತ್ಮರಾದರು – ಪಿಟಿಐ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಮಾರ್ಕೆಟಿಂಗ್‌ಅಲ್ಲ, ನೇರನೇಮಕಾತಿ ಕಂಪನಿಗಳಿಗೆ, ಅಫೀಸ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದವರಿಗೂ, ಯುವಕ, ಯುವತಿಯರಿಗೆವಸತಿ ಊಟದೊಂದಿಗೆ 16,500-54,600/-. 9980462311, 9620228807

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಊಟ,ವಸತಿ ಉಚಿತ. ಸಂಬಳ:12,000 ರಿಂದ15,000/-. ಇಎಸ್‌ಐ,ಪಿಎಫ್ ಸೌಲಭ್ಯವಿರುತ್ತದೆ.ಬೆಂಗಳೂರು-76. ತಕ್ಷಣ ಸಂಪರ್ಕಿಸಿ:9606385001, 9606523337.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ನೇಮಕಾತಿ ಪ್ರಮುಖ ಇಂಟೀರಿಯರ್ ಕಂಪನಿಯಾದ Wudless-India ಗೆ ಕಾರ್ಪೆಂಟರ್ಸ್ ಬೇಕಾಗಿದ್ದಾರೆ. Modular instalation, Partition & Panel Manual ಕೆಲಸದಲ್ಲಿ ಕೌಶಲ್ಯವಿರುವವರು & ಆಸಕ್ತಿಯುಳ್ಳವರು ವಿಳಾಸ:ನಂ.662, 16ನೇ'ಎ' ಮುಖ್ಯರಸ್ತೆ, ನಾರಾಯಣ ನಗರ 1ನೇಬ್ಲಾಕ್, ದೊಡ್ಡಕಲ್ಲಸಂದ್ರ, ಬೆಂಗಳೂರು-62. ಸಂಪರ್ಕಿಸಿ: 7349771824.

ಕೆಲಸಕ್ಕೆ ಬೇಕಾಗಿದ್ದಾರೆ S.S.L.C ಮೇಲ್ಪಟ್ಟ ಯುವಕರು ಗೃಹಿಣಿಯರು ಕೇಂದ್ರ ಮತ್ತು ರಾಜ್ಯ ಸರ್ಕಾರಿನೌಕರರು ನಿವೃತ್ತಿಹೊಂದಿದ ಹಿರಿಯ ನಾಗರೀಕರು ಬೇಕಾಗಿದ್ದಾರೆ.ಇಂದೇ ಸಂಪರ್ಕಿಸಿ: 9663987757 ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.

ನೀವು ಇರುವ ಸ್ಥಳದಲ್ಲಿಯೇಕುಳಿತು ಬರವಣಿಗೆಯ ಮುಖಾಂತರ ವಾರಕ್ಕೆ-3000/- ತಿಂಗಳಿಗೆ 16,000/-ವರೆಗೂಗಳಿಸಬಹುದು (ಕೊರಿಯರ್ ಸೌಲಭ್ಯವಿದೆ). 9743217566, 9108418233

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಚೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಚೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ

Travel

8 ದಿನಗಳ ನೇಪಾಳ ವಿಶೇಷ ಪ್ರವಾಸ: ಮುಕ್ತಿನಾಥ್ ಪಶುಪತಿನಾಥ್ ಭಕ್ತಪುರ್,ಪಠನ್ ಶ್ರೀಕೃಷ್ಣ ಟೆಂಪಲ್ ಮನೋಕಾಮನದೇವಿ ಹಾಗು ಇತ್ಯಾದಿ. 9 ದಿನಗಳ ಪಕ್ಷಮಾಸ ವಿಶೇಷ ಪ್ರವಾಸ ಕಾಶಿ,ಗಯಾ ಅಲಹಾಬಾದ್,ಅಯೋಧ್ಯ ಇತ್ಯಾದಿ. ಹಾಗು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ. ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04 9900080793 9880079588

05.09.2022 26.09.2022 ವಿಮಾನ/ರೈಲು/ಬಸ್ಸಿನಲ್ಲಿ ಚಾರ್ ಧಾಮ್ ಸಮೇತ ದೆಹಲಿ ಅಮೃತಸರ್ ವೈಷ್ಣೋದೇವಿ ಬುದ್ಧಗಯಾ ಹರಿದ್ವಾರ್ 17/35 ದಿನಗಳು. 09.10.2022 ನೇಪಾಳ,ಮುಕ್ತಿನಾಥ್,ಪೊಖ್ರಾ. 09.11.2022 ಸೋಮನಾಥ್ ದ್ವಾರಕಾ,ನಾಗೇಶಂ ಓಂಕಾರೇಶ್ವರ್ ದಕ್ಷಿಣ,ಮಧ್ಯಭಾರತ. ಪ್ರವಾಸಗಳಿಗಾಗಿ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4 26574131 8317446683 9964108171

ದೆಹಲಿ ಆಗ್ರಾ, ಮಥುರ ಕಾಶಿ,ಗಯಾ ಪ್ರಯಾಗ 12.09.2022, 07.10.2022 ರಿಂದ 13/8 ದಿನಗಳು. ಯುಮುನೋತ್ರಿ ಗಂಗೋತ್ರಿ ಕೇದಾರನಾಥ ಬದರಿನಾಥ್ 07.10.2022 ರಿಂದ 14 ದಿನಗಳು. ಸೋಮನಾಥ್ ದ್ವಾರಕಾ,ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ 30.10.2022 ರಿಂದ 15/10 ದಿನಗಳು. ಕುಲು,ಮನಾಲಿ ವೈಷ್ಣೋದೇವಿ ಶಕ್ತಿಪೀಠಗಳು 30.10.2022 ರಿಂದ 12 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು18

ಶ್ರೇಯಸ್ ಟೂರ್ಸ್: 15.08.2022, 25.08.2022 5ದಿನಗಳು ಸಂಪೂರ್ಣ ಅಹೋಬಲಂ ನವನಾರಸಿಂಹ ಶ್ರೀಶೈಲಂ ಮಹಾನಂದಿ ಯಾಗಂಟಿ ಬೇಲಂಗುಹೆ ಮಂತ್ರಾಲಯ. 14.09.2022 10ದಿನಗಳು 6ವಿಮಾನದಲ್ಲಿ ನೇಪಾಳ ರಾಷ್ಟ್ರದ ಕಠ್ಮಂಡು ಮನೋಕಾಮನದೇವಿ ಪೋಕ್ರಾ ಮುಕ್ತಿನಾಥ ಚಿತವಾನ್ ಲೂಂಬಿನಿ ಜನಕಪುರಿ. 06.10.2022 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ ಪ್ರವಾಸ(ಅಮರಕಂಟಕ ಮಯ್ಯಾರ್ ಚಿತ್ರಕೂಟ ಸಹಿತ).8073824856/ 9206979202/ 6366322639

13 09.2022 12.10.2022 ರಿಂದ 14 ದಿನಗಳು ಕಾಶಿ,ನೇಪಾಳ,ಮುಕ್ತಿನಾಥ್. 29.09.2022 ರಿಂದ 10 ದಿನಗಳು ದೆಹಲಿ,ಕಾಶಿ,ಗಯಾ ನೈಮಿಶರಣ್ಯ. 05.09.2022 05.10.2022 ರಿಂದ 14 ದಿನಗಳು ಚಾರ್‌ಧಾಮ್. ಸಂಪರ್ಕಿಸಿ: ಅನಿತಾ ಟ್ರಾವಲ್ಸ್ ಬೆಂಗಳೂರು-20. 9448602641 7760884305

09.09.2022 ಜಲಪಾತೋತ್ಸವ ಪ್ರವಾಸ: ಜೋಗಫಾಲ್ಸ್, ಭೀಮೇಶ್ವರ, ಹಿಡ್ಲುಮನೆ, ನಿಪ್ಲಿಫಾಲ್ಸ್,ಮತ್ತು ಕೊಡಚಾದ್ರಿ. 10.09.2022 ತಮಿಳುನಾಡು ನವಗ್ರಹ ಪ್ರವಾಸ. ಅನುಗ್ರಹ ಯಾತ್ರಾ. 9880079351.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಉಪರಾಷ್ಟ್ರಪತಿಯಾಗಿ ಜಗದೀಪ್ ಧನಕರ್ ಪ್ರಮಾಣ

ಜಗದೀಪ್ ಧನಕರ್

ನವದೆಹಲಿ (ಪಿಟಿಐ): ದೇಶದ 14ನೇ ಉಪರಾಷ್ಟ್ರಪತಿಯಾಗಿ ಜಗದೀಪ್ ಧನಕರ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.

ರಾಷ್ಟ್ರಪತಿ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಧಾನಿ ನರೇಂದ್ರ ಮೋದಿ, ನಿರ್ಗಮಿತ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಮಾಜಿ ಉಪರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್ ಮತ್ತು ನಿತಿನ್ ಗಡ್ಕರಿ ಉಪಸ್ಥಿತರಿದ್ದರು. ಅಧಿಕಾರ ಸ್ವೀಕರಿಸುವ ಮೊದಲು ಜಗದೀಪ್ ಅವರು ರಾಜ್ ಘಾಟ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧಿ ಅವರಿಗೆ ಗೌರವ ಸಲ್ಲಿಸಿದರು.

'ಸಂಶಯದ ಮೇಲೆ ಆರೋಪಿಗೆ ಶಿಕ್ಷೆ ಸಲ್ಲದು'

ನವದೆಹಲಿ (ಪಿಟಿಐ): ಬಲವಾದ ಸಾಕ್ಷ್ಯಗಳಿಲ್ಲದೇ ಸಂಶಯದ ಆಧಾರದ ಮೇಲೆ ಆರೋಪಿಯನ್ನು ದೋಷಿಯಾಗಿ ತೀರ್ಮಾನಿಸಿ ಶಿಕ್ಷೆ ವಿಧಿಸಲಾಗದು ಎಂದು ಸುಪ್ರೀಂಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಜೀವಾವಧಿ ಶಿಕ್ಷೆಯ ತೀರ್ಪು ಪ್ರಶ್ನಿಸಿ ವ್ಯಕ್ತಿಯೊಬ್ಬ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ, ಕೊಲೆ ಪ್ರಕರಣದ ಆಪಾದನೆಯಿಂದ ಆತನನ್ನು ಖುಲಾಸೆಗೊಳಿಸಿತು.

'ಆರೋಪಿ ವಿರುದ್ಧದ ಆಪಾದನೆ ನ್ಯಾಯಸಮ್ಮತವಾಗಿ ಸಾಬೀತಾಗದಿದ್ದರೆ ಆತ ನಿರಪರಾಧಿಯೆಂದೇ ಭಾವಿಸಬೇಕು' ಎಂದು ಪೀಠ ಹೇಳಿದೆ.

ದೆಹಲಿ: ಮಾಸ್ಕ್ ಕಡ್ಡಾಯ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದೇಶದ ರಾಜಧಾನಿ ದೆಹಲಿಯಲ್ಲಿ ಮಾಸ್ಕ್ ಕಡ್ಡಾಯಗೊಳಿಸಲಾಗಿದೆ. ನಿಯಮ ಮೀರಿದರೆ ₹500 ದಂಡ ವಿಧಿಸುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ಖಾಸಗಿ ನಾಲ್ಕು ಚಕ್ರದ ವಾಹನಗಳಲ್ಲಿ ಪ್ರಯಾಣಿಸುವವರಿಗೆ ದಂಡವು ಅನ್ವಯಿಸುವುದಿಲ್ಲ ಎಂದು ಅಧಿಸೂಚನೆಯ ನಿಬಂಧನೆಯಲ್ಲಿ ತಿಳಿಸಲಾಗಿದೆ.

16,299 ಹೊಸ ಪ್ರಕರಣ: ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ16,299 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 53 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1,25,076ರಷ್ಟಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಉಗ್ರ ಅಜರ್ ಕಪ್ಪುಪಟ್ಟಿಗೆ ಸೇರಿಸಲು ವಿರೋಧ: ಚೀನಾ ಸಮರ್ಥನೆ

ಬೀಜಿಂಗ್: ಪಾಕಿಸ್ತಾನದ ಜೈಶ್ ಎ ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆಯ ಉಪ ಮುಖ್ಯಸ್ಥ ಅಬ್ದುಲ್ ರೌಫ್ ಅಜರ್‌ನನ್ನು ಕಪ್ಪು ಪಟ್ಟಿಗೆ ಸೇರಿಸುವ ಕುರಿತು ಭಾರತ ಮತ್ತು ಅಮೆರಿಕ ವಿಶ್ವಸಂಸ್ಥೆಯಲ್ಲಿ ಮಂಡಿಸಿರುವ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿರುವ ತನ್ನ ನಿಲುವನ್ನು ಚೀನಾವು ಗುರುವಾರ ಸಮರ್ಥಿಸಿಕೊಂಡಿದೆ.

ಅಜರ್ ವಿರುದ್ಧ ನಿರ್ಬಂಧ ಹೇರಬೇಕೆನ್ನುವ ಅರ್ಜಿಯ ಕುರಿತು ಮೌಲ್ಯ ಮಾಪನ ಮಾಡಲು ಹೆಚ್ಚಿನ ಸಮಯ ಬೇಕು ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ವಾಂಗ್ ವೆನ್‌ಬಿನ್ ಹೇಳಿದ್ದಾರೆ.

ಬೆಳಗಾವಿ ಮೂಲದ ಉದ್ಯಮಿಗೆ ಡೆಟ್ರಾಯ್ಟ್‌ನಲ್ಲಿ ಗೆಲುವು

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ನೆಲೆಸಿರುವ ಬೆಳಗಾವಿ ಮೂಲದ ಉದ್ಯಮಿ ಥಾನೇದಾರ್ (67) ಅವರು ಡೆಟ್ರಾಯ್ಟ್ ಜಿಲ್ಲೆಯಲ್ಲಿ ಕಳೆದ ವಾರ ನಡೆದ ಡೆಮಾಕ್ರಟಿಕ್ ಪಕ್ಷದ ಪ್ರಾಥಮಿಕ ಹಂತದ ಪ್ರಮುಖ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಆಗಸ್ಟ್ 2ರಂದು ಈ ಚುನಾವಣೆಯಲ್ಲಿ ತಮ್ಮದೇ ಪಕ್ಷದ ಇತರ ಎಂಟು ಅತಿಗಣ್ಯ ಅಭ್ಯರ್ಥಿಗಳ ಪ್ರಬಲ ಪೈಪೋಟಿಯ ನಡುವೆ ಥಾನೇದಾರ್ ಅವರು ಪಕ್ಷದ ನಾಮನಿರ್ದೇಶಿತ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ಡೆಟ್ರಾಯ್ಟ್ ಜಿಲ್ಲೆ ಡೆಮಾಕ್ರಟಿಕ್ ಪಕ್ಷದ ಭದ್ರಕೋಟೆಯಾಗಿದ್ದು, ನವೆಂಬರ್‌ನಲ್ಲಿ ಎದುರಾಗಲಿರುವ ಮಧ್ಯಂತರ ಚುನಾವಣೆಯಲ್ಲಿ ಥಾನೇದಾರ್ ಅವರಿಗೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಮಾರ್ಟೆಲ್ ಬಿವಿಂಗ್ಸ್ ಎದುರು ಗೆಲುವು ಸುಲಭವಾಗಲಿದೆ ಎಂದು ರಾಜಕೀಯ ಪರಿಣತರು ವಿಶ್ಲೇಷಿಸಿದ್ದಾರೆ.

ಥಾನೇದಾರ್ 1979ರಲ್ಲಿ ಅಮೆರಿಕಕ್ಕೆ ವಲಸೆ ಬಂದಿದ್ದಾರೆ. 1977ರಲ್ಲಿ ಬಾಂಬೆ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ, 1982ರಲ್ಲಿ ಅಕ್ರಾನ್ ಯುನಿವರ್ಸಿಟಿಯಿಂದ ಪಾಲಿಮರ್ ರಾಸಾಯನ ವಿಜ್ಞಾನದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಭಾರಿ ಮಳೆ: 300 ವಿಮಾನಗಳ ಹಾರಾಟ ರದ್ದು

ವಾಷಿಂಗ್ಟನ್ (ರಾಯಿಟರ್ಸ್): ಭಾರಿ ಮಳೆಯಾದ ಕಾರಣ ಅಮೆರಿಕನ್ ಏರ್‌ಲೈನ್ಸ್ ಗ್ರೂಪ್‌ನ ವಿಮಾನಗಳ ಹಾರಾಟವನ್ನು ಬುಧವಾರ, ಗುರುವಾರ ರದ್ದು ಮಾಡಲಾಗಿತ್ತು.

ಡಲಾಸ್ ಫೋರ್ಟ್ ವರ್ಥ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 300 ವಿಮಾನಗಳನ್ನು ರದ್ದು ಮಾಡಲಾಗಿದೆ ಎಂದು ಏರ್‌ಲೈನ್ಸ್‌ನ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

ಬಾಂಬ್ ದಾಳಿ: ಅಫ್ಗನ್ ಧರ್ಮಗುರು ಹತ್ಯೆ

ಇಸ್ಲಾಮಾಬಾದ್ (ಎಪಿ): ತಾಲಿಬಾನ್‌ನ ಪ್ರಮುಖ ಧರ್ಮಗುರು ರಹೀಮುಲ್ಲಾ ಹಕ್ಕಾನಿ ಅವರು ಬಾಂಬ್ ದಾಳಿಯಲ್ಲಿ ಗುರುವಾರ ಹತರಾಗಿದ್ದಾರೆ.

'ಶತ್ರು ಪಡೆಯವರು ಬಾಂಬ್ ದಾಳಿ ನಡೆಸಿ ಹಕ್ಕಾನಿ ಅವರನ್ನು ಧಾರ್ಮಿಕ ಕೇಂದ್ರದಲ್ಲೇ ಹತ್ಯೆ ಮಾಡಿದ್ದಾರೆ' ಎಂದು ತಾಲಿಬಾನ್‌ನ ಸಹ ವಕ್ತಾರ ಬಿಲಾಲ್ ಕರೀಮಿ ಹೇಳಿದ್ದಾರೆ. ಸದ್ಯ ಯಾವ ಗುಂಪಿನವರೂ ಈ ಹತ್ಯೆಯ ಹೊಣೆ ಹೊತ್ತುಕೊಂಡಿಲ್ಲ.

ದ್ವೀಪರಾಷ್ಟ್ರ ಸ್ವಾಧೀನಕ್ಕೆ ಸೇನಾ ಬೆದರಿಕೆ ಮುಂದುವರಿಸಿದ ಚೀನಾ

ಸ್ವರಕ್ಷಣೆಗಾಗಿ ತೈವಾನ್ ಸೇನಾ ತಾಲೀಮು

ತೈಪೆ (ಎಎಫ್‌ಪಿ/ರಾಯಿಟರ್ಸ್): ತೈವಾನ್ ಸ್ವಾಧೀನಕ್ಕೆ ಚೀನಾದ ಸೇನೆ ಬೆದರಿಕೆ ಮುಂದುವರಿಸಿರುವ ಬೆನ್ನಲ್ಲೇ ತೈವಾನ್ ಕೂಡ ಗುರುವಾರ ಮತ್ತೊಂದು 'ಲೈವ್ ಫೈರ್' ಸೇನಾ ತಾಲೀಮು ನಡೆಸಿತು.

ದೇಶದ ದಕ್ಷಿಣದ ಪಿಂಗ್‌ಟಂಗ್‌ನಲ್ಲಿ ಗುರುವಾರ ಬೆಳಿಗ್ಗೆ 8.30ಕ್ಕೆ ಸೇನಾ ತಾಲೀಮು ಆರಂಭವಾಯಿತು. ರಕ್ಷಣಾತ್ಮಕ ತಾಲೀಮಿನ ಭಾಗವಾಗಿ ಹೋವಿಟ್ಜರ್‌ಗಳು ಮತ್ತು ನಿರ್ದಿಷ್ಟ ಗುರಿ ಧ್ವಂಸಗೊಳಿಸುವ ಫಿರಂಗಿಗಳಿಂದ ಜೀವಂತ ಮದ್ದುಗುಂಡುಗಳನ್ನು ಸಿಡಿಸಲಾಯಿತು. ಸಾಗರದ ಕಡೆಯಿಂದ ಎದುರಾಗುವ ಶತ್ರುದಾಳಿಯನ್ನು ತಡೆಯುವ ತಾಲೀಮನ್ನೂ ಶಸಸ್ತ್ರಪಡೆ ಯೋಧರು ನಡೆಸಿದರು ಎಂದು ತೈವಾನ್ 8ನೇ ಸೇನಾ ತುಕಡಿಯ ವಕ್ತಾರರು ತಿಳಿಸಿದರು.

ತೈವಾನ್ ಸೇನೆ ಮಂಗಳವಾರವಷ್ಟೇ ಇದೇ ರೀತಿ ತಾಲೀಮನ್ನು ನಡೆಸಿತ್ತು.

'ಒಂದೇ ದೇಶ, ಎರಡು ವ್ಯವಸ್ಥೆ' ತಿರಸ್ಕರಿಸಿದ ತೈವಾನ್

ತೈವಾನ್‌ನ ಸ್ವಯಂ ಆಡಳಿತದ ಸ್ವಾಯತ್ತತೆ ಹಿಂಪಡೆದಿರುವ ಚೀನಾ, ಹೊಸ ಶ್ವೇತಪತ್ರ ಹೊರಡಿಸಿದ್ದು, ಇದರಲ್ಲಿ ಪ್ರಸ್ತಾಪಿಸಿರುವ 'ಒಂದೇ ದೇಶ, ಎರಡು ವ್ಯವಸ್ಥೆ'ಯನ್ನು ತೈವಾನ್ ಸರ್ಕಾರ ಗುರುವಾರ ಸಾರಾಸಗಟಾಗಿ ತಿರಸ್ಕರಿಸಿದೆ.

'ಚೀನಾದ ಈ ಹೊಸ ಪ್ರಸ್ತಾವ ಸಂಪೂರ್ಣ ಸುಳ್ಳಿನಿಂದ ಕೂಡಿದೆ. ಇದು ಗಡಿ ಯಥಾಸ್ಥಿತಿಗೆ ಸಂಪೂರ್ಣ ವಿರುದ್ಧವಾಗಿದೆ. ದೇಶದ ಭವಿಷ್ಯ ನಿರ್ಧರಿಸುವ ಹಕ್ಕು ತೈವಾನ್ ಪ್ರಜೆಗಳಿಗೆ ಮಾತ್ರ ಇದೆ' ಎಂದು ತೈವಾನ್ ವಿದೇಶಾಂಗ ಸಚಿವಾಲಯದ ವಕ್ತಾರೆ ಜೋಹಾನ್ ಒಯು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಚೀನಾದ ಪ್ರತಿ ನಡೆಯನ್ನು ನಾವು ಗಮನಿಸುತ್ತಿದ್ದೇವೆ. ಚೀನಾದ 'ನ್ಯೂ ನಾರ್ಮಲ್' ಪ್ರಯತ್ನಕ್ಕೆ ಅಮೆರಿಕ ಆಸ್ಪದ ನೀಡುವುದಿಲ್ಲ

ನ್ಯಾನ್ಸಿ ಪೆಲೋಸಿ
ಅಮೆರಿಕದ ಸಂಸತ್ತಿನ ಸ್ಪೀಕರ್

ತೈವಾನ್ ಸ್ವಾತಂತ್ರ್ಯಾನ್ವೇಷಣೆ ಯಶಸ್ವಿಯಾಗುವುದಿಲ್ಲ. ರಾಷ್ಟ್ರೀಯ ಹಿತವನ್ನು ಮಾರಾಟ ಮಾಡುವ ಯಾವುದೇ ಪ್ರಯತ್ನವನ್ನು ವಿಫಲಗೊಳಿಸಲಾಗುವುದು

ವಾಂಗ್ ವೆನ್ ಬಿನ್, ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಮಂಗಳೂರಿಗೆ ಮೊದಲ ಸೋಲು

ಚೇತನ್ ಅಬ್ಬರ: ಬೆಂಗಳೂರಿಗೆ ಜಯ

• ಮೋಹನ್ ಕುಮಾರ ಸಿ.

ಮಂಗಳೂರು ಯುನೈಟೆಡ್ ವಿರುದ್ಧ ಗುರುವಾರ ನಡೆದ ಪಂದ್ಯದಲ್ಲಿ ಅಬ್ಬರದ ಆಟವಾಡಿದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ನ ಎಲ್‌.ಆರ್‌.ಚೇತನ್ ಅವರ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೈಸೂರು: ಸುಂದರ ಅರ್ಧಶತಕ ಗಳಿಸಿದ ಎಲ್.ಆರ್.ಚೇತನ್ ಬ್ಯಾಟಿಂಗ್ ಬಲದಿಂದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು ಸತತ ಮೂರು ಪಂದ್ಯ ಗೆದ್ದಿದ್ದ ಮಂಗಳೂರು ಯುನೈಟೆಡ್ ಅನ್ನು 35 ರನ್‌ಗಳಿಂದ (ವಿಜೆಡಿ ನಿಯಮ) ಮಣಿಸಿತು.

ಟಾಸ್ ಗೆದ್ದ ಮಂಗಳೂರು ತಂಡದ ನಾಯಕ ಆರ್.ಸಮರ್ಥ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೆಂಗಳೂರು ತಂಡದ ಆರಂಭಿಕ ಜೋಡಿ ಮಯಂಕ್ (44 ರನ್, 20ಎ, 4x7, 6x1) ಹಾಗೂ ಎಲ್.ಆರ್.ಚೇತನ್ (66 ರನ್, 39ಎ, 4x4, 6x5) ಮೊದಲ ವಿಕೆಟ್‌ಗೆ 73 ರನ್ ಸೇರಿಸಿದರು.

ರೋಹಿತ್ ಕುಮಾರ್ ಎಸೆತವನ್ನು ಹೊಡೆಯಲು ಮುನ್ನುಗ್ಗಿದ ಮಯಂಕ್ ಸ್ಟಂಪ್ಡ್ ಆದರು. ನಂತರ ಅಬ್ಬರಿಸಿದ ಚೇತನ್ 9ನೇ ಓವರ್‌ನಲ್ಲಿಯೇ 2 ಸಿಕ್ಸರ್, ಬೌಂಡರಿ ಮೂಲಕ ತಂಡವನ್ನು 100ರ ಗಡಿ ದಾಟಿಸಿ ರನ್‌ರೇಟ್ ಹೆಚ್ಚಿಸಿದರು. ಕೊನೆಯ ಹಂತದ ಓವರ್‌ಗಳಲ್ಲಿ ರಿಷಿ ಬೋಪಣ್ಣ (ಅಜೇಯ 16, 6ಎ, 4x2, 6x1) ಬ್ಯಾಟಿಂಗ್ ನೆರವಿನಿಂದ ಬೆಂಗಳೂರು 20ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 186 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು.

ಗುರಿ ಬೆನ್ನಟ್ಟಿದ ಮಂಗಳೂರು ಆರಂಭದಲ್ಲೇ ನಾಯಕ ಸಮರ್ಥ್ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಮ್ಯಾಕ್‌ನೈಲ್ ನೊರೊನ್ಹಾ (50; 36ಎ, 4x4, 6x2), ನಿಕಿನ್ ಜೋಸ್ (35 ರನ್, 33ಎ, 4x1, 6x2) ಆಸರೆಯಾದರು. ಈ ವೇಳೆ ರಿಷಿ ಬೋಪಣ್ಣ 19 ರನ್ ನೀಡಿ 4 ವಿಕೆಟ್ ಉರುಳಿಸಿದರು. ಮಂಗಳೂರು ತಂಡ 129 ರನ್ ಗಳಿಸಿದ್ದಾಗ ಮಳೆ ಸುರಿಯಿತು. ವಿಜೆಡಿ ನಿಯಮದನ್ವಯ ಬೆಂಗಳೂರು 35 ರನ್‌ಗಳ ಜಯ ಸಾಧಿಸಿತು.

ರೋಹನ್ ಶತಕ: ದಿನದ ಎರಡನೇ ಪಂದ್ಯದಲ್ಲಿ ಎಡಗೈ ಬ್ಯಾಟರ್ ರೋಹನ್ ಪಾಟೀಲ ಸ್ಫೋಟಕ ಶತಕದ (112; 47ಎ, 4x11, 6x7) ನೆರವಿನಿಂದ ಗುಲ್ಬರ್ಗಾ ತಂಡ 9 ವಿಕೆಟ್‌ಗಳಿಂದ 'ಮೈಸೂರು ವಾರಿಯರ್ಸ್' ತಂಡವನ್ನು ಸೋಲಿಸಿತು.

ಮುಖ್ಯಾಂಶಗಳು

- 5 ಸಿಕ್ಸರ್ ಸಿಡಿಸಿದ ಚೇತನ್
- ರಿಷಿ ಬೋಪಣ್ಣ ಆಲ್‌ರೌಂಡ್ ಆಟ
- ಗೆಲುವಿನ ಲಯಕ್ಕೆ ಮರಳಿದ ಬೆಂಗಳೂರು

ಸಂಕ್ಷಿಪ್ತ ಸ್ಕೋರ್: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 9ಕ್ಕೆ 186 (ಎಲ್.ಆರ್.ಚೇತನ್ 66, ಮಯಂಕ್ 44. ಅಮಿತ್ ವರ್ಮಾ 27ಕ್ಕೆ 2) ಮಂಗಳೂರು ಯುನೈಟೆಡ್ 17.4 ಓವರ್‌ಗಳಲ್ಲಿ 7ಕ್ಕೆ 129 (ನೊರೊನ್ಹಾ 50, ನಿಕಿನ್ ಜೋಸ್ 35. ರಿಷಿ ಬೋಪಣ್ಣ 19ಕ್ಕೆ 4)

ಫಲಿತಾಂಶ: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ಗೆ 35 ರನ್ ಜಯ (ವಿಜೆಡಿ ನಿಯಮ)

ಇಂದಿನ ಪಂದ್ಯಗಳು: ಹುಬ್ಬಳ್ಳಿ ಟೈಗರ್ಸ್ – ಗುಲ್ಬರ್ಗಾ ಮಿಸ್ಟಿಕ್ಸ್ (ಮಧ್ಯಾಹ್ನ 3ರಿಂದ), ಬೆಂಗಳೂರು ಬ್ಲಾಸ್ಟರ್ಸ್ – ಶಿವಮೊಗ್ಗ ಸ್ಟ್ರೈಕರ್ಸ್ (ರಾತ್ರಿ 7ರಿಂದ)

ಮುಂಬೈ ತಂಡ ತೊರೆಯಲಿರುವ ಅರ್ಜುನ್ ತೆಂಡೂಲ್ಕರ್?

ನವದೆಹಲಿ (ಪಿಟಿಐ): ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಮಗ ಅರ್ಜುನ್ ಮುಂಬೈ ಕ್ರಿಕೆಟ್ ತಂಡವನ್ನು ತೊರೆದು ಗೋವಾ ತಂಡ ಸೇರುವ ಸಿದ್ಧತೆ ನಡೆಸಿದ್ದಾರೆ.

ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ಗೋವಾ ತಂಡದಲ್ಲಿ ಆಡಲು ನಿರಾಕ್ಷೇಪಣಾ ಪತ್ರ ನೀಡಬೇಕು ಎಂದು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ)ಗೆ ಮನವಿಪತ್ರ ಸಲ್ಲಿಸಿದ್ದಾರೆಂದು ತಿಳಿದುಬಂದಿದೆ.

ಈ ಬಾರಿಯ ದೇಶಿ ಋತುವಿನಲ್ಲಿ ಆಡುವ ಮುಂಬೈನ ತಂಡದಲ್ಲಿ ಅವರನ್ನು ಆಯ್ಕೆ ಮಾಡಿಲ್ಲ. ಇದೇ ಕಾರಣಕ್ಕೆ ಬೇಸರಗೊಂಡಿರುವ ಅವರು ಈ ನಿರ್ಧಾರಕ್ಕೆ ಕೈಗೊಳ್ಳುತ್ತಿದ್ದಾರೆನ್ನಲಾಗಿದೆ.

22 ವರ್ಷದ ಎಡಗೈ ಮಧ್ಯಮವೇಗಿ ಅರ್ಜುನ್ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. 2020–21ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅವರು ಮುಂಬೈ ತಂಡದಲ್ಲಿದ್ದರು. ಆ ಟೂರ್ನಿಯಲ್ಲಿ ಹರಿಯಾಣ ಹಾಗೂ ಪುದುಚೇರಿ ಎದುರಿನ ಪಂದ್ಯಗಳಲ್ಲಿ ಆಡಿದ್ದರು.

'ಅರ್ಜುನ್ ತಮ್ಮ ಆಟವನ್ನು ಉತ್ಕೃಷ್ಟಗೊಳಿಸಿಕೊಳ್ಳಲು ಹೆಚ್ಚು ಪಂದ್ಯಗಳಲ್ಲಿ ಆಡುವ ಅವಶ್ಯಕತೆ ಇದೆ. ಅವರು ಸ್ಥಳಾಂತರಗೊಳ್ಳುವುದರಿಂದ ಸುಧಾರಣೆಗೆ ಅನುಕೂಲವಾಗಲಿದೆ ಎಂಬ ವಿಶ್ವಾಸವಿದೆ. ಅಲ್ಲಿ ಅವರಿಗೆ ಹೆಚ್ಚು ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಬಹುದು' ಎಂದು ಎಸ್‌ಆರ್‌ಟಿ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರು ವರ್ಷಗಳ ಹಿಂದೆ ಅರ್ಜುನ್ ಶ್ರೀಲಂಕಾ ಎದುರಿನ 19 ವರ್ಷದೊಳಗಿನವರ ಸರಣಿಯ ಎರಡು ಟೆಸ್ಟ್‌ಗಳಲ್ಲಿ ಆಡಿದ್ದರು.

ಆ. 18ರಿಂದ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿ

ಭಾರತಕ್ಕೆ ರಾಹುಲ್ ನಾಯಕತ್ವ

ಕೆ.ಎಲ್ ರಾಹುಲ್

ರೆಗಿಸ್ ಚಕಾಬ್ವಾ

ನವದೆಹಲಿ(ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರಿಗೆ ಜಿಂಬಾಬ್ವೆ ಪ್ರವಾಸ ಮಾಡಲಿರುವ ಭಾರತ ಕ್ರಿಕೆಟ್ ತಂಡದ ನಾಯಕತ್ವದ ಹೊಣೆ ನೀಡಲಾಗಿದೆ.

ಎರಡು ತಿಂಗಳುಗಳ ಹಿಂದೆ ರಾಹುಲ್ ಅವರಿಗೆ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಅದರ ನಂತರ ಚೇತರಿಸಿಕೊಂಡಿದ್ದ ಅವರು ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಆಡಬೇಕಿತ್ತು. ಆದರೆ ಆದೇ ಹೊತ್ತಿಗೆ ಅವರಿಗೆ ಕೋವಿಡ್ ಇರುವುದು ಖಚಿತವಾಗಿತ್ತು. ಆದ್ದರಿಂದ ಸರಣಿಯಿಂದ ಹಿಂದೆ ಸರಿಯಬೇಕಾಯಿತು. ಇದೀಗ ಬಿಸಿಸಿಐ ವೈದ್ಯಕೀಯ ತಂಡವು ರಾಹುಲ್ ಅವರ ಫಿಟ್‌ನೆಸ್ ಉತ್ತಮವಾಗಿದೆ ಎಂದು ಖಚಿತಪಡಿಸಿದೆ.

ಜಿಂಬಾಬ್ವೆಗೆ ತೆರಳುವ ತಂಡಕ್ಕೆ ಈ ಮೊದಲು ಶಿಖರ್ ಧವನ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗುವುದು ಎಂದು ಹೇಳಲಾಗಿತ್ತು. ಇದೀಗ ರಾಹುಲ್ ಮರಳಿರುವುದರಿಂದ ಶಿಖರ್ ಉಪನಾಯಕರಾಗಿ ಕಣಕ್ಕಿಳಿಯುವರು. ಈ ಸರಣಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ರಿಷಭ್ ಪಂತ್, ಶ್ರೇಯಸ್ ಅಯ್ಯರ್, ಜಸ್‌ಪ್ರೀತ್ ಬೂಮ್ರಾ ಹಾಗೂ ಮೊಹಮ್ಮದ್ ಶಮಿ ಆಡುತ್ತಿಲ್ಲ.

ಜಿಂಬಾಬ್ವೆ ತಂಡ ಪ್ರಕಟ: ಬ್ಯಾಟರ್ ರೆಗಿಸ್ ಚಕಾಬ್ವಾ ಅವರನ್ನು ಭಾರತ ಕ್ರಿಕೆಟ್ ತಂಡದ ಎದುರಿನ ಸರಣಿಯಲ್ಲಿ ಆಡಲಿರುವ ಜಿಂಬಾಬ್ವೆ ತಂಡದ ನಾಯಕತ್ವ ವಹಿಸಲಾಗಿದೆ.

ಆ.18ರಿಂದ ಹರಾರೆ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ನಡೆಯಲಿರುವ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಭಾರತ ಮತ್ತು ಜಿಂಬಾಬ್ವೆ ಮುಖಾಮುಖಿಯಾಗಲಿವೆ. ಸರಣಿಯ ಎರಡು ಮತ್ತು ಮೂರನೇ ಪಂದ್ಯಗಳು ಕ್ರಮವಾಗಿ ಆ. 20 ಹಾಗೂ 22ರಂದು ನಡೆಯಲಿವೆ. ಎಲ್ಲ ಪಂದ್ಯಗಳೂ ಭಾರತೀಯ ಕಾಲಮಾನದ ಪ್ರಕಾರ ಮಧ್ಯಾಹ್ನ 1 ಗಂಟೆಗೆ ಆರಂಭವಾಗಲಿವೆ.

ತಂಡಗಳು: ಭಾರತ: ಕೆ.ಎಲ್. ರಾಹುಲ್ (ನಾಯಕ), ಶಿಖರ್ ಧವನ್ (ಉಪನಾಯಕ), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಆವೇಶ್ ಖಾನ್, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ದೀಪಕ್ ಚಾಹರ್.

ಜಿಂಬಾಬ್ವೆ: ರೆಗಿಸ್ ಚಕಾಬ್ವಾ (ನಾಯಕ), ರಿಯಾನ್ ಬರ್ಲ್, ತನಾಕಾ ಚಿವಾಂಗಾ, ಬ್ರಾಡ್ಲಿ ಇವಾನ್ಸ್, ಲೂಕ್ ಜಾಂಗ್ವೆ, ಇನೊಸೆಂಟ್ ಕೈಯಾ, ತಕುಡಾವಾಂಶೆ ಕೈಟಾನೊ, ಕ್ಲೈವ್ ಮೆಡಾಂಡೆ, ವೆಸ್ಲಿ ಮೆಡೆವೆರೆ, ಟ್ಯಾಡಿವನಾಶೆ ಮರುಮನಿ, ಜಾನ್ ಮಸಾರಾ, ಟೋನಿ ಮುನ್ಯಾಂಗೊ, ರಿಚರ್ಡ್ ಎನ್‌ಗರ್ವಾ, ವಿಕ್ಟರ್ ನಯುಚಿ, ಸಿಕಂದರ್ ರಝಾ, ಮಿಲ್ಟನ್ ಶುಂಭಾ, ಡೊನಾಲ್ಡ್ ತಿರಿಪಾನೊ

ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಆಟಗಾರರು ಟ್ರೊಫಿ ಜೊತೆಗಿರುವುದು. ನಿಂತವರು (ಎಡದಿಂದ) ಸಿದ್ಧಾರ್ಥ ಗುಂಟುರಿ, ಕೆ.ಕೆ.ಅಭಿಷೇಕ್, ಲಕ್ಷ್ ಚೆಂಗಪ್ಪ, ಆರಾಧನಾ ಬಾಲಚಂದ್ರ, ಪ್ರೇರಣಾ ಶೇಟ್, ದಿಯಾ ಭೀಮಯ್ಯ (ಕುಳಿತವರು) ಮಯುಖ್, ಮೌನಿತಾ, ಅಭಿನವ್ ಗಾರ್ಗ್, ಜೇಡ್ ಅನಿಲ್, ಅದಿತ್ ದೀಪಕ್, ವೃದ್ಧಿ ಪೊನ್ನಮ್ಮ ಇದ್ದಾರೆ

ಅಭಿನವ್, ಅಭಿಷೇಕ್‌ಗೆ ಪ್ರಶಸ್ತಿ

ದಾವಣಗೆರೆ: ಅಗ್ರಶ್ರೇಯಾಂಕದ ಆಟಗಾರರಾದ ಅಭಿನವ್ ಗಾರ್ಗ್ ಹಾಗೂ ಕೆ.ಕೆ. ಅಭಿಷೇಕ್ ಅವರು ನೇತಾಜಿ ಸುಭಾಷಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಮುಕ್ತಾಯಗೊಂಡ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 15 ಹಾಗೂ 17 ವರ್ಷದೊಳಗಿನ ವಿಭಾಗಗಳಲ್ಲಿ ಪ್ರಶಸ್ತಿ ಡಬಲ್ ಸಾಧನೆ ಮಾಡಿದರು.

ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ನಡೆದ ಯೊನೆಕ್ಸ್–ಸನ್‌ರೈಸ್ ಟೂರ್ನಿಯ 17 ವರ್ಷದೊಳಗಿನ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಪ್ರಥಮ ಶ್ರೇಯಾಂಕದ ಅಭಿಷೇಕ್ 21–14, 27–25ರಲ್ಲಿ ಪ್ರವರರ್ಚಿತ್ ರುದ್ರಾಕ್ಷಲ ಮಟಂ (10ನೇ ಶ್ರೇಯಾಂಕ) ಅವರನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡರು.

17 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅಭಿಷೇಕ್ – ಲಕ್ಷ್ ಚೆಂಗಪ್ಪ ಎಂ.ಎ (3ನೇ ಶ್ರೇಯಾಂಕ) ಜೋಡಿಯು 21–18,19–21,21–16ರಲ್ಲಿ ಸುಮಿತ್ – ಕ್ರಿಸ್ ಆಂಜೆನ್ ಬಾಪ್ಟಿಸ್ಟ್ (5ನೇ ಶ್ರೇಯಾಂಕ) ಪರಾಭವಗೊಳಿಸಿತು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅಗ್ರಶ್ರೇಯಾಂಕಿತ ಆಟಗಾರ್ತಿ ಪ್ರೇರಣಾ ಎನ್. ಶೇಟ್ ಅವರು 21–11, 21–12ರಲ್ಲಿ ನಾಲ್ಕನೇ ಶ್ರೇಯಾಂಕದ ಮೌನಿತಾ ಎ.ಎಸ್. ಅವರನ್ನು ಮಣಿಸುವ ಮೂಲಕ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಆರಾಧನಾ ಬಾಲಚಂದ್ರ – ಪ್ರೇರಣಾ ಎನ್. ಶೇಟ್ ಜೋಡಿಯು ಪ್ರತೀಕ್ಷಾ ರಾಜ್–ಅಶ್ವತಿ ರಚೇಲ್ ವರ್ಗೀಸ್ ತಂಡವನ್ನು 21–14, 21–9ರಲ್ಲಿ ಸೋಲಿಸಿತು. ಮಿಶ್ರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಸಿದ್ಧಾರ್ಥ ಗುಂಟುರಿ–ಮೌನಿತಾ ಎ.ಎಸ್. ತಂಡವು 21–14, 21–15ರಲ್ಲಿ ಅಭಿಷೇಕ–ಆರಾಧನಾ ಬಾಲಚಂದ್ರ ಜೋಡಿಯನ್ನು ಪರಾಭವಗೊಳಿಸಿತು.

15 ವರ್ಷದೊಳಗಿನವರ ವಿಭಾಗ: ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಅಭಿನವ್ ಗಾರ್ಗ್ ಅವರು ಧ್ಯಾನ್ ಸಂತೋಷ್ ಅವರನ್ನು 21–7, 21–12ರ ನೇರ ಸೆಟ್‌ಗಳಿಂದ ಪರಾಭವಗೊಳಿಸುವ ಮೂಲಕ ಪ್ರಶಸ್ತಿ ಗೆದ್ದುಕೊಂಡರು.

ಬಾಲಕರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಮಯುಖ್ ಡಿ.ಬಿ.–ಅಭಿನವ್ ಗಾರ್ಗ್ ಜೋಡಿಯು ಪವನ್ ಎಸ್.–ಪುನೀತ್ ಎಸ್. ಜೋಡಿಯನ್ನು 21–14, 19–21, 21–18ರಲ್ಲಿ ಮಣಿಸಿತು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ದಿಯಾ ಭೀಮಯ್ಯ ಅವರು 21–21, 21–17ರಲ್ಲಿ ಜೇಡ್ ಅನಿಲ್ (6ನೇ ಶ್ರೇಯಾಂಕ) ಅವರನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಡಬಲ್ಸ್‌ನಲ್ಲಿ ವೃದ್ಧಿ ಪೊನ್ನಮ್ಮ ಬಿ.ವಿ.– ಅದಿತಿ ದೀಪಕ್ ರಾಜ್ ಜೋಡಿಯು ಜೇಡ್ ಅನಿಲ್– ದಿವ್ಯಾ ಭೀಮಯ್ಯ ತಂಡವನ್ನು 21–12, 21–15ರಲ್ಲಿ ಮಣಿಸಿತು. ಮಿಶ್ರ ಡಬಲ್ಸ್‌ನಲ್ಲಿ ಮಯುಖ್ ಡಿ.ಬಿ.–ಜೇಡ್ ಅನಿಲ್ ಜೋಡಿಯು ಜಯ ಸಾಧಿಸಿತು.

ಸಿಎಸ್‌ಕೆ ಒಡೆತನದ ತಂಡಕ್ಕೆ ಆರ್‌ಸಿಬಿ ನಾಯಕ!

ಫಫ್ ಡುಪ್ಲೆಸಿ

ನವದೆಹಲಿ(ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡದ ನಾಯಕ ಫಫ್ ಡುಪ್ಲೆಸಿ ಅವರು ಚೆನ್ನೈ ಸೂಪರ್ ಕಿಂಗ್ಸ್ ಫ್ರ್ಯಾಂಚೈಸಿ ಒಡೆತನದ ಜೋಹಾನ್ಸ್‌ಬರ್ಗ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಜೋಹಾನ್ಸ್‌ಬರ್ಗ್ ತಂಡವು ಹೊಸದಾಗಿ ಆರಂಭವಾಗಲಿರುವ ದಕ್ಷಿಣ ಆಫ್ರಿಕಾ ಟಿ20 ಲೀಗ್ ಟೂರ್ನಿಯಲ್ಲಿ ಆಡಲಿದೆ. 2011ರಿಂದ 2021ರವರೆಗೂ ಫಫ್ ಡುಪ್ಲೆಸಿ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿದ್ದರು. ಈ ತಂಡವು ಇಂಗ್ಲೆಂಡ್‌ನ ಮೋಯಿನ್ ಅಲಿ ಅವರನ್ನೂ ಸೇರ್ಪಡೆ ಮಾಡಿಕೊಂಡಿದೆ ಎನ್ನಲಾಗಿದೆ. ಅಲಿ ಕೂಡ ಸದ್ಯ ಚೆನ್ನೈ ತಂಡದಲ್ಲಿದ್ದಾರೆ.

ನೂತನ ಲೀಗ್‌ನಲ್ಲಿ ಆಡಲಿರುವ ಆರು ತಂಡಗಳಿಗೂ ಆಟಗಾರರ ಆಯ್ಕೆ ಮಾಡಿಕೊಳ್ಳಲು ಬುಧವಾರ ಕೊನೆಯ ದಿನವಾಗಿತ್ತು. 2023ರ ಜನವರಿ ಹಾಗೂ ಫೆಬ್ರುವರಿಯಲ್ಲಿ ಟೂರ್ನಿಯು ಆಯೋಜನೆಗೊಂಡಿದೆ. ಇದರಲ್ಲಿರುವ ಆರು ತಂಡಗಳನ್ನೂ ಈಚೆಗೆ ಐಪಿಎಲ್ ತಂಡಗಳ ಮಾಲೀಕರೇ ಖರೀದಿಸಿದ್ದರು.

ಎಂಐ ಕೇಪ್‌ಟೌನ್ ತಂಡದಲ್ಲಿ ಮುಂಬೈ ಇಂಡಿಯನ್ಸ್ ಒಡೆತನ ಹೊಂದಿದೆ. ಉಳಿದಂತೆ ಡರ್ಬನ್, ಗೆಬೆರಾ, ಪಾರ್ಲ್ ಹಾಗೂ ಪ್ರಿಟೋರಿಯಾ ತಂಡಗಳನ್ನು ಕ್ರಮವಾಗಿ ಲಖನೌ ಸೂಪರ್ ಜೈಂಟ್ಸ್, ಸನ್‌ರೈಸರ್ಸ್ ಹೈದರಾಬಾದ್, ರಾಜಸ್ಥಾನ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಫ್ರ್ಯಾಂಚೈಸಿಗಳು ಖರೀದಿಸಿವೆ.

ಕೇಪ್‌ಟೌನ್‌ಗೆ ರಶೀದ್, ರಬಾಡ: ಅಫ್ಗಾನಿಸ್ತಾನದಕ್ರಿಕೆಟ್ ತಾರೆ ರಶೀದ್ ಖಾನ್, ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ ಹಾಗೂ ಇಂಗ್ಲೆಂಡ್ ಬ್ಯಾಟರ್ ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನು ಎಂಐ ಕೇಪ್‌ಟೌನ್ ಸೇರ್ಪಡೆ ಮಾಡಿಕೊಂಡಿದೆ. ಡೇವಾಲ್ಡ್ ಬ್ರೆವಿಸ್ ಮತ್ತು ಆಲ್‌ರೌಂಡರ್ ಸ್ಯಾಮ್ ಕರನ್ ಅವರನ್ನೂ ಫ್ರ್ಯಾಂಚೈಸ್‌ಗೆ ನೇರ ಒಪ್ಪಂದದ ಮೂಲಕ ಸೇರಿಸಿಕೊಳ್ಳಲಾಗಿದೆ.

ಜೆಎಸ್‌ಡಬ್ಲ್ಯು ಜಯಭೇರಿ

ಮೈಸೂರು: ಹೊಂದಾಣಿಕೆಯ ಆಟವಾಡಿದ ಜೆಎಸ್‌ಡಬ್ಲ್ಯು ಬೆಂಗಳೂರು ತಂಡದವರು ಸೂಪರ್ ಡಿವಿಷನ್ ತಂಡಗಳಿಗಾಗಿ ಇಲ್ಲಿ ನಡೆಯುತ್ತಿರುವ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಗೆದ್ದರು.

ಗುರುವಾರ ನಡೆದ ಪಂದ್ಯದಲ್ಲಿ ಜೆಎಸ್‌ಡಬ್ಲ್ಯು 5–0 ಗೋಲುಗಳಿಂದ ಕೊಡಗು ಎಫ್‌ಸಿ ತಂಡವನ್ನು ಮಣಿಸಿತು.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ವಿವೇಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡದವರು ಇಲ್ಲಿ ನಡೆಯುತ್ತಿರುವ 16 ವರ್ಷದೊಳಗಿನವರ ರಾಜ್ಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿವೇಕ್ಸ್ 68–50 ರಲ್ಲಿ ಎಂಸಿಎಚ್‌ಎಸ್ ತಂಡವನ್ನು ಮಣಿಸಿತು. ಅಶ್ವಿನ್ (26 ಪಾಯಿಂಟ್ಸ್) ಮತ್ತು ಮನೋಜ್ (14) ಅವರು ವಿವೇಕ್ಸ್ ಗೆಲುವಿಗೆ ಕಾರಣರಾದರು.

ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ವಿಎನ್‌ಎಸ್‌ಸಿ 58–41 ರಲ್ಲಿ ಎಂಎನ್‌ಕೆ ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು. ವಿಜಯಿ ತಂಡದ ಪರ ದಕ್ಷ್ (21) ಹಾಗೂ ಆಯುಷ್ (20) ಉತ್ತಮ ಆಟವಾಡಿದರು.

ಎಂಟರಘಟ್ಟದ ಇತರ ಪಂದ್ಯಗಳಲ್ಲಿ ಬೀಗಲ್ಸ್ ಕ್ಲಬ್ 41–37 ರಲ್ಲಿ ಬಿಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ; ಪಿಪಿಸಿ 64–55 ರಲ್ಲಿ ಕೋರಮಂಗಲ ಎಸ್‌ಸಿ ವಿರುದ್ಧ ಜಯ ಪಡೆದವು.

ಬಾಲಕಿಯರ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ 64–51 ರಲ್ಲಿ ಜೆಎಸ್‌ಸಿ ತಂಡವನ್ನು ಮಣಿಸಿ ಎಂಟರಘಟ್ಟ ಪ್ರವೇಶಿಸಿತು. ನಕ್ಷತ್ರ (17) ಮತ್ತು ನಿಧಿ (13) ಉತ್ತಮ ಆಟವಾಡಿದರು.

ಎಸ್. ಬ್ಲೂಸ್ 72–54 ರಲ್ಲಿ ಡಿವೈಇಎಸ್ ವಿಜಯಪುರ ವಿರುದ್ಧ; ಡಿವೈಇಎಸ್ ಮೈಸೂರು 42–31 ರಲ್ಲಿ ಬೀಗಲ್ಸ್ ವಿರುದ್ಧ; ಬಿಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ 43–28 ರಲ್ಲಿ ಎಂಎನ್‌ಕೆ ರಾವ್ ಕ್ಲಬ್ ವಿರುದ್ಧ; ರಾಜಮಹಲ್ ಕ್ಲಬ್ 57–28 ರಲ್ಲಿ ಆರ್ಯನ್ಸ್ ಮೈಸೂರು ವಿರುದ್ಧ ಗೆದ್ದವು.

Infosys
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳುವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2015–16ರಲ್ಲಿ ಘೋಷಿಸಲಾದ ಮಧ್ಯಮಾವಧಿ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಸಹ ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ನವೆಂಬರ್ 17, 2022** ರಂದು ವರ್ಗಾಯಿಸಲಾಗುವುದು ಇಲ್ಲವೇ ಜಮಾ ಮಾಡಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

ಅ) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂಚಾಲಿತವಾಗಿ ರದ್ದಾಗುತ್ತವೆ.

ಆ) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ನವೆಂಬರ್ 11, 2022**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಮಾಡುತ್ತದೆ. ನಿಯಮಾವಳಿಗನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಭಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯುಲು ಕಂಪನಿಯಿಂದ ಆ ಕುರಿತ ಹಕ್ಕುಪತ್ರವನ್ನು ಪಡೆದುಕೊಂಡು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್ ಅಧಿಕಾರಿಗಳಿಂದ ಮರಳಿ ಪಡೆದುಕೊಳ್ಳಬಹುದು ಎಂಬುದನ್ನು ಗಮನಿಸಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪ ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಹಿಂದಿನ ಕೆಫಿನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್) ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರವ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ – 500032. ದೂರವಾಣಿ: +91 40 6716 2222 ಅಥವಾ ಎ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಆಗಸ್ಟ್ 11, 2022 **ಎ.ಜಿ.ಎಸ್. ಮಣಿಕಂಠ**
ಬೆಂಗಳೂರು, ಭಾರತ ಕಂಪನಿ ಕಾರ್ಯದರ್ಶಿ

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ
JNCASR Azadi Ka Amrit Mahotsav
ಜಕ್ಕೂರು, ಬೆಂಗಳೂರು – 560064 ಕರ್ನಾಟಕ, ಭಾರತ
ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯುತ್ತ ಸಂಸ್ಥೆ. (ಪರಿಗಣಿತ ವಿಶ್ವವಿದ್ಯಾನಿಲಯ)

ಜಾಹೀರಾತು ಸಂಖ್ಯೆ: ಜೆಎನ್‌ಸಿ/ಎಬಿ/08/2022 ದಿನಾಂಕ: 12.08.2022

ಅಧಿಸೂಚನೆ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಯಂ ಹಾಗೂ ಪರಿಗಣಿತ ವಿಶ್ವವಿದ್ಯಾನಿಲಯದ್ದಾಗಿರುವ ಜೆಎನ್‌ಸಿಎಎಸ್‌ಆರ್ ಸಂಸ್ಥೆಯು, ಸೀಮಿತ ಅವಧಿಗೆ ಗುತ್ತಿಗೆ ಆಧಾರದಲ್ಲಿ, **ಕನ್ಸಲ್ಟಂಟ್ (ಅಕೌಂಟ್ಸ್ & ಫೈನಾನ್ಸ್)** ಗುತ್ತಿಗೆ ಆಧಾರದಲ್ಲಿ ಸೀಮಿತ ಅವಧಿಗೆ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ ವೆಬ್‌ಸೈಟ್ ಪರಿಶೀಲಿಸಿರಿ:
https://www.jncasr.ac.in/openings/ administrative-staff.
ಯಾವುದೇ ಸ್ಪಷ್ಟೀಕರಣ/ಸಹಾಯಕ್ಕಾಗಿ ಸಂಪರ್ಕಿಸಿ (080) 2208 2749/2750

ಸಹಿ/–
ಆಡಳಿತಾಧಿಕಾರಿ
ಜೆಎನ್‌ಸಿಎಎಸ್‌ಆರ್

ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (CSG)
Centre for Smart Governance – Empowering Governance
(ಇ–ಆಡಳಿತ ಸಚಿವಾಲಯ, ಸಿಆಸುಇ (ಇ–ಆಡಳಿತ), ಇದರ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ 1960ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ)
1ನೇ ಮಹಡಿ, ಟಿಟಿಎಂಸಿ ಯಶವಂತಪುರ, ಬೆಂಗಳೂರು – 560022

ಸಂಖ್ಯೆ: ಸಿಎಸ್‌ಜಿ/001/ಹೆಚ್.ಆರ್.ಡಿ/2022–23 ದಿನಾಂಕ: 12.08.2022

ಅಧಿಸೂಚನೆ

ಮಾಹಿತಿ ತಂತ್ರಜ್ಞಾನ (IT/ICT) ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ಸಂಸ್ಥೆಯಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- ಪ್ರಾಜೆಕ್ಟ್ ಮ್ಯಾನೇಜರ್ (Project Manager) – 06
- ಪ್ರಾಜೆಕ್ಟ್ ಲೀಡ್ (Project Lead) – 10
- ಬಿಸಿನೆಸ್ ಅನಲಿಸ್ಟ್ (Business Analyst) - 04
- ಡೇಟಾಬೇಸ್ ಅಡ್ಮಿನಿಸ್ಟ್ರೇಟರ್ (Database Administrator) - 02
- ಡೇಟಾಬೇಸ್ ಡಿಸೈನರ್ (Database designer) - 05
- ಆಪರೇಷನ್ಸ್ ಮ್ಯಾನೇಜರ್ (Operations Manager) - 03
- ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ (Senior Software Engineer) - 09
- ಸಾಫ್ಟ್‌ವೇರ್ ಇಂಜಿನಿಯರ್ (Software Engineer) - 73
- ಸೊಲ್ಯೂಷನ್ ಆರ್ಕಿಟೆಕ್ಟ್ (Solution Architect) - 02
- ಸಿಸ್ಟಮ್ ಅಡ್ಮಿನಿಸ್ಟ್ರೇಟರ್ (System Administrator) - 02
- ಟೆಸ್ಟ್ ಇಂಜಿನಿಯರ್ (Test Engineer) - 12

ಆಸಕ್ತ ಅಭ್ಯರ್ಥಿಗಳು ತಮ್ಮ CV ಗಳನ್ನು **careerscsg@karnataka.gov.in** ಗೆ **ದಿನಾಂಕ: 31–08–2022** ರೊಳಗೆ ಇ–ಮೇಲ್ ಮುಖಾಂತರ ಕಳುಹಿಸತಕ್ಕದ್ದು. ವಿದ್ಯಾರ್ಹತೆ ಮತ್ತು ಸೇವಾ ಅವಧಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ **https://csg.karnataka.gov.in** ಗೆ ಭೇಟಿ ನೀಡುವುದು.

ಸಹಿ/–
ಕಾರ್ಯಕಾರಿ ನಿರ್ದೇಶಕರು
DIPR/CP/1771/BCPL/2022-23 ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾವಪೂರ್ಣ ಶ್ರದ್ಧಾಂಜಲಿ

ದಿ॥ ಬಾಬು ಮೋಹನರೆಡ್ಡಿ

(ಜನನ: 01.11.2002 ● ಮರಣ: 10.08.2022)

ಇವರ ಅಂತ್ಯಕ್ರಿಯೆಯನ್ನು ನಾಳೆ 12.08.2022ರಂದು ತಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.

AVN Corner, No.2, Ambalipura, H.S.R. Post, Bengaluru - 560 102.

ಇಂತಿ ದುಃಖತಪ್ತರು: ಕುಟುಂಬವರ್ಗದವರು ಹಾಗೂ ಸ್ನೇಹಿತರು

ಕಿವೀಸ್ ತಂಡದಲ್ಲಿ ವರ್ಣದ್ವೇಷ: ಟೇಲರ್

ರಾಸ್ ಟೇಲರ್

ಲಂಡನ್ (ಎಎಫ್‌ಪಿ): ತಾವು ಕೂಡ ಜನಾಂಗೀಯ ನಿಂದನೆಗೆ ಗುರಿಯಾಗಿರುವುದಾಗಿ ನ್ಯೂಜಿಲೆಂಡ್ ತಂಡದ ಮಾಜಿ ಆಟಗಾರ ರಾಸ್ ಟೇಲರ್ ಹೇಳಿದ್ದಾರೆ.

38 ವರ್ಷದ ಟೇಲರ್ ಕಳೆದ ಏಪ್ರಿಲ್‌ನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಗುರುವಾರ ಬಿಡುಗಡೆಯಾದ ತಮ್ಮ ಆತ್ಮಚರಿತ್ರೆ 'ಬ್ಲ್ಯಾಕ್ ಆ್ಯಂಡ್ ವೈಟ್' ಕೃತಿಯಲ್ಲಿ ಟೇಲರ್ ಈ ವಿಷಯವನ್ನು ಉಲ್ಲೇಖಿಸಿದ್ದಾರೆ.

'ನ್ಯೂಜಿಲೆಂಡ್ ತಂಡದ ಡ್ರೆಸಿಂಗ್ ರೂಮ್‌ನಲ್ಲಿ ಸಹ ಆಟಗಾರರಿಂದಲೇ ಜನಾಂಗೀಯ ನಿಂದನೆಗಳನ್ನು ಅನುಭವಿಸಿದ್ದೇನೆ. ಬೇರೆ ಬೇರೆ ರೀತಿಯ ನಿಂದನೆಗಳನ್ನು ಕೇಳುತ್ತಲೇ ಇದ್ದೆ. ವೆನಿಲಾದಲ್ಲಿ ಕಂದು ಮುಖ ಎಂದು ಅಣಕಿಸುತ್ತಿದ್ದರು. ನಾನು ಅರ್ಧ ಮಾತ್ರ ಒಳ್ಳೆಯ ವ್ಯಕ್ತಿ ಎಂದು ಒಬ್ಬ ಸಹ ಆಟಗಾರ ಹೇಳುತ್ತಿದ್ದ. ಇನ್ನೂ ಕೆಲವರು ನನ್ನ ಮೂಲಜನಾಂಗದ ಕುರಿತು ಅಣಕವಾಡಿದ್ದು ಇದೆ' ಎಂದು ಟೇಲರ್ ಬರೆದಿದ್ದಾರೆ.

ಟೇಲರ್ 16 ವರ್ಷಗಳ ಕಾಲ ಕಿವೀಸ್ ತಂಡದಲ್ಲಿ ಆಡಿದ್ದರು. ಅವರು 112 ಟೆಸ್ಟ್‌ಗಳಿಂದ 7683 ರನ್‌ಗಳನ್ನು ಸೇರಿಸಿದ್ದರು. ಸುಮಾರು ಎರಡು ವರ್ಷ ತಂಡದ ನಾಯಕರೂ ಆಗಿದ್ದರು.

ಟೇಲರ್ ಆರೋಪಗಳ ತನಿಖೆಗೆ ನ್ಯೂಜಿಲೆಂಡ್ ಕ್ರಿಕೆಟ್ ಮುಂದಾಗಿದೆ.

ಇಂದಿನಿಂದ ಚೊಚ್ಚಲ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್

ಟಸ್ಕರ್ಸ್– ಬುಲ್ಸ್ ಪೈಪೋಟಿ

ಪ್ರಜಾವಾಣಿ ವಾರ್ತೆ

ಬಂಡೀಪುರ ಟಸ್ಕರ್ಸ್ ಪರ ಆಡಲಿರುವ ಅಭಿಷೇಕ್ ಯೆಲಿಗಾರ್

ಬೆಂಗಳೂರು: ರಾಜ್ಯದ ಯುವ ಬ್ಯಾಡ್ಮಿಂಟನ್ ಆಟಗಾರರಿಗೆ ಪ್ರತಿಭೆ ತೋರಿಸಲು ವೇದಿಕೆ ಒದಗಿಸಿರುವ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್‌ಗೆ (ಜಿಪಿಬಿಎಲ್) ಶುಕ್ರವಾರ ಚಾಲನೆ ಲಭಿಸಲಿದೆ.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆಯಲಿರುವ ಮೊದಲ ಪಂದ್ಯದಲ್ಲಿ ಬಂಡೀಪುರ ಟಸ್ಕರ್ಸ್ ಮತ್ತು ಮಂಡ್ಯ ಬುಲ್ಸ್ ತಂಡಗಳು ಎದುರಾಗಲಿವೆ. ಸಂಜೆ ಕೊಡಗು ಟೈಗರ್ಸ್–ಮಂಗಳೂರು ಶಾರ್ಕ್ಸ್ ಪೈಪೋಟಿ ನಡೆಸಲಿವೆ.

ಬಂಡೀಪುರ ತಂಡಕ್ಕೆ ಮಾಜಿ ರಾಷ್ಟ್ರೀಯ ಚಾಂಪಿಯನ್ ಆಟಗಾರ್ತಿ ಜ್ವಾಲಾ ಗುಟ್ಟಾ ಮಾರ್ಗದರ್ಶನ ನೀಡುತ್ತಿದ್ದಾರೆ. ಮಂಡ್ಯ ತಂಡವು ಬಿ.ಸಾಯಿ ಪ್ರಣೀತ್ ಅವರ ಮಾರ್ಗದರ್ಶನದಲ್ಲಿ ಆಡಲಿದೆ.

ಅಭಿಷೇಕ್ ಯೆಲಿಗಾರ್ ಮತ್ತು ಡೇನಿಯಲ್ ಫರೀದ್ ಅವರನ್ನೊಳಗೊಂಡ ಟಸ್ಕರ್ಸ್, ಗೆಲುವಿನ ನೆಚ್ಚಿನ ತಂಡ ಎನಿಸಿಕೊಂಡಿದೆ. ಬುಲ್ಸ್ ತಂಡವು ಸಾಯಿ ಪ್ರತೀಕ್ ಮತ್ತು ಆಶಿತ್ ಸೂರ್ಯ ಅವರ ಮೇಲೆ ಹೆಚ್ಚಿನ ಭರವಸೆ ಇರಿಸಿಕೊಂಡಿದೆ.

ಲೀಗ್ ಹಂತದ ಪಂದ್ಯಗಳು ಆ. 17ರ ವರೆಗೆ ನಡೆಯಲಿವೆ. ಪ್ರತಿ ದಿನ ಎರಡು ಪಂದ್ಯಗಳು ನಡೆಯಲಿದ್ದು, ಕ್ರಮವಾಗಿ ಮಧ್ಯಾಹ್ನ 3 ಮತ್ತು ಸಂಜೆ 6ಕ್ಕೆ ಆರಂಭವಾಗಲಿವೆ.

ಕಣದಲ್ಲಿ ಎಂಟು ತಂಡಗಳು: ಚೊಚ್ಚಲ ಲೀಗ್‌ನಲ್ಲಿ ಒಟ್ಟು ಎಂಟು ತಂಡಗಳು ಪಾಲ್ಗೊಂಡಿವೆ. ಮೊದಲ ದಿನ ಕಣಕ್ಕಿಳಿಯುವ ತಂಡಗಳು ಅಲ್ಲದೆ ಬೆಂಗಳೂರು ಲಯನ್ಸ್, ಮಲ್ನಾಡ್ ಫಾಲ್ಕನ್ಸ್, ಮೈಸೂರು ಪ್ಯಾಂಥರ್ಸ್ ಮತ್ತು ಕೆಜಿಎಫ್ ವೂಲ್ವ್ಸ್ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ.

ಟೂರ್ನಿಯ ಮಾದರಿ: ಜಿಪಿಬಿಎಲ್ ಟೂರ್ನಿ ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ನಡೆಯಲಿದೆ. ಅಗ್ರ ನಾಲ್ಕು ಸ್ಥಾನಗಳನ್ನು ಪಡೆಯುವ ತಂಡಗಳು ನಾಕೌಟ್ ಹಂತಕ್ಕೆ ಪ್ರವೇಶಿಸಲಿವೆ.

ಮುಖ್ಯಾಂಶಗಳು

- ಕಣದಲ್ಲಿ ಒಟ್ಟು ಎಂಟು ತಂಡಗಳು
- ಆ. 17ರ ವರೆಗೆ ಲೀಗ್ ಪಂದ್ಯಗಳು

ಇಂದಿನ ಪಂದ್ಯಗಳು: ಬಂಡೀಪುರ ಟಸ್ಕರ್ಸ್–ಮಂಡ್ಯ ಬುಲ್ಸ್ (ಮಧ್ಯಾಹ್ನ 3); ಕೊಡಗು ಟೈಗರ್ಸ್–ಮಂಗಳೂರು ಶಾರ್ಕ್ಸ್ (ಸಂಜೆ 6)

ನೇರ ಪ್ರಸಾರ: ಯೂರೊ ಸ್ಪೋರ್ಟ್ಸ್

ಕುಸ್ತಿ ತಂಡದ ಆಯ್ಕೆ 15, 16ರಂದು

ದಾವಣಗೆರೆ: ಹರಿಯಾಣದ ರೊಹ್ಟಕ್ ಹಾಗೂ ಕೇರಳದ ಕೊಚ್ಚಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕುಸ್ತಿ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ರಾಜ್ಯ ಕುಸ್ತಿ ತಂಡದ ಆಯ್ಕೆ ಪ್ರಕ್ರಿಯೆ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಕನಕ ಗುರುಪೀಠ ಶಾಖಾಮಠದ ಆವರಣದಲ್ಲಿ ಆಗಸ್ಟ್ 15 ಮತ್ತು 16ರಂದು ನಡೆಯಲಿದೆ.

ರೊಹ್ಟಕ್‌ನಲ್ಲಿ ಆಗಸ್ಟ್ 24ರಿಂದ 26ರವರೆಗೆ 15 ವರ್ಷ ಮತ್ತು 20 ವರ್ಷದ ಒಳಗಿನವರ ಫೆಡರೇಷನ್ ಕಪ್ ಟೂರ್ನಿ ನಡೆಯಲಿದೆ. ಕೊಚ್ಚಿಯಲ್ಲಿ ಸೆಪ್ಟೆಂಬರ್ 1ರಿಂದ 4ರವರೆಗೆ 23 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಶಿಪ್ ನಡೆಯಲಿದ್ದು, ರಾಜ್ಯ ತಂಡಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳು ಆಧಾರ್ ಕಾರ್ಡ್, ಜನನ ಪ್ರಮಾಣಪತ್ರ, ವೈದ್ಯಕೀಯ ಪ್ರಮಾಣಪತ್ರ ತರುವುದು ಕಡ್ಡಾಯ ಎಂದು ದಾವಣಗೆರೆ ಯುವ ಸಬಲೀಕರಣ ಮತ್ತು ಕ್ರೀಡಾ ವಸತಿಶಾಲೆಯ ಕುಸ್ತಿ ತರಬೇತುದಾರ ವಿನೋದ್‌ಕುಮಾರ್ ತಿಳಿಸಿದ್ದಾರೆ.

ಆ. 15ರಂದು ಬೆಳಿಗ್ಗೆ 7ರೊಳಗೆ ಎಲ್ಲರೂ ಹಾಜರಿರಬೇಕು. ಕರ್ನಾಟಕ ರಾಜ್ಯ ಕುಸ್ತಿ ಸಂಘದ ಅಡ್ಹಾಕ್ ಸಮಿತಿ ಸಹಯೋಗದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಮಾಹಿತಿಗೆ ಮೊಬೈಲ್: 89713 88143 ಮತ್ತು 96320 52765 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ವಿಮಾನದಲ್ಲೇ ಧೂಮಪಾನ ಮಾಡಿದ ಕ್ರೀಡಾಪಟು

ನವದೆಹಲಿ (ಪಿಟಿಐ): ದೇಹದಾರ್ಢ್ಯಪಟು ಬಾಬಿ ಕಟಾರಿಯಾ ಅವರು ಸ್ಪೈಸ್‌ಜೆಟ್ ವಿಮಾನದಲ್ಲಿ ಧೂಮಪಾನ ಮಾಡಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಸಂಬಂಧ ತನಿಖೆ ನಡೆಸುವಂತೆ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಸ್ಪೈಸ್‌ಜೆಟ್ ವಿಮಾನದ ಹಿಂಬದಿಯ ಆಸನದಲ್ಲಿ ಕುಳಿತಿರುವ ಬಾಬಿ, ಲೈಟರ್‌ನಿಂದ ಸಿಗರೇಟ್ ಹಚ್ಚುತ್ತಿರುವ ದೃಶ್ಯವು ವಿಡಿಯೊದಲ್ಲಿದೆ. ನಿಯಮದ ಪ್ರಕಾರ ಪ್ರಯಾಣಿಕರು ವಿಮಾನದಲ್ಲಿ ಲೈಟರ್ ಕೊಂಡೊಯ್ಯುವಂತಿಲ್ಲ. ಧೂಮಪಾನಕ್ಕೂ ಅವಕಾಶ ಇಲ್ಲ.

ಬಾಬಿ –ಟ್ವಿಟರ್ ಚಿತ್ರ

'ಈ ವರ್ಷದ ಜನವರಿ 20ರಂದು ದುಬೈಯಿಂದ ದೆಹಲಿಗೆ ಹೊರಡಲು ಸಿದ್ಧವಾಗಿದ್ದ ಎಸ್‌ಜಿ 706 ವಿಮಾನದಲ್ಲಿ ಈ ಘಟನೆ ನಡೆದಿದೆ. ಪ್ರಯಾಣಿಕರು ವಿಮಾನ ಹತ್ತುವ ವೇಳೆ ಇದು ನಡೆದಿದೆ. ಹೀಗಾಗಿ ಈ ವಿಚಾರ ವಿಮಾನದೊಳಗಿದ್ದ ಸಿಬ್ಬಂದಿ ಗಮನಕ್ಕೆ ಬಂದಿಲ್ಲ. ಈ ವಿಷಯ ತಿಳಿದೊಡನೆ ನಾವು ಸಮಗ್ರ ತನಿಖೆ ಕೈಗೊಂಡಿದ್ದೆವು. ಗುರುಗ್ರಾಮದ ಉದ್ಯೋಗ ವಿಹಾರ ಪೊಲೀಸ್ ಠಾಣೆಯಲ್ಲಿ ಬಾಬಿ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಅವರ ಹೆಸರನ್ನು 15 ದಿನಗಳ ಕಾಲ (ಫೆಬ್ರುವರಿಯಲ್ಲಿ) ನೋ ಫ್ಲೈಯಿಂಗ್ ಪಟ್ಟಿಯಲ್ಲಿ ಸೇರಿಸಲಾಗಿತ್ತು' ಎಂದು ಸ್ಪೈಸ್‌ಜೆಟ್ ಹೇಳಿದೆ.

ಮೊನಾಕೊ ಡೈಮಂಡ್ ಲೀಗ್ ಕೂಟದ ಲಾಂಗ್‌ಜಂಪ್

ಶ್ರೀಶಂಕರ್‌ಗೆ ಆರನೇ ಸ್ಥಾನ

ಮೊನಾಕೊ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಬೆಳ್ಳಿ ಪದಕ ವಿಜೇತ ಭಾರತದ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್, ಮೊನಾಕೊದಲ್ಲಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಆರನೇ ಸ್ಥಾನ ಪಡೆದರು.

ಬುಧವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಅವರು 7.94 ಮೀ. ಸಾಧನೆ ಮಾಡಿದರು. ಶ್ರೀಶಂಕರ್ ಆರು ಆರು ದಿನಗಳ ಹಿಂದೆಯಷ್ಟೆ 8.08 ಮೀ. ಜಿಗಿದು ಕಾಮನ್‌ವೆಲ್ತ್ ಕೂಟದಲ್ಲಿ ಬೆಳ್ಳಿ ಗೆದ್ದು ಇತಿಹಾಸ ನಿರ್ಮಿಸಿದ್ದರು. ಅದೇ ಸಾಧನೆಯನ್ನು ಪುನರಾವರ್ತಿಸಲು ವಿಫಲರಾದರು.

23 ವರ್ಷದ ಶ್ರೀಶಂಕರ್ ತಮ್ಮ ಚೊಚ್ಚಲ ಡೈಮಂಡ್ ಲೀಗ್‌ನ ಮೊದಲ ಪ್ರಯತ್ನದಲ್ಲಿ 7.61 ಮೀ. ಜಿಗಿದರು. ಆ ಬಳಿಕದ ಪ್ರಯತ್ನಗಳಲ್ಲಿ 7.84 ಮೀ. ಮತ್ತು 7.83 ಮೀ. ಸಾಧನೆ ಮೂಡಿಬಂತು. ಐದನೇ ಪ್ರಯತ್ನದಲ್ಲಿ ಅವರ ಉತ್ತಮ ಸಾಧನೆ (7.94 ಮೀ.) ದಾಖಲಾಯಿತು.



ಮುರಳಿ ಶ್ರೀಶಂಕರ್ (ಎಡ) ಮಹಿಳೆಯರ 100 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದ ಫ್ರೇಸರ್ ಪ್ರೈಸ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಕ್ಯೂಬಾದ ಮೈಕೆಲ್ ಮಾಸೊ ಅವರು 8.35 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದುಕೊಂಡರು. ಒಲಿಂಪಿಕ್ ಚಾಂಪಿಯನ್ ಗ್ರೀಸ್‌ನ ಮಿಲ್ಟಿಯಾಡಿಸ್ ಟೆಂಟೊಗ್ಲು (8.31 ಮೀ.) ಬೆಳ್ಳಿ ಹಾಗೂ ಅಮೆರಿಕದ ಮಾರ್ಕಿಸ್ ಡೆಂಡಿ (8.31 ಮೀ.) ಕಂಚು ಪಡೆದರು.

ಶ್ರೀಶಂಕರ್ ಆ.30 ರಂದು ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಟೂರ್ ಸಿಲ್ವರ್ ಲೇಬಲ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಮೈಕದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಅವರು ಮಹಿಳೆಯರ 100 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದರು.

ಟೊರಾಂಟೊಗೆ ಸೆರೆನಾ 'ಗುಡ್‌ಬೈ'

ಟೊರಾಂಟೊ (ಎಎಫ್‌ಪಿ): ಸೆರೆನಾ ವಿಲಿಯಮ್ಸ್ ಅವರು ಡಬ್ಲ್ಯುಟಿಎ ಟೊರಾಂಟೊ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸೋತರು.

ಬುಧವಾರ ನಡೆದ ಪಂದ್ಯದಲ್ಲಿ ಸ್ವಿಟ್ಜರ್‌ಲೆಂಡ್‌ನ ಬೆಲಿಂಡಾ ಬೆನ್ಸಿಕ್ 6–2, 6–4 ರಲ್ಲಿ ಸೆರೆನಾ ಅವರನ್ನು ಮಣಿಸಿದರು. ನಿವೃತ್ತಿ ನಿರ್ಧಾರ ಪ್ರಕಟಿಸಿದ ಬಳಿಕ ಅವರು ಆಡಿದ ಮೊದಲ ಪಂದ್ಯ ಇದಾಗಿತ್ತು.

ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಂ ಟೂರ್ನಿಯ ಬಳಿಕ ನಿವೃತ್ತಿಯಾಗುವುದಾಗಿ ಸೆರೆನಾ ಎರಡು ದಿನಗಳ ಹಿಂದೆ ಪ್ರಕಟಿಸಿದ್ದರು.

ಇದರಿಂದ ಸೆರೆನಾ ಪಂದ್ಯ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದರು. ಪಂದ್ಯದುದ್ದಕ್ಕೂ ಅವರು ಅಮೆರಿಕದ ಆಟಗಾರ್ತಿಗೆ ಬೆಂಬಲ ನೀಡಿದರು.

ಪಂದ್ಯದ ಬಳಿಕ ಸೆರೆನಾ ಅವರನ್ನು ಸಂಘಟಕರು ಅಭಿನಂದಿಸಿದರು. 'ಇಲ್ಲಿ ಆಡುವುದೆಂದರೆ ನನಗಿಷ್ಟ. ಪ್ರತಿ ಬಾರಿಯೂ ಖುಷಿಯಿಂದಲೇ ಇಲ್ಲಿಗೆ ಬರುತ್ತಿದ್ದೆ' ಎಂದು ಸೆರೆನಾ ಭಾವುಕರಾಗಿ ನುಡಿದರು.

ಪಂದ್ಯದ ಬಳಿಕ ಅಂಗಳದಿಂದ ನಿರ್ಗಮಿಸಿದ ಸೆರೆನಾ ವಿಲಿಯಮ್ಸ್ – ಎಎಫ್‌ಪಿ ಚಿತ್ರ

ಮುಂದಿನ ತಿಂಗಳು 41ನೇ ಹುಟ್ಟುಹಬ್ಬ ಆಚರಿಸಲಿರುವ ಸೆರೆನಾ, ಮೊದಲ ಸುತ್ತಿನಲ್ಲಿ ಸ್ಪೇನ್‌ನ ನುರಿಯಾ ಪ್ಯಾರಿಜಸ್ ಅವರನ್ನು ಮಣಿಸಿದ್ದರು.

ಮೆಡ್ವೆಡೆವ್ ಮಣಿಸಿದ ಕಿರ್ಗಿಯೊಸ್ (ಮಾಂಟ್ರಿಯಲ್): ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ಅವರು ಎಟಿಪಿ ಮಾಂಟ್ರಿಯಲ್ ಮಾಸ್ಟರ್ಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ 6-7 (2/7), 6-4, 6-2 ರಲ್ಲಿ ವಿಶ್ವದ ಅಗ್ರ ರ್‍ಯಾಂಕಿಂಗ್‌ನ ಆಟಗಾರ ಡೇನಿಯಲ್ ಮೆಡ್ವೆಡೆವ್ ಅವರನ್ನು ಮಣಿಸಿದರು.